# ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2024
ಬೆಲೆ ರೂ.1



ಸಂಘದಲ್ಲಿ ಆಯೋಜಿಸಲಾದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮಕ್ಕೆ ದೀಪ ಪ್ರಜ್ವಲಿಸಿ ವಿದ್ಯುಕ್ತ ಚಾಲನೆ ನೀಡಿದ ಮುಖ್ಯ ಅತಿಥಿಗಳೊಂದಿಗೆ ಸಂಘದ ಪದಾಧಿಕಾರಿಗಳು ಹಾಗು ಮಹಿಳಾ ಸದಸ್ಯರು



ರಾಜ್ಯ ಸಭಾ ಸದಸ್ಯೆ, ಪದ್ಮಭೂಷಣ ಶ್ರೀಮತಿ ಡಾ. ಸುಧಾ ಮೂರ್ತಿ ಅವರು ಸಂಘಕ್ಕೆ ಭೇಟಿ ನೀಡಿದ ಸಂದರ್ಭ ಅವರೊಂದಿಗೆ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಹಾಗು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಿ.ಎಸ್. ಅರುಣ್




'ಸಾಹಿತ್ಯ ಸಂಜೆ' ಕಾರ್ಯಕ್ರಮದಲ್ಲಿ ಕವಿ ಮತ್ತು ಸಾಹಿತಿ ಗಣ್ಯರ ಸಮಾಗಮ : ಕನ್ನಡದ ಪ್ರೇಮ ಕವಿ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಹಾಗು ಪ್ರಖ್ಯಾತ ಸಾಹಿತಿ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರನ್ನು ಅಭಿನಂದಿಸಿದ ಕ್ಷಣ



ದೇಶದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ರಾಜ್ಯಸಭೆಗೆ ನಾಮ ನಿರ್ದೇಶನಗೊಂಡು, ಉಪರಾಷ್ಟ್ರಪತಿಗಳಾದ ಶ್ರೀ ಜಗದೀಪ್ ಧನಕರ್ ಅವರಿಂದ ರಾಜ್ಯಸಭಾ ಸದಸ್ಯರಾಗಿ ಪದ್ಮಭೂಷಣ ಶ್ರೀಮತಿ (ಡಾ.) ಸುಧಾಮೂರ್ತಿ ಅವರು ಪ್ರಮಾಣ ವಚನ ಸ್ವೀಕರಿಸಿದ ಶುಭ ಸಂದರ್ಭದಲ್ಲಿ ಪತಿ ಶ್ರೀ ಎನ್. ಆರ್. ನಾರಾಯಣ ಮೂರ್ತಿ, ಕೇಂದ್ರ ಸಚಿವರೂ ಹಾಗು ಲೀಡರ್ ಆಫ್ ರಾಜ್ಯಸಭಾ ಆಗಿರುವ ಶ್ರೀ ಪೀಯುಷ್ ಗೊಯಲ್, ರಾಜ್ಯಸಭಾ ಸೆಕ್ರೆಟರಿಯೇಟ್‌ನ ಅಡಿಷನಲ್ ಸೆಕ್ರೆಟರಿ ಆಗಿರುವ ಕನ್ನಡಿಗರಾದ ಡಾ. ಕೆ.ಎಸ್. ಸೋಮಶೇಖರ್ ಮತ್ತಿತರ ಗಣ್ಯರೂ ಹಾಗೂ ಅಧಿಕಾರಿಗಳ ಜೊತೆ ಅವಿಸ್ಮರಣೀಯ ದೃಶ್ಯ.



ಶ್ರೀಮತಿ (ಡಾ.) ಸುಧಾ ಮೂರ್ತಿ ಅವರು ಇತ್ತೀಚೆಗೆ ಸಂಘಕ್ಕೆ ಭೇಟಿ ನೀಡಿದ ಸಂದರ್ಭ, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕೆ ಸುಧಾ ಮೂರ್ತಿ ಅಮ್ಮನವರು 10 ಲಕ್ಷ ರೂಪಾಯಿ ದೇಣಿಗೆ ನೀಡಿದ್ದಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಈ ಹಿಂದೆಯೂ ಗ್ರಂಥಾಲಯಕ್ಕೆ 10 ಲಕ್ಷ ರೂಪಾಯಿ ಧನ ಸಹಾಯವನ್ನು ಅವರು ಮಾಡಿರುವುದನ್ನು ಸ್ಮರಿಸುತ್ತಾ, ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಅವರಿಗೆ ಗೌರವಪೂರ್ಣ ಧನ್ಯವಾದಗಳನ್ನು ಅರ್ಪಿಸುತ್ತಿದೆ.



ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಮಾಜಿ ಲೋಕಸಭಾ ಸಂಸದೆ ಶ್ರೀಮತಿ ತೇಜಸ್ವಿನಿ ಗೌಡ ಅವರು ಭೇಟಿ ನೀಡಿದ್ದರು. ಅವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಅಭಿಮತ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಿ.ಎಸ್. ಅರುಣ್ ಅವರು ಸಂಘದ ಪರವಾಗಿ ಸ್ಮರಣಸಂಚಿಕೆ ನೀಡಿ ಗೌರವಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ವಕ್ತಾರರಾದ ಶ್ರೀ ಅಶ್ವಥ್ ನಾರಾಯಣ ಅವರು ಜೊತೆಗಿದ್ದರು.

# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 34 । ಸಂಚಿಕೆ 7

ಏಪ್ರಿಲ್ 2024



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ

ಕೆ.ಎಸ್. ಮೂರ್ತಿ

ಸದಸ್ಯರು

ಸರವು ಕೃಷ್ಣ ಭಟ್

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು

ಸಿ.ಎಂ. ನಾಗರಾಜ

9811325440

ಉಪಾಧ್ಯಕ್ಷರು

ವಸಂತ ಶೆಟ್ಟಿ ಬೆಳ್ಳಾರೆ

9958697823

ಪೂಜಾ ಪಿ. ರಾವ್

9810882498

ಪ್ರಧಾನ ಕಾರ್ಯದರ್ಶಿ

ರಾಧಾಕೃಷ್ಣ

9818252183

ಖಜಾಂಚಿ

ಆಶಾಲತಾ ಎಂ.

9891249149

ಜಂಟಿ ಕಾರ್ಯದರ್ಶಿಗಳು

ನಾರಾಯಣ ಬಿ.

9868393978

ಅಶ್ವಿನಿ ಬಿ.ಎಸ್.

9036235665

ಸಮಿತಿ ಸದಸ್ಯರು

ಡಾ. ವೆಂಕಟಾಚಲ ಜಿ. ಹೆಗಡೆ

9312712476

ಕೆ.ಎಸ್. ಮೂರ್ತಿ

9871140222

ಪ್ರಭಾಕರ ಮಡ್ಡಿತೋಟ್

9910091978

ನವೀನ್ ಕುಮಾರ್ ವಿ.

9871945819

ಅರುಣ್ ಸಿ.ಎಸ್.

9741282211

ಜಯಶ್ರೀ ಬಸವರಾಜು ಬಿ.ಕೆ.

9560760341

ಶುಭಾ ದೇವಿಪ್ರಸಾದ್

9319762969

ಮಾಲಿನಿ ಪ್ರಹ್ಲಾದ

9910269085

ಎನ್.ಆರ್. ಶ್ರೀನಾಥ

7836954402

ಶಶಿಕಾಂತ ಪಿ. ಪಾಟೀಲ್

9650182413


## ಸಂಪಾದಕೀಯ ಮನದಾಳದಿಂದ...

## 'ಚುನಾವಣೆಯ ಪರ್ವ-ದೇಶದ ಗರ್ವ'

## ಪ್ರಜಾಪ್ರಭುತ್ವದ ಈ ಹಬ್ಬದಲಿ ನಮ್ಮ ಮತದಾನ ದೇಶದ ಪ್ರಗತಿಗೆ ನಾಂದಿಯಾಗಲಿ

ಆತ್ಮೀಯ ಸದಸ್ಯ ಬಂಧುಗಳಿಗೆ ಹಾಗೂ ಅಭಿಮತ ಓದುಗರಿಗೆ ನಮಸ್ಕಾರ.

ಮೊದಲಿಗೆ, ಎಲ್ಲರಿಗೂ ಕಳೆದ ಮಾರ್ಚ್ ತಿಂಗಳಿನಲ್ಲಿ ನಾವೆಲ್ಲರೂ ಸಡಗರ ಸಂಭ್ರಮದಿಂದ ಆಚರಿಸಿದ ಬಣ್ಣಗಳ ಉತ್ಸವ–ಹೋಳಿ ಹಬ್ಬದ ಹಾಗು ನಾರಿ ಶಕ್ತಿಯ ಗೌರವ ಸಂಕೇತವಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹೃದಯಪೂರ್ವಕ ಶುಭಾಶಯಗಳು.

ಬಂಧುಗಳೇ, ಭಾರತೀಯ ಚುನಾವಣಾ ಆಯೋಗ 18ನೇ ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಈಗಾಗಲೇ ಘೋಷಿಸಿದ್ದು, ಚುನಾವಣಾ ನೀತಿ ಸಂಹಿತೆ ದೇಶದಾದ್ಯಂತ ಜಾರಿಯಾಗಿದೆ. ಭಾರತ ಸ್ವಾತಂತ್ರವಾದ ನಂತರ 1951–52 ರಲ್ಲಿ ಮೊದಲ ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಿದ್ದು, 2019ರಲ್ಲಿ 17ನೇ ಲೋಕಸಭೆಗೆ ಚುನಾವಣೆಯಾಗಿದೆ. ಈ ಬಾರಿ ಲೋಕಸಭೆಯ ಒಟ್ಟು 543 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಇದರಲ್ಲಿ ಕರ್ನಾಟಕ ರಾಜ್ಯದ 28 ಕ್ಷೇತ್ರಗಳಿಗೆ ಹಾಗು ದೆಹಲಿಯ 7 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹಣಾಹಣಿ ಆಗಲಿದೆ. ಒಟ್ಟಾರೆ ಏಳು ಹಂತಗಳಲ್ಲಿ ಮತದಾನ ಆಗಲಿದ್ದು ಮೊದಲ ಹಂತದ ಚುನಾವಣೆ ಏಪ್ರಿಲ್ 19 ರಂದು ಹಾಗೂ ಕೊನೆಯ ಹಂತದ ಚುನಾವಣೆ ಜೂನ್ 1ರಂದು ನಡೆಯಲಿದೆ, ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ 26.04.2024 ರಂದು, ಉಳಿದ 14 ಕ್ಷೇತ್ರಗಳಿಗೆ 07.05.2024 ರಂದು ಹಾಗು ದೆಹಲಿಯ 7 ಕ್ಷೇತ್ರಗಳಿಗೆ ಮತ್ತು ಸುತ್ತಮುತ್ತಲಿನ ಎನ್.ಸಿ.ಆರ್. ನಗರದ ಕ್ಷೇತ್ರಗಳಿಗೆ 25.05.2024 ರಂದು ಚುನಾವಣೆ ನಡೆಯಲಿದ್ದು ಚುನಾವಣಾ ಫಲಿತಾಂಶ ಜೂನ್ 4 ರಂದು ಪ್ರಕಟವಾಗಲಿದೆ. ಈ ಪ್ರಜಾಪ್ರಭುತ್ವದ ಹಬ್ಬದಲ್ಲಿ ನಾವೆಲ್ಲರೂ ಉತ್ಸಾಹದಿಂದ ಪಾಲ್ಗೊಂಡು, ನಮ್ಮ ಶಾಸನ ಬದ್ಧ ಹಕ್ಕಾದ ಮತದಾನದ ಅಸ್ತ್ರವನ್ನು ಪ್ರಯೋಗ ಮಾಡಿ, ಉತ್ತಮ ಅಭ್ಯರ್ಥಿಗಳನ್ನು ಮತ್ತು ಜನ ಪ್ರತಿನಿಧಿಗಳನ್ನು ಲೋಕಸಭೆಗೆ ಆಯ್ಕೆ ಮಾಡಬೇಕಾದ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಬನ್ನಿ ಮತದಾನ ಮಾಡಿ ದೇಶದ ಹಿತ, ಅಭಿವೃದ್ಧಿ ಮತ್ತು ಮುನ್ನಡೆಯಲ್ಲಿ ಭಾಗಿಯಾಗೋಣ.

ಇನ್ನು, ಪ್ರತಿ ವರ್ಷ ಏಪ್ರಿಲ್ 1 ಬಂತೆಂದರೆ ಎಲ್ಲರೂ ಕುತೂಹಲದಿಂದ ಎದುರು ನೋಡುವ, ಆನಂದಿಸುವ ದಿನ ಹೊಸ ಆರ್ಥಿಕ ವರ್ಷದ ಆರಂಭ ಒಂದೆಡೆಯಾದರೆ, ಹಾಸ್ಯಮಯವಾಗಿ ಆಪ್ತರನ್ನು, ಸ್ನೇಹಿತರನ್ನು ಮೂರ್ಖರನ್ನಾಗಿ ಮಾಡಿ ಆನಂದಿಸುವ April Fool's Day - (ಮೂರ್ಖರ ದಿನ) ಇನ್ನೊಂದೆಡೆ. 1852ರಲ್ಲಿ ಫ್ರಾನ್ಸ್ ದೇಶದಲ್ಲಿ ಆರಂಭವಾದ ಈ ಮೂರ್ಖರ ದಿನದ ಆಚರಣೆಯನ್ನು ಭಾರತದಾದ್ಯಂತ ಹಾಗೂ ವಿಶ್ವದಲ್ಲೆದೆ ಮಾಡುತ್ತಿರುವುದು ಸಾಮಾನ್ಯವಾಗಿದೆ. ಕೆಲವೊಂದು ಬಾರಿ ಆಚರಣೆಯಲ್ಲಿ ಉಪಯೋಗಿಸುವ ಕಾಲ್ಪನಿಕ ಸಂದರ್ಭಗಳು / ಸುಖದ ದುಃಖದ ಸುದ್ದಿಗಳು/ ನಾಟಕೀಯ ವರ್ತನೆಗಳು ಇತರರಿಗೆ ಮುಜುಗರವಾಗುವ ಸನ್ನಿವೇಶಗಳು ಈ ದಿನದಂದು ಬಂದರೂ, ಅದನ್ನು ಜನರು ಮನ್ನಿಸಿ ಹಾಸ್ಯವಾಗಿಯೇ ತೆಗೆದುಕೊಂಡು ಮುಂದುವರೆಯುವುದು ಸರಿ ಸಾಮಾನ್ಯ. ಹಿಂದೆ ಹಾಸ್ಯ ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ಜೀವನದ ಮಿಡಿತ ತುಡಿತಗಳನ್ನು, ಕಷ್ಟ ಕಾರ್ಪಣ್ಯಗಳನ್ನು ನಿಭಾಯಿಸಲು ಹಾಗು ಜನರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಹಾಸ್ಯ ತುಂಬಾ ನೆರವಾಗುತ್ತಿತ್ತು. ಆದರೆ ಆಧುನಿಕ ಯುಗದ ಯಾಂತ್ರಿಕ ಜೀವನದಲ್ಲಿ ಜನರು ತಮ್ಮ ತಮ್ಮ ಕಾರ್ಯಗಳಲ್ಲಿ ವ್ಯಸ್ತವಾಗಿರುವ ಕಾರಣ ಹಾಸ್ಯ / ಹಾಸ್ಯ ಪ್ರಜ್ಞೆ ಜನರಲ್ಲಿ ಕಡಿಮೆಯಾಗಿರುವುದು ಗಮನಾರ್ಹ ಅಂಶ. ಇದರಿಂದ ಜನರ ಜೀವನಶೈಲಿ ಏರುಪೇರಾಗಿ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬಂದಿದೆ. ತಮ್ಮ ಜೀವನದ ಸಮಸ್ಯೆಗಳಿಂದ ಕೊಂಚ ದೂರವಾಗಲು, ಕಾಮಿಡಿ ನಾಟಕಗಳು, ಹಾಸ್ಯ ಸಿನಿಮಾಗಳು, ಸ್ಟಾಂಡ್‌ಅಪ್ ಕಾಮಿಡಿ ಶೋಗಳು, ಕಾಮಿಡಿ ಕ್ಲಬ್ ಮುಂತಾದವುಗಳಿಗೆ ಜನರು ಮೊರೆ ಹೋಗುತ್ತಿದ್ದಾರೆ. ಹಾಸ್ಯ ನಮ್ಮ ಜೀವನದ ಹಾಸು ಹೊಕ್ಕಾಗಬೇಕು, ಇದರಿಂದ ನಮ್ಮ ಕುಟುಂಬದ ಸದಸ್ಯರೊಂದಿಗೆ, ಸಮಾಜದ ಬಂಧು ಮಿತ್ರರೊಂದಿಗೆ, ಸಹೋದ್ಯೋಗಿಗಳೊಂದಿಗೆ ಉತ್ತಮವಾದ ಸಾಮರಸ್ಯದ ಸಂಬಂಧ ಹೊಂದಲು, ಮಿತೃತ್ವ ಬೆಳೆಸಲು ಶತ್ರುತ್ವ ತಡೆಯಲು ಸಾಧ್ಯವಾಗುತ್ತದೆ ಎನ್ನುವುದು ನನ್ನ ಭಾವನೆ.

ಆತ್ಮೀಯರೇ, ಏಪ್ರಿಲ್ 9 ರಂದು ನಾವೆಲ್ಲರೂ ಹಿಂದೂ ಹೊಸ ವರ್ಷದ ದಿನ ಯುಗಾದಿಯನ್ನು ಬಹಳ ಸಡಗರದಿಂದ ಆಚರಿಸಿದ್ದೇವೆ. ಯುಗಾದಿ ಹಿಂದೂ ಕ್ಯಾಲೆಂಡರಿನ ಚೈತ್ರ ಮಾಸದ ಆರಂಭದ ದಿನ. ಚಾಂದ್ರಮಾನ ಕ್ಯಾಲೆಂಡರಿನ ಪ್ರಕಾರ ಹೊಸ ವರ್ಷದ ಮೊದಲ ದಿನ. ಯುಗಾದಿ ರಾಜವಂಶದವರಿಂದ ಆರಂಭವಾಗಿದೆ ಎಂಬ ಮಾಹಿತಿ ಇದೆ. ಯುಗಾದಿ ಅಂದರೆ ಯುಗದ+ಆದಿ. ಇದು ಸೃಷ್ಟಿಕರ್ತ ಬ್ರಹ್ಮನ ಬ್ರಹ್ಮಾಂಡದ ಹೊಸ ಯುಗದ ಆರಂಭದ ಸಂಕೇತವೂ ಹೌದು. ಶತ ಶತಮಾನಗಳಿಂದ ಆಚರಿಸುತ್ತಿರುವ ಈ ಯುಗಾದಿ ಹಬ್ಬ ಸಾಮಾಜಿಕ, ಸಾಂಸ್ಕೃತಿಕ ಹಾಗು ಆಧ್ಯಾತ್ಮಿಕ ಮಹತ್ವ ಹೊಂದಿದೆ. ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ 'ಯುಗಾದಿ' ಎಂದೂ ಮಹಾರಾಷ್ಟ್ರದಲ್ಲಿ 'ಗುಡಿ ಪಾಡ್ವ' ಎಂದೂ ಈ ಹಬ್ಬದ ಆಚರಣೆಯನ್ನು ಪ್ರತಿ ವರ್ಷ ಈ ರಾಜ್ಯಗಳ ಜನತೆ ಮಾಡುತ್ತಾರೆ. ಇದು ಕನ್ನಡಿಗರು ಆಚರಿಸುವ ವರ್ಷದ ದೊಡ್ಡ ಹಬ್ಬಗಳಲ್ಲಿ ಒಂದು. ಹೊಸ ದೃಷ್ಟಿಕೋನ, ನವೀಕೃತ ಉತ್ಸಾಹದಿಂದ ಕುಟುಂಬದವರೊಂದಿಗೆ, ಸ್ನೇಹಿತರೊಂದಿಗೆ ಪರಸ್ಪರ ಪ್ರೀತಿ ಪ್ರೇಮ, ಗೌರವ ಭಾವನೆಯೊಂದಿಗೆ ಈ ಹಬ್ಬದ ಆಚರಣೆ ಮಾಡಲಾಗುತ್ತಿದೆ. ಯುಗಾದಿಯ ದಿನ ಬೆಳಿಗ್ಗೆ ಎಣ್ಣೆ ಸ್ನಾನ, ಮನೆಯ ಸ್ವಚ್ಛತೆ ಮಾಡಿ, ರಂಗೋಲಿ, ಮಾವಿನ, ಹಲಸಿನ ಎಲೆಗಳ ತೋರಣ ಹಾಕಿ, ಗೃಹಾಂಲಕಾರ, ದೇವರ ಪೂಜೆ, ವಿಶೇಷ ಪಚಿಡಿ, ಹೋಳಿಗೆ, ಪುಳಿಯೋಗರೆ, ಬಗೆ ಬಗೆಯ ಸಿಹಿ ತಿಂಡಿ ತಿನಿಸುಗಳನ್ನು ಮನೆ ಮಂದಿ ಆಸ್ವಾದಿಸುವ ವಿಶಿಷ್ಟ ಸಂದರ್ಭ ಇದಾಗಿದೆ. ನನ್ನ ಬಾಲ್ಯವನ್ನು ನೆನಪಿಸಿಕೊಂಡರೆ ನಮ್ಮ ಮನೆಯಲ್ಲಿ ಎಣ್ಣೆ ಸ್ನಾನ ಮಾಡಿ ಹೊಸ ಉಡುಪು ಧರಿಸಿ, ಹಣೆಗೆ ಕರಿಗೇರಿನ ಎಣ್ಣೆಯನ್ನು ಬೊಟ್ಟು ಇಟ್ಟು (ಹಳೆ ಚರ್ಮ ಸ್ವಲ್ಪ ಸುಟ್ಟು ಹೊಸ ಚರ್ಮ ಕಾಣಿಸಿಕೊಳ್ಳಲು) ದೇವರ ಪೂಜೆ, ಕುಟುಂಬದವರೊಂದಿಗೆ ಬೇವು ಬೆಲ್ಲ, ವಿಶೇಷ ಭೋಜನ ಮಾಡುವುದು, ಸಂಜೆ ಚಂದ್ರನ ದರ್ಶನ ಮಾಡಿ ತಂದೆ ತಾಯಿಯರ, ಹಿರಿಯ ಸದಸ್ಯರ ಕಾಲಿಗೆ ನಮಸ್ಕರಿಸುತ್ತಾ ಅವರ ಆಶೀರ್ವಾದ ಪಡೆಯುತ್ತಿದ್ದುದು ಇನ್ನೂ ಹಚ್ಚ ಹಸಿರಾಗಿದೆ. ಡಾ. ದ.ರಾ. ಬೇಂದ್ರೆಯವರ ಯುಗ ಯುಗಾದಿ ಕಳೆದರೂ.. ಗೀತೆಯನ್ನು ಈ ದಿನ ನಮ್ಮ ನಮ್ಮಲ್ಲೇ ಹಾಡುವುದು ಕುಲವಧು ಚಿತ್ರದ ಲೀಲಾವತಿ ಮತ್ತು ಡಾ. ರಾಜಕುಮಾರ್ ಅಭಿನಯನದ ಯುಗ ಯುಗಾದಿ ಹಾಡನ್ನು ನೋಡಿ ಆನಂದಿಸುವುದು ನಿರಂತರವಾಗಿ ನಡೆಯುತ್ತಿತ್ತು. ಸಾಂಪ್ರದಾಯಿಕ ಆಚರಣೆಯ ಯುಗಾದಿ ಹಬ್ಬ ಹೊಸ ಉದ್ಯಮಗಳನ್ನು ಆರಂಭಿಸಲು ಮಂಗಳಕರ ಸಮಯ, ಜ್ಯೋತಿಷಿಗಳನ್ನು ಸಂಪರ್ಕಿಸಿ ಮುಂಬರುವ ವರ್ಷದ ಭವಿಷ್ಯವನ್ನು ತಿಳಿಯಲು, ಹೊಸ ಪಂಚಾಂಗ ಪಡೆಯಲು, ಮುಂಬರುವ ವರ್ಷದ ಗ್ರಹಣ, ಗ್ರಹಗತಿಗಳ ಸ್ಥಾನ, ಚಲನವಲನವು ವ್ಯಕ್ತಿಯ ಜೀವನದಲ್ಲಿ ಹೇಗೆ ಪ್ರಭಾವ ಬೀರುವುದೆಂಬುದನ್ನು ತಿಳಿಯಲು ಸೂಕ್ತವಾದ ಸಮಯ. ಯುಗಾದಿ ಸಂದರ್ಭ ಬೇವು ಬೆಲ್ಲ ಸೇವಿಸುವುದು ಜೀವನದ ಸುಖ ದುಃಖಗಳನ್ನು ಸರಿಸಮಾನವಾಗಿ ಸ್ವೀಕರಿಸಲು ಪ್ರೇರಣೆ ನೀಡುತ್ತದೆ. ಈ ಶೋಭಕೃತು ಸಂವತ್ಸರ ಕಳೆದು ಕ್ರೋಧಿ ನಾಮ ಸಂವತ್ಸರ ಆರಂಭವಾಗುತ್ತಿರುವ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ದೇಶದ, ವಿಶ್ವದ ಸಮಸ್ತ ಜನತೆಗೆ ಹಾಗು ವಿಶೇಷವಾಗಿ ರಾಜಧಾನಿ ದೆಹಲಿ ಎನ್.ಸಿ.ಆರ್.ನಲ್ಲಿರುವ ನಮ್ಮ ಕನ್ನಡಿಗ ಬಂಧು–ಮಿತ್ರರಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬಂಧುಗಳೇ, ಕಳೆದ ಮಾರ್ಚ್ 11ರಂದು, ನಮ್ಮ ಹೊಸ ಕಾರ್ಯಕಾರಿ ಸಮಿತಿ ಆಯೋಜಿಸಿದ ಪ್ರಥಮ ಸಾಹಿತ್ಯಿಕ ಕಾರ್ಯಕ್ರಮ 'ಸಾಹಿತ್ಯ ಸಂಜೆ'– ಸಂವಾದದಲ್ಲಿ ನಾಡಿನ ಪ್ರಖ್ಯಾತ ಕವಿ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಹಾಗೂ 2023ರ ಸಾಲಿನಲ್ಲಿ ಕನ್ನಡ ವಿಭಾಗದ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು ಭಾಗಿಯಾಗಿದ್ದು ನಮ್ಮ ಸೌಭಾಗ್ಯ. ನಮ್ಮ ಸಂಘದಿಂದ ಸನ್ಮಾನ ಸ್ವೀಕರಿಸಿದ ಈ ಇಬ್ಬರೂ ಹಿರಿಯ ಸಾಹಿತಿಗಳಿಗೆ ಅಭಿಮತ ಓದುಗರ ಪರವಾಗಿ ಅಭಿನಂದನೆಗಳು. ಹಾಗೆಯೇ ಮಾರ್ಚ್ 31 ರಂದು ಏರ್ಪಡಿಸಲಾದ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಕೇಂದ್ರ ಸರ್ಕಾರದ ಉನ್ನತ ಹುದ್ದೆಗಳಲ್ಲಿರುವ ಡಾ. ರಾಜೇಶ್ವರಿ ಎಸ್. ಮಲ್ಲೇಗೌಡ ಹಾಗು ಐ.ಆರ್.ಎಸ್. ಅಧಿಕಾರಿ ಶ್ರೀಮತಿ ಎಸ್. ಕೀರ್ತಿಶ್ರೀ ಅವರಿಗೆ ಕೃತಜ್ಞತೆಗಳು. ನಮ್ಮ ಸಂಘದ ಆರು ಮಹಿಳಾ ಪದಾಧಿಕಾರಿಗಳು ಹಾಗೂ ಸದಸ್ಯೆಯರಿಗೆ ಮತ್ತು ಸಮಸ್ತ ಮಹಿಳೆಯರಿಗೆ ಶುಭಾಶಯಗಳು. ಇದೇ ಕಾರ್ಯಕ್ರಮದಲ್ಲಿ 2023ರ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಸ್ವೀಕರಿಸಿದ ಸಂಘದ ಮಾಜಿ ಅಧ್ಯಕ್ಷರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಂದಿನ ನಿಯೋಜಿತ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಸರ್ ಅವರಿಗೆ ಗೌರವ ಅಭಿನಂದನೆಗಳು. ಸಂಪೂರ್ಣ ಸ್ಥಳೀಯ ಮಹಿಳಾ ಕಲಾವಿದರಿಂದ ಪ್ರದರ್ಶನಗೊಂಡ 'ಖುಲ್ ಜಾ ಸಿಮ್ ಸಿಮ್' ನಾಟಕ ಹಾಗು ಸಮೂಹ ಗಾಯನ, ನೃತ್ಯ ಪ್ರದರ್ಶನಗಳು ನಮ್ಮೆಲ್ಲರನ್ನು ರಂಜಿಸಿವೆ.

ಸಂಘದಲ್ಲಿ ಆಯೋಜನೆಗೊಂಡ ಈ ಎರಡು ಕಾರ್ಯಕ್ರಮಗಳ ವಿಸ್ತೃತ ವರದಿಯನ್ನು ನಮ್ಮ ಅಭಿಮತದ ಈ ಏಪ್ರಿಲ್ ಸಂಚಿಕೆಯಲ್ಲಿ ನೀಡಿದ್ದೇವೆ. ಜೊತೆಗೆ ಆರೋಗ್ಯವೇ ಭಾಗ್ಯ ಅಂಕಣದಲ್ಲಿ ನವದೆಹಲಿಯ ಫೋರ್ಟಿಸ್ ಎಸ್ಕಾರ್ಟ್ಸ್ ಆಸ್ಪತ್ರೆಯ ನೇತ್ರ ತಜ್ಞೆ ಡಾ. ಅನು ಪ್ರಸಾದ್ ಜಿ. ಅವರ ಕಣ್ಣಿನ ಆರೋಗ್ಯದ ಬಗ್ಗೆ ವಿಶೇಷ ವೈದ್ಯಕೀಯ ಲೇಖನ, ಅಂಕಣಕಾರ, ಶ್ರೀ ಪ್ರಸಾದ್ ನಾಯ್ಕ್ ಮಾಡಿದ ಶ್ರೀಮತಿ ವತ್ಸಲಾ ಸುರೇಶ್ ಅವರ 'ಕಪ್ಪೆ ಮದುವೆ' ಮಕ್ಕಳ ಕಥಾ ಸಂಕಲನ ಕೃತಿ ಅವಲೋಕನ, ದಿನಕರ ಸಂಸ್ಥೆಯ ಕಲಾವಿದರು ಪ್ರದರ್ಶಿಸಿದ 'ತಿರುಕರ ಪಿಡುಗು' ನಾಟಕ ಕುರಿತ ವಿವರ, ವಕೀಲೆ ಶ್ರೀಮತಿ ವೈಜಯಂತಿ ಗಿರೀಶ್‌ರವರ ದೇವಭೂಮಿ ಪರ್ಯಟನೆಯ ಪ್ರವಾಸ ಕಥನ / ಲೇಖನ, ಶ್ರೀ ಸರವು ಕೃಷ್ಣ ಭಟ್ ಅವರ ತಿಂಗಳ ವ್ಯಕ್ತಿ ಅಂಕಣದಲ್ಲಿ ಹಿರಿಯರಾದ ಶ್ರೀ ಚೆನ್ನು ಎಸ್. ಮಠದ ಕುರಿತ ಲೇಖನ, ಸ್ನೇಹಾ ಅಸೋಸಿಯೇಶನ್‌ನ, ಗುರುಗಾಂವ್ ಕನ್ನಡ ಸಂಘದ ಹಾಗೂ ದೆಹಲಿ ಕನ್ನಡ ಶಾಲೆಯ ಇತರ ಕಾರ್ಯಕ್ರಮಗಳ ವರದಿಗಳನ್ನೊಳಗೊಂಡ ನಿಮ್ಮ ಸಂಘದ ಮುಖವಾಣಿ ಪತ್ರಿಕೆಯ ಏಪ್ರಿಲ್ 2024ರ ಈ ಸಂಚಿಕೆ ನಿಮ್ಮ ಕೈ ಸೇರುತ್ತಿದೆ. ಇದನ್ನು ವಿವರವಾಗಿ ಓದಿ, ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ.

**'ಜೀವನವೆಲ್ಲಾ ಬೇವು ಬೆಲ್ಲ ಅದನ್ನು ಬಲ್ಲವನೇ ಕಲಿ ಮಲ್ಲ'**–ಮತ್ತೆ ಮತ್ತೆ ಬರುವ ಯುಗ ಯುಗಾದಿ ನಿಮ್ಮೆಲ್ಲರ ಜೀವನದಲ್ಲಿ ಹೊಸ ವರ್ಷದ ಆರಂಭದಲ್ಲಿ ಹೊಸತನವನ್ನು ಮೂಡಿಸಿ ಆಯುರಾರೋಗ್ಯ, ನೆಮ್ಮದಿ, ಸಮೃದ್ಧಿಯನ್ನು ಹಾಗು ಹೊಸ ಹರುಷವನ್ನು ತರಲಿ ಎಂಬ ಶುಭ ಹಾರೈಕೆಗಳೊಂದಿಗೆ....

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕರು

# ಅಧ್ಯಕ್ಷರ ನುಡಿ



ಆದರಣೀಯ ದೆಹಲಿ ಕನ್ನಡಿಗರೇ ನಮಸ್ಕಾರ. ಕಲಾವಿದರ ಅಭಿನಯ, ಸಾಹಿತಿಗಳ ಸಂಭಾಷಣೆ ಹಾಗೂ ಕವಿಗಳ ಕಾವ್ಯ ಎಷ್ಟೇ ಶತಮಾನ ಕಳೆದರೂ ಸದಾ ಸಾಂದರ್ಭಿಕ ಹಾಗೂ ನಿತ್ಯ ನೂತನ. ಈ ಮಾತನ್ನು ಹೇಳಲು ಕಾರಣ ಚಲನಚಿತ್ರದಲ್ಲಿ ಗೀತೆಯಾದ ದ.ರಾ.ಬೇಂದ್ರೆಯವರ ಕವನ **ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ** ನಾವೆಲ್ಲ ಹೊಸ ಬಟ್ಟೆ ತೊಟ್ಟು ಸಂಭ್ರಮಿಸುವಂತೆ ಪ್ರಕೃತಿ ಕೂಡ ಯುಗಾದಿ ಹಬ್ಬದಲ್ಲಿ ಹೊಸ ಚಿಗುರು ಹೊದ್ದು ಸಂಭ್ರಮಿಸುತ್ತದೆ. ಕೋಗಿಲೆಯ ಇಂಪಾದ ದನಿ ಕೂಡ ಕೇಳುವುದು ಈ ಸಮಯದಲ್ಲೇ. ತಮಗೆಲ್ಲರಿಗೂ ಕ್ರೋಧಿ ನಾಮ ಸಂವತ್ಸರದ ಯುಗಾದಿ ಹಬ್ಬಕ್ಕೆ ಶುಭಾಶಯಗಳನ್ನು ಕೋರುತ್ತಾ, ಬಂಧುಗಳೇ....ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ನಡೆದು ಈ ಲೇಖನ ಬರೆಯುವ ಸಮಯಕ್ಕೆ ಸರಿಯಾಗಿ ಒಂದು ವರ್ಷ, ಒಂದು ತಿಂಗಳು, ಒಂದು ವಾರವಾಗಿದೆ. ಕಳೆದ ವರ್ಷದ ಫೆಬ್ರವರಿ 25 ಮತ್ತು 26 ರಂದು ನಡೆದ ಆ ಅದ್ಭುತ ದಾಖಲೆಯ ಕಾರ್ಯಕ್ರಮಕ್ಕೆ ದೇಶದ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ **ಶ್ರೀ ನರೇಂದ್ರ ದಾಮೋದರದಾಸ್ ಮೋದಿಯವರು** ಆಗಮಿಸಿ ಆ ಕಾರ್ಯಕ್ರಮವನ್ನು ಉದ್ಘಾಟಿಸಿದ್ದರು. ಸಾವಿರಾರು ಕಲಾವಿದರು ಭಾಗವಹಿಸಿದ್ದ ಆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿದ ಅವರು ದೆಹಲಿ ಕರ್ನಾಟಕ ಸಂಘವನ್ನು ಹಾಡಿ ಹೊಗಳಿದ್ದಲ್ಲದೇ ಮುಂದಿನ ಅಮೃತ ಕಾಲದಲ್ಲಿ ಸಂಘದ ಕಾರ್ಯ ದಿಸೆಯ ಬಗ್ಗೆ ಮಾರ್ಗದರ್ಶನ ಮಾಡಿದರು. ಸುಮಾರು ಎರಡು ಗಂಟೆಗಿಂತ ಹೆಚ್ಚು ಸಮಯವನ್ನು ನಮಗೆ ನೀಡಿದ ಮೋದಿಯವರ ಆ ಕಾರ್ಯಕ್ರಮ ಚಿರನೂತನ. ಆ ಸವಿ ನೆನಪಿನಲ್ಲಿ ಅಮೃತ ಮಹೋತ್ಸವವನ್ನು ಕೇವಲ ಒಂದು ಕಾರ್ಯಕ್ರಮಕ್ಕೆ ಸೀಮಿತಗೊಳಿಸದೇ ನಮ್ಮ ಅವಧಿಯ ಎರಡು ವರ್ಷಪೂರ್ತಿ ಪ್ರತಿ ವಾರ ಒಂದಕ್ಕಿಂತ ಒಂದು ಅತ್ಯಂತ ಸುಂದರವಾದ ವೈವಿಧ್ಯಮಯ ಕಾರ್ಯಕ್ರಮಗಳಿಂದ ಆಚರಿಸಿದೆವು. ಜೊತೆಗೆ ಸಾವಿರಾರು ಕಲಾವಿದರನ್ನು ತಾಯ್ನಾಡಿನಿಂದ ಕರೆಸಿಕೊಂಡು ಸ್ಥಳೀಯರೊಂದಿಗೆ ಬೆಸೆಯುತ್ತಾ ವೈಭವೋಪೇತ ಕಾರ್ಯಕ್ರಮಗಳನ್ನ ಮಾಡುವಲ್ಲಿ ನಾವು ಯಶಸ್ವಿಯಾದೆವು. ಈ ಸವಿ ನೆನಪನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ.......ದೆಹಲಿ ಕರ್ನಾಟಕ ಸಂಘದ ಪೂರ್ವಾಧ್ಯಕ್ಷರಾಗಿದ್ದ **ಡಾ. ಪುರುಷೋತ್ತಮ ಬಿಳಿಮಲೆ** ಅವರನ್ನು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ** ಅಧ್ಯಕ್ಷರನ್ನಾಗಿ ಕರ್ನಾಟಕ ಸರ್ಕಾರ ನೇಮಿಸಿದೆ. **ಸಂಪುಟ ದರ್ಜೆಯ ಸ್ಥಾನಮಾನಕ್ಕೆ ಏರಿದ ಅವರಿಗೆ ನಾನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.**

ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಈ ಬಾರಿಯ ಕಾರ್ಯಕಾರಿ ಸಮಿತಿಯ ಮೊದಲನೇ ಕಾರ್ಯಕ್ರಮ **ಅಂತರರಾಷ್ಟ್ರೀಯ ಮಹಿಳಾ ದಿನದ** ಆಚರಣೆ. ಎಂದಿನಂತೆ ಈ ವರ್ಷವೂ ಸಹ ನಮ್ಮ ಕಾರ್ಯಕಾರಿ ಸಮಿತಿಯಲ್ಲಿರುವ ಎಲ್ಲಾ ಮಹಿಳೆಯರಿಗೆ ಜವಾಬ್ದಾರಿಯನ್ನು ನೀಡಲಾಗಿತ್ತು. ಸ್ಥಳೀಯ ಕಲಾವಿದರು ಎನ್‌ಎಸ್‌ಡಿ ಯ ಶ್ರೀಮತಿ ಮೀತಾ ಮಿಶ್ರ ಅವರ ನಿರ್ದೇಶನದ **ಖುಲ್ ಜಾ ಸಿಮ್ ಸಿಮ್** ನಾಟಕವನ್ನು ಪ್ರದರ್ಶಿಸಿದರು. ಜೊತೆಗೆ ಸಮೂಹಗಾನ ಹಾಗೂ ನೃತ್ಯವನ್ನು ಸ್ಥಳೀಯ ಕಲಾವಿದರು ಮಾಡಿದರು. ಈ ಕಾರ್ಯಕ್ರಮಕ್ಕೆ ಶ್ರಮಿಸಿದ ಎಲ್ಲಾ ಮಹಿಳಾ ಪದಾಧಿಕಾರಿಗಳಿಗೆ ಅಭಿನಂದನೆಗಳು.

ಪ್ರಸಿದ್ಧ ಚಲನಚಿತ್ರ ಗೀತೆ 'ಕಾಲವನ್ನು ತಡೆಯೋರು ಯಾರು ಇಲ್ಲ' ಎಂಬುದು ಎಷ್ಟು ಸತ್ಯ ಅಲ್ಲವೇ. ಇನ್ನೂ ನಿನ್ನೆ–ಮೊನ್ನೆ ಮಕ್ಕಳ ಪರೀಕ್ಷೆಯ ಬಗ್ಗೆ ಶುಭ ಕೋರಿದ್ದೆ, ಅದಾಗಲೇ ತಿಂಗಳು ಕಳೆದು ಈಗ ಅವರು ಫಲಿತಾಂಶವನ್ನು ಕೂಡ ಪಡೆದು ಮುಂದಿನ ತರಗತಿಗೆ ಹೆಜ್ಜೆಯಿಟ್ಟಿದ್ದಾರೆ. **ದೆಹಲಿ ಕನ್ನಡಿಗರ ಎಲ್ಲಾ ಮಕ್ಕಳಿಗೂ ಅಭಿನಂದನೆಗಳು ಮತ್ತು ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಶುಭಾಶೀರ್ವಾದಗಳು.** ಹಾಗೆಯೇ **ಹನ್ನೆರಡನೇ ತರಗತಿಯ ನಂತರ ಸ್ಪರ್ಧಾತ್ಮಕ ಪರೀಕ್ಷೆ ಬರೆಯುತ್ತಿರುವ ಮತ್ತು ತಾಯ್ನಾಡಿನಲ್ಲಿ ಸಿಇಟಿ ಬರೆಯಲು ಹೋಗುತ್ತಿರುವ ದೆಹಲಿ ಕನ್ನಡಿಗರ ಎಲ್ಲಾ ಮಕ್ಕಳಿಗೂ ಶುಭ ಹಾರೈಕೆಗಳು.**

ಬಂಧುಗಳೇ, ಇನ್ನು ಅನೇಕ ಕಾರ್ಯಕ್ರಮಗಳು ನಡೆಯಬೇಕು ಆದರೆ ನಾನು ಮೊದಲು ಮಾಡಿದ ವೇಗದಲ್ಲಿ ಮಾಡಲು ಸಾಧ್ಯವಾಗುತ್ತಿಲ್ಲ. ಕಾರಣ ತಮಗೂ ಗೊತ್ತಿರುವ ವಿಷಯ ಆದರೂ ಸಹ ಸಾಧ್ಯವಾದಷ್ಟು ಕಾರ್ಯಕ್ರಮಗಳು ನಡೆಯಬೇಕು ಒಗ್ಗಟ್ಟಿನಿಂದ ಎಲ್ಲರೂ ಜೊತೆ ಸೇರಿಕೊಂಡು ಕೆಲಸ ಮಾಡಬೇಕು ಎನ್ನುವುದು ನನ್ನ ಅಭಿಲಾಷೆ. ಚುನಾವಣೆಯಲ್ಲಿ ಸ್ಪರ್ಧಿಸುವಾಗ ಬೇರೆ ಬೇರೆ ತಂಡಗಳಾಗಿ ಸ್ಪರ್ಧಿಸುತ್ತಾರೆ, ಆದರೆ ಗೆದ್ದು ಬಂದ ನಂತರ ಎಲ್ಲರೂ ಜೊತೆಗೂಡಿ ಸಂಘದ ಏಳಿಗೆಗೆ ಕೆಲಸ ಮಾಡಬೇಕು. ಆದರೆ ಇದರಲ್ಲೂ ರಾಜಕೀಯ ಮಾಡುತ್ತಾ ಹೋದರೆ ಯಾರಿಗೂ ಅದು ಶ್ರೇಯ ತರುವುದಿಲ್ಲ, ಸದಸ್ಯರು ಎಲ್ಲವನ್ನು ಗಮನಿಸುತ್ತಾ ಇರುತ್ತಾರೆ ಎಂಬುದನ್ನು ಮರೆಯಬಾರದು. ಇತ್ತೀಚೆಗೆ ವಾಟ್ಸಾಪ್ ಗುಂಪಿನಲ್ಲಿ **ಡಾ. ಬಸವರಾಜ ಸಾದರ** ಅವರ ಹೆಸರಲ್ಲಿ ಬಂದ ಹನಿಗವನ ಅತ್ಯಂತ ಅರ್ಥಗರ್ಭಿತವಾಗಿ ನನ್ನ ಮನ ಸೆಳೆಯಿತು. ಅದನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ **ಕಾಗೆ ಹಾಡಿದರೆ, ಕೋಗಿಲೆ ಏಕೆ ನಲುಗಬೇಕು. ತಾನು ಬೆಳೆದದ್ದೇ ಅದರ ಗೂಡಲ್ಲೆಂಬುದ ಮೊದಲು ಅರಿಯಬೇಕು.**

ವರ ಕವಿ ಡಾ. ದ.ರಾ. ಬೇಂದ್ರೆ ಅವರು ಯುಗಾದಿ ಕವನದಲ್ಲಿ ಮುಂದುವರೆಯುತ್ತಾ **ವರುಷಕ್ಕೊಮ್ಮೆ ಹೊಸತು ಜನ್ಮ, ಹರುಷಕೊಂದು ಹೊಸತು ನೆಲೆಯು** ಎಂದು ಪ್ರಕೃತಿಯನ್ನು ನೋಡುತ್ತಾ ಮಾನವನಿಗೆ **ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ** ಎಂದು ದೇವರಲ್ಲಿ ಪ್ರಶ್ನಿಸುತ್ತಾರೆ. ನನ್ನ ಪ್ರಕಾರ ಪ್ರತಿದಿನ ಮಲಗುವಾಗ ಈರ್ಷ್ಯೆ, ಅಸೂಯೆ, ಅಪಯಶಸ್ಸುಗಳ ಮರೆತು ಮರುದಿನ ಏಳುವಾಗ ಹೊಸ ಆಲೋಚನೆ, ಶ್ರದ್ಧಾಪೂರ್ವಕ ಸ್ನೇಹ, ಯಶಸ್ಸಿಗೆ ಸಂಕಲ್ಪ ಕೈಗೊಂಡರೇ ಬಹುತೇಕ ಕವಿಯ ಪ್ರಾರ್ಥನೆ ಈಡೇರಿದಂತೆ..... ಅಲ್ಲವೇ.

ಬಂಧುಗಳೇ, ಸಾಧ್ಯವಾದಷ್ಟು ಸಂಘದ ಪ್ರಗತಿಗೆ ನಾನು ದುಡಿಯುತ್ತಿದ್ದೇನೆ, ಮುಂದೆಯೂ ಸಹ ದುಡಿಯುತ್ತೇನೆ. ದೆಹಲಿ ಕರ್ನಾಟಕ ಸಂಘದ ಹೊಸ ಕಟ್ಟಡ ಬರುವ ಸಂದರ್ಭದಲ್ಲಿ ಇನ್ಫೋಸಿಸ್ ಫೌಂಡೇಷನ್‌ನ ಮುಖ್ಯಸ್ಥರಾದ ಶ್ರೀಮತಿ ಸುಧಾ ಮೂರ್ತಿ ಅಮ್ಮನವರು ನಮ್ಮ ಕಟ್ಟಡದ ಗ್ರಂಥಾಲಯಕ್ಕೆ 10 ಲಕ್ಷ ರೂಪಾಯಿ ಧನಸಹಾಯ ನೀಡಿದ್ದರು. ಅವರ ಹೆಸರಲ್ಲಿ ಗ್ರಂಥಾಲಯ ಸಹ ಮಾಡಲಾಗಿತ್ತು. ಆದರೆ ಅವರು ಸಂಘಕ್ಕೆ ಭೇಟಿ ಕೊಡುವ ಸಂದರ್ಭ ಈ ಹಿಂದೆ ಒದಗಿರಲಿಲ್ಲ.2023 ರಲ್ಲಿ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬಂದಾಗಲೂ ಸಹ ಸಂಘಕ್ಕೆ ಅವರು ಭೇಟಿ ನೀಡಲಾಗಲಿಲ್ಲ. ಎಲ್ಲದಕ್ಕೂ ಕಾಲ ಕೂಡಿ ಬರಬೇಕು ಎಂಬುದಕ್ಕೆ ಸಾಕ್ಷಿ ಅವರ ಸಂಘದ ಇತ್ತೀಚಿನ ಭೇಟಿ. ಕಳೆದ ನವೆಂಬರ್ ತಿಂಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಾಲ ಸಾಹಿತ್ಯ ಪುರಸ್ಕಾರ ಸ್ವೀಕರಿಸಲು ದೆಹಲಿಗೆ ಬರುವವರಿದ್ದರು. ಆ ಸಮಯದಲ್ಲಿ ಅವರೊಂದಿಗೆ ಮಾತನಾಡಿ ದೆಹಲಿ ಕರ್ನಾಟಕ ಸಂಘಕ್ಕೆ ಅವರನ್ನು ಕರೆಸಲಾಗಿತ್ತು. ನಮ್ಮ ಕಾರ್ಯಕ್ರಮಗಳ ವೈವಿಧ್ಯತೆ, ಕಟ್ಟಡದ ಎಲ್ಲಾ ಭಾಗಗಳಿಗೆ ಭೇಟಿ ನೀಡಿ, ನಮ್ಮ ಯೋಜನೆಗಳನ್ನು ಆಲಿಸಿದರು ಹಾಗೂ ಸದಸ್ಯರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟು ದೀರ್ಘ ಸಮಯ ಸಂಘಕ್ಕೆ ನೀಡಿದರು. ಅವರು ಗ್ರಂಥಾಲಯಕ್ಕೆ ಭೇಟಿ ಕೊಟ್ಟಾಗ ಅವರ ಹೆಸರನ್ನು ಚಿರಸ್ಥಾಯಿಗೊಳಿಸಿರುವುದಕ್ಕೆ ಆಶ್ಚರ್ಯಪಟ್ಟು ಗ್ರಂಥಾಲಯದ ಇನ್ನೂ ಹೆಚ್ಚಿನ ಕೆಲಸಗಳಿಗೆ 10 ಲಕ್ಷ ರೂಪಾಯಿಗಳ ಸಹಾಯ ಧನ ನೀಡುವ ವಾಗ್ದಾನ ಮಾಡಿದ್ದರು. ಹೊಸ ಆರ್ಥಿಕ ವರ್ಷದಲ್ಲಿ ಅವರಾಗಿಯೇ ದೆಹಲಿ ಕರ್ನಾಟಕ ಸಂಘದ ಖಾತೆಗೆ ಆ ಮೊತ್ತವನ್ನು ವರ್ಗಾವಣೆ ಮಾಡಿದ್ದಾರೆ. ಅವರ ಮಾರ್ಗದರ್ಶನದಂತೆ ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯದಲ್ಲಿ ನಡೆಯಬೇಕಾಗಿರುವ ಇನ್ನೂ ಹೆಚ್ಚಿನ ಕೆಲಸಗಳು ಮತ್ತು ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಮಕ್ಕಳಿಗೆ ಬೇಕಾಗಿರುವ ಪುಸ್ತಕಗಳನ್ನ ಖರೀದಿ ಮಾಡಲಾಗುವುದು. ಜೊತೆಗೆ ಗ್ರಂಥಾಲಯಕ್ಕೆ ಬೇಕಾಗಿರುವ ಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ, ಪೀಠೋಪಕರಣಗಳ ಖರೀದಿ ಮಾಡಿ ನಂತರ ಮತ್ತೊಮ್ಮೆ ಮಹಾ ದಾನಿಗಳಾದ ಶ್ರೀಮತಿ ಡಾ. ಸುಧಾ ಮೂರ್ತಿ ಅಮ್ಮನವರನ್ನು ಕರೆಸಿ ಉದ್ಘಾಟನೆ ಮಾಡಿಸಬೇಕೆಂಬುದು ಕಾರ್ಯಕಾರಿ ಸಮಿತಿಯ ಬಯಕೆ ಆಗಿರುತ್ತದೆ. ಆದಷ್ಟು ಬೇಗನೆ ಈ ಕೆಲಸಗಳು ನಡೆಯಲಿವೆ.

**ಬಹು ಭಾಷೆ, ವಿವಿಧ ರಾಜ್ಯ, ವೈವಿಧ್ಯಮಯ ಸಂಸ್ಕೃತಿಗಳ ಜನ ಒಗ್ಗಟ್ಟಾಗಿ ಮುನ್ನಡೆಯುತ್ತಿರುವ ಕಾರಣ ನಮ್ಮ ದೇಶದಲ್ಲಿನ ಲಿಖಿತ ಸಂವಿಧಾನ. ಅಂತಹ ಸಂವಿಧಾನವನ್ನು ನೀಡಿದ್ದು ಡಾ. ಭೀಮರಾವ್ ರಾಮರಾವ್ ಅಂಬೇಡ್ಕರ್ ಅವರ ನೇತೃತ್ವದ ಕರಡು ಸಮಿತಿ. ಜನಮಾನಸದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಜನಜನಿತರಾಗಿರುವ ಅವರ ಜನ್ಮ ಜಯಂತಿ ಈ ತಿಂಗಳು ಬರುತ್ತಿದೆ. ದೇಶಕ್ಕಾಗಿ ಅವರು ಮಾಡಿದ ಮಹತ್ಕಾರ್ಯಕ್ಕೆ ಎಲ್ಲರ ಪರವಾಗಿ ಅವರಿಗೆ ಹೃತ್ಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.**

ಆತ್ಮೀಯರೇ, ಅಮೃತ ಮಹೋತ್ಸವದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಜಾಗ ತೆಗೆದುಕೊಳ್ಳಬೇಕೆಂದು ಕಳೆದ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧಾರವಾಗಿತ್ತು. ಜೊತೆಗೆ ಹೊಸ ಕಾರ್ಯಕಾರಿ ಸಮಿತಿಯು ಸಹ ಇದರಲ್ಲಿ ಒಂದು ಕಟ್ಟಡ ಸಮಿತಿಯನ್ನು ರಚಿಸಿ ಆ ಸಮಿತಿಯ ಜೊತೆ ಕಾನೂನು ಅಡೆತಡೆಗಳನ್ನು ನೋಡಿಕೊಂಡು ದೆಹಲಿ ಕರ್ನಾಟಕ ಸಂಘಕ್ಕೆ ಪಕ್ಕದ ನೋಯ್ಡಾದಲ್ಲಿ ಒಂದು ಒಳ್ಳೆಯ ಜಾಗವನ್ನು ಪಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಸಾಧ್ಯವಾದರೆ ಈ ಜಾಗ ದೆಹಲಿಯಲ್ಲೂ ಸಹ ಸಿಗಬಹುದು.ಆ ಪ್ರಯತ್ನದಲ್ಲೂ ಸಹಾ ಇದ್ದೇನೆ ಮತ್ತು ಇರುತ್ತೇನೆ.

ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಹುಟ್ಟಿಕೊಂಡ ಎಷ್ಟೋ ಸಂಘ ಸಂಸ್ಥೆಗಳು ಇವೆ. ಹಾಗೆಯೇ ಇಂತಹ ಅನೇಕ ಸಣ್ಣ ಸಂಘ– ಸಂಸ್ಥೆಗಳಿಗೆ ದೆಹಲಿ ಕರ್ನಾಟಕ ಸಂಘವು ಸದಾ ನೆರವು ನೀಡುತ್ತಾ ಬರುತ್ತಿವೆ. ಇಲ್ಲಿ ಇದನ್ನು ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ ದೆಹಲಿ ಕರ್ನಾಟಕ ಸಂಘದ ಆಟೋಟ ಸ್ಪರ್ಧೆಗಳಲ್ಲಿ ಹುಟ್ಟಿಕೊಂಡಿರುವ ಸೌಹಾರ್ದ ಕನ್ನಡ ಬಳಗದ ಕ್ರಿಕೆಟ್ ಸಮಿತಿ ಈ ಬಾರಿ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಕ್ರಿಕೆಟ್ ಟೂರ್ನಿಯ ಆಯೋಜನೆಯನ್ನು ಏಪ್ರಿಲ್ ಏಳರಂದು ತಾಲ್ಕಟೋರ ಕ್ರಿಕೆಟ್ ಮೈದಾನದಲ್ಲಿ ಮಾಡುತ್ತಿದೆ. ದೆಹಲಿ ಕರ್ನಾಟಕ ಸಂಘವು ಈ ಕ್ರಿಕೆಟ್ ಉತ್ಸವಕ್ಕೆ ಸಹಕಾರ ಮತ್ತು ಸಹಾಯ ನೀಡುತ್ತಿದೆ. ಜೊತೆಗೆ ಎನ್‌ಸಿಆರ್ ನ ಗುರುಗಾಂವ್ ಕನ್ನಡ ಸಂಘವು ಪ್ರತಿವರ್ಷದಂತೆ ಈ ವರ್ಷವೂ ಸಹ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಏಪ್ರಿಲ್ 14 ರಂದು ಯುಗಾದಿ ಮಿಲನ ಕಾರ್ಯಕ್ರಮ ಮಾಡುತ್ತಿದ್ದಾರೆ. ನಮ್ಮ ಸಹಕಾರವನ್ನು ಸಹ ಪ್ರತಿ ವರ್ಷವಂತೆ ಈ ವರ್ಷವೂ ಸಹ ಕೇಳಿದ್ದಾರೆ. ಅದಕ್ಕೆ ದೆಹಲಿ ಕರ್ನಾಟಕ ಸಂಘ ಸಹಾಯ ಮತ್ತು ಸಹಕಾರ ನೀಡುತ್ತಿದೆ.. ಈ ಕಾರ್ಯಕ್ರಮದಲ್ಲಿ ದೆಹಲಿಯಲ್ಲಿರುವ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಬೇಕೆಂದು ಕೋರಿಕೊಳ್ಳುತ್ತೇನೆ. ಮೇ–ಜೂನ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಸ್ವಲ್ಪ ತಗ್ಗಲಿವೆ. ಏಕೆಂದರೆ ಬೇಸಿಗೆ ರಜೆಗಳಲ್ಲಿ ತಾಯ್ನಾಡಿಗೆ ಹೊರಡುವವರ ಸಂಖ್ಯೆ ಜಾಸ್ತಿ ಇರುವ ಕಾರಣ ಕಾರ್ಯಕ್ರಮಗಳು ಕಡಿಮೆಯಾಗುತ್ತವೆ.ಅದಕ್ಕಿಂತ ಮೊದಲು ಮೇ ತಿಂಗಳಲ್ಲಿ ಬಸವ ಜಯಂತಿ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘ ಆಯೋಜನೆ ಮಾಡುತ್ತಿದೆ. ಈ ಕಾರ್ಯಕ್ರಮದ ಆಯೋಜನೆಯಲ್ಲಿ ಸ್ಥಳೀಯ ಎಲ್ಲಾ ಸಂಘ ಸಂಸ್ಥೆಗಳನ್ನು ಸೇರಿಸಿಕೊಂಡು ವಿಜೃಂಭಣೆಯಿಂದ ಮಾಡಲು ನಿಮ್ಮೆಲ್ಲರ ಸಹಕಾರವನ್ನು ಕೇಳುತ್ತೇನೆ. ಈ ಸಂದರ್ಭದಲ್ಲಿ ನನ್ನ ಮನ ಸೆಳೆದ ವಚನವನ್ನು ನಿಮ್ಮ ಮುಂದಿಟ್ಟಿರುವೆ. **ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ, ಜ್ಯೋತೀಯ ಬಲದಿಂದ ತಮಂಧದ ಕೇಡು ನೋಡಯ್ಯಾ, ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ, ನಮ್ಮ ಕೂಡಲ ಸಂಗನ ಶರಣರ ಅನುಭಾವದಿಂದ ಭವದ ಕೇಡು ನೋಡಯ್ಯಾ.**

ದೇಶದ ಅತ್ಯಂತ ದೊಡ್ಡ ಹಬ್ಬ ರಾಷ್ಟ್ರೀಯ ಚುನಾವಣೆ. ಈ ದೊಡ್ಡ ಹಬ್ಬದಲ್ಲಿ ಪ್ರತಿಯೊಬ್ಬರೂ ಮತದಾನ ಮಾಡುವ ಮೂಲಕ ದೇಶದ ಪ್ರಗತಿಗೆ ಭಾಗಿಯಾಗೋಣ ಮತ್ತು ಯಶಸ್ಸಿಗೆ ಭಾಜನರಾಗೋಣ.

ವಂದನೆಗಳು.

***ಸಿ.ಎಂ.ನಾಗರಾಜ***

ಅಧ್ಯಕ್ಷರು

## ಮುನ್ನೋಟ

ಆತ್ಮೀಯ ಕನ್ನಡಿಗರೇ,

ಸಂಘದ ನೂತನವಾಗಿ ಚುನಾಯಿತಗೊಂಡ ಕಾರ್ಯಕಾರಿ ಸಮಿತಿಯು ತನ್ನ ಮೊದಲ ಕಾರ್ಯಕ್ರಮವವನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯೊಂದಿಗೆ ಶುಭಾರಂಭಗೊಳಿಸಿದೆ. ಕಾರ್ಯಕಾರಿ ಸಮಿತಿಯ ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಉಳಿದ ಪದಾಧಿಕಾರಿಗಳು, ಸದಸ್ಯರೊಂದಿಗೆ ಮತ್ತು ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಕ್ಕೆ ಧನ್ಯವಾದಗಳು. ಮಾರ್ಚ್ ತಿಂಗಳಲ್ಲಿ ನಡೆದ ಸಾಹಿತ್ಯ ಸಂಜೆ ಕಾರ್ಯಕ್ರಮವೂ ನಿಮ್ಮೆಲ್ಲರ ಭಾಗವಹಿಸುವಿಕೆಯಿಂದ ಯಶಸ್ವಿಯಾಗಿದೆ.

ಮಕ್ಕಳೆಲ್ಲರು ಪರೀಕ್ಷೆಯನ್ನು ಎದುರಿಸಿ ಮುಂದಿನ ಶೈಕ್ಷಣಿಕ ವರ್ಷವನ್ನು ಪ್ರವೇಶಿಸಿದ್ದಾರೆ. ಇವರೆಲ್ಲರಿಗೂ ಶುಭ ಹಾರೈಕೆಗಳು.

ದೆಹಲಿಯಲ್ಲಿ, ರಾಜ್ಯದಲ್ಲಿ ಮತ್ತು ದೇಶದೆಲ್ಲೆಡೆ ಬಿಸಿಲಿನ ಬೇಗೆ ಜಾಸ್ತಿಯಾಗುತ್ತಿದೆ. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಸಮಸ್ಯೆಯಿಂದ ಬಿಕ್ಕಟ್ಟಿನ ಪರಿಸ್ಥಿತಿ ಎದುರೊಗೊಂಡಿದೆ. ಇದೆಲ್ಲದರ ನಡುವೆ ಲೋಕಸಭಾ ಚುನಾವಣೆಯು ಎದುರು ನೋಡುತ್ತಿದೆ. ಈ ಚುನಾವಣಾ ಪ್ರಕ್ರಿಯೆಯು ಶಾಂತಿಯುತವಾಗಿ ನಡೆದು ಆಯ್ಕೆಯಾಗಿ ಬರುವ ಹೊಸ ಸರ್ಕಾರ ಜನರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸಲಿ ಎಂದು ಶುಭ ಹಾರೈಸುತ್ತೇನೆ.

ಸಂಘದಲ್ಲಿ ಬರುವ ತಿಂಗಳು ಅಕ್ಕಮಹಾದೇವಿ ಮತ್ತು ಬಸವಣ್ಣ ಜಯಂತಿ ಕಾರ್ಯಕ್ರಮ ನಡೆಯಲಿದೆ. ಮುಂಬರುವ ದಿನಗಳಲ್ಲಿ ಸಾಹಿತ್ಯ ಸಂಜೆ, ಆಟೋಟ ಸ್ಪರ್ಧೆ, ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸಲಾಗುವುದು. ಸಂಘದ ಹಿಂದಿನ ಕಾರ್ಯಕ್ರಮಗಳಲ್ಲಿ ನೀವೆಲ್ಲ ಸಕ್ರಿಯವಾಗಿ ಭಾಗಿಯಾಗಿ ಪ್ರೋತ್ಸಾಹ ನೀಡಿದ್ದೀರಿ. ಅದೇ ರೀತಿ ತಾವುಗಳೆಲ್ಲರೂ ಮುಂಬರುವ ಕಾರ್ಯಕ್ರಮಗಳಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ತಮಗೆಲ್ಲರಿಗೂ ಯುಗಾದಿ ಹಬ್ಬ ಹಾಗೂ ಡಾ. ಅಂಬೇಡ್ಕರ್ ಜಯಂತಿಯ ಶುಭಾಶಯಗಳು.**

**ರಾಧಾಕೃಷ್ಣ**
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ, ಜೆಎನ್‌ಯು ಕನ್ನಡ ಅಧ್ಯಯನ ಪೀಠದ ಮಾಜಿ ಮುಖ್ಯಸ್ಥರೂ ಹಾಗೂ ಪ್ರಖ್ಯಾತ ಜಾನಪದ ವಿದ್ವಾಂಸರಾದ ಕನ್ನಡದ ಕಟ್ಟಾಳು ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಕರ್ನಾಟಕ ಸರ್ಕಾರದಿಂದ ನಿಯೋಜಿತಗೊಂಡಿದ್ದಾರೆ. ಇದೇ ವರ್ಷದ ಜೂನ್ ತಿಂಗಳಿನಿಂದ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಹೊಂದಿರುವ ಈ ಹುದ್ದೆಯ ಅಧಿಕಾರ ಸ್ವೀಕರಿಸಲಿರುವ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಮುನ್ನಡೆಸುವ ಹಾಗು ರಾಜ್ಯಾದಾದ್ಯಂತ ಹಾಗು ಹೊರನಾಡಿನಲ್ಲಿ ಕನ್ನಡವನ್ನು ಇನ್ನಷ್ಟು ಬಲಗೊಳಿಸುವ ಗುರುತರ ಜವಾಬ್ದಾರಿಯನ್ನು ವಹಿಸಲಿದ್ದಾರೆ.

ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಪ್ರಾಧಿಕಾರದ ಅಧ್ಯಕ್ಷರಾಗಿ ನಿಯೋಜಿತರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರ ಪ್ರತಿಭೆ, ಹಲವು ವರ್ಷಗಳ ಕನ್ನಡಪರ ಹೋರಾಟ, ಪ್ರಯತ್ನ, ಪರಿಶ್ರಮ, ಅನುಭವ ಮತ್ತು ಸಾಧನೆಯ ಫಲಶ್ರುತಿಯಾಗಿ ಈ ಉನ್ನತ ಸ್ಥಾನ ಅವರಿಗೆ ದೊರಕಿದೆ. ಇದು ನಾಡಿನ ಹಾಗು ಹೊರನಾಡಿನ ಅದರಲ್ಲೂ ಮುಖ್ಯವಾಗಿ ದೆಹಲಿ ಎನ್‌ಸಿಆರ್‌ನ ಕನ್ನಡಿಗರಿಗೆ ಸಂದ ಗೌರವ ಹಾಗು ಎಲ್ಲಾ ಕನ್ನಡಿಗರಿಗೂ ಹೆಮ್ಮೆಯ ವಿಷಯವಾಗಿದೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಎರಡು ಬಾರಿಯ (2004–2006, 2006–2008) ಕಾರ್ಯಾವಧಿಯಲ್ಲಿ ಅವರು ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ, ಅದಕ್ಕಾಗಿ ಧನ ಕ್ರೋಢೀಕರಣೆ ಮತ್ತು ಕಟ್ಟಡದ ಉದ್ಘಾಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರಲ್ಲದೇ, ಸಂಘವು ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಬೆಳೆಯಲು ಸದೃಢವಾಗಿ ಮುನ್ನಡೆಯಲು ಮುಖ್ಯ ಕಾರಣಕರ್ತರಾಗಿದ್ದಾರೆ. ಹಾಗೆಯೇ 2005ರಲ್ಲಿ ನವದೆಹಲಿಯ ಪ್ರತಿಷ್ಠಿತ ವಿಶ್ವವಿದ್ಯಾಲಯ ಜೆಎನ್‌ಯು ನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಲ್ಲಿ ಮುಖ್ಯ ಭೂಮಿಕೆ ವಹಿಸಿ, ಪೀಠದ ಪ್ರಥಮ ಸ್ಥಾಪಕ ಅಧ್ಯಕ್ಷರಾಗಿ ಐದು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅನೇಕ ಪುಸ್ತಕಗಳನ್ನು ರಚಿಸಿ ಹೊರ ತಂದಿದ್ದಾರೆ.

ಕಳೆದ ವರ್ಷಗಳಲ್ಲಿ ಬಿಡುಗಡೆಗೊಂಡ ಅವರ ಆತ್ಮಕಥನ 'ಕಾಗೆ ಮುಟ್ಟಿದ ನೀರು' ಎಲ್ಲ ಕನ್ನಡಿಗರ ಮನಮುಟ್ಟಿ ಪ್ರಶಂಸೆಗೆ ಪಾತ್ರವಾಗಿದ್ದು ಬಹು ಬೇಡಿಕೆಯಿಂದ ಐದನೇ ಮುದ್ರಣ ಕಂಡಿದೆ. ಇತ್ತೀಚೆಗೆ ಅವರ 'ವರ್ತಮಾನ ಭಾರತ' ಪುಸ್ತಕವು ಚಿರಂತ್ ಪ್ರಕಾಶನದವರಿಂದ 17.03.2023ರಂದು ಬೆಂಗಳೂರಿನಲ್ಲಿ ಪ್ರಕಟಣೆಗೊಂಡು ಬಿಡುಗಡೆಯಾಗಿರುವುದು ಅವರ ಸಾಧನೆಗೆ ಸಂದ ಗೌರವ.

ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘಕ್ಕೆ, ಜೆಎನ್‌ಯು ಕನ್ನಡ ಅಧ್ಯಯನ ಪೀಠಕ್ಕೆ ಹಾಗು ದೆಹಲಿ ಕನ್ನಡಿಗರಿಗೆ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗುತ್ತಿರುವ ಅವರಿಗೆ ನಾಡಿನ, ಹೊರನಾಡಿನ ಸಮಸ್ತ ಕನ್ನಡಿಗರ ಪರವಾಗಿ, ಗೌರವಪೂರ್ವಕ ಅಭಿನಂದನೆಗಳು. ಪ್ರಾಧಿಕಾರದ ಅವರ ಅಧ್ಯಕ್ಷೀಯ ಕಾರ್ಯಾವಧಿಯಲ್ಲಿ ಕನ್ನಡವು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ, ಎಲ್ಲೆಡೆ ಮತ್ತಷ್ಟು ಪಸರಿಸಲಿ, ದೆಹಲಿ ಕರ್ನಾಟಕ ಸಂಘದ ಕನ್ನಡಪರ ಅಭಿವೃದ್ಧಿ ಕಾರ್ಯಗಳಿಗೆ ಅವರ ಸಹಕಾರ ಸಿಗಲಿ, ಈ ಅಭಿಯಾನದಲ್ಲಿ ಅವರು ಯಶಸ್ವಿಯಾಗಲಿ ಎಂದು ಅಭಿಮತ ಓದುಗರ ಪರವಾಗಿ ಸಂಪಾದಕ ಮಂಡಳಿ ಶುಭ ಕೋರುತ್ತಿದೆ.

**ದಿನಾಂಕ 07.04.2024 ರಂದು ಭಾನುವಾರ ದೆಹಲಿ ಕರ್ನಾಟಕ ಸಂಘದ ಸಹಕಾರದಲ್ಲಿ ಸೌಹಾರ್ದ ಕನ್ನಡ ಬಳಗ–ಕ್ರಿಕೆಟ್ ಸಮಿತಿಯಿಂದ ನವದೆಹಲಿಯ ತಾಲ್ಕಟೋರಾ ಕ್ರಿಕೆಟ್ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ಸೀಸನ್–3**

**ದಿನಾಂಕ 14.04.2024 ಭಾನುವಾರ ಸಂಜೆ ದೆಹಲಿ ಕರ್ನಾಟಕ ಸಂಘದ ಸಹಕಾರದಲ್ಲಿ ಗುರುಗಾಂವ್ ಕನ್ನಡ ಸಂಘದಿಂದ ಯುಗಾದಿ ಮಿಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು**

## ದೆಹಲಿ ಕರ್ನಾಟಕ ಸಂಘದಲ್ಲಿ 'ಸಾಹಿತ್ಯ ಸಂಜೆ':

# ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಶ್ರೀ ಲಕ್ಷ್ಮೀಶ ತೋಳ್ಪಾಡಿ ಹಾಗೂ ಪ್ರಖ್ಯಾತ ಪ್ರೇಮ ಕವಿ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರಿಗೆ ಗೌರವ ಸನ್ಮಾನ




ದಿನಾಂಕ 11.03.2024ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಕನ್ನಡ ಸಾಹಿತ್ಯ ಲೋಕದ ಇಬ್ಬರು ದಿಗ್ಗಜರೊಂದಿಗೆ 'ಸಾಹಿತ್ಯ ಸಂಜೆ' ಮತ್ತು ಸಂವಾದವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 2023ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಕನ್ನಡದ ಲೇಖಕರೂ, ಪರಿಸರ ತಜ್ಞರೂ ಆದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕನ್ನಡದ ಪ್ರಖ್ಯಾತ ಕವಿಗಳಾದ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು.

ಕಳೆದ ನವೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿದ್ದ ಕು. ಸುಧೀತಿ ಅಂಬಳೆ ಅವರು ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರಿಂದ ರಚಿತ ಭಾವಗೀತೆ 'ಅಮ್ಮ ನಿನ್ನ ಎದೆಯಾಳದಲ್ಲಿ ಎಂಬ ಹಾಡಿನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ನಡೆಸಿಕೊಟ್ಟರು. ಹೊಸ ಕಾರ್ಯಕಾರಿ ಸಮಿತಿ ಅಧಿಕಾರ ವಹಿಸಿಕೊಂಡ ನಂತರ ಆಯೋಜನೆಗೊಂಡ ಪ್ರಥಮ ಸಾಹಿತ್ಯಿಕ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳನ್ನು, ಅವರ ಕುಟುಂಬದವರನ್ನು ಹಾಗೂ ಸಾಹಿತ್ಯಾಸಕ್ತ ದೆಹಲಿ ಕನ್ನಡಿಗರನ್ನು ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಆತ್ಮೀಯವಾಗಿ ಸ್ವಾಗತಿಸಿದರು.

'ಮಹಾಭಾರತ ಅನುಸಂಧಾನದ ಭಾರತ ಯಾತ್ರೆ'ಎಂಬ ಕನ್ನಡ ಭಾಷೆಯಲ್ಲಿ ರಚಿತ ಕೃತಿಗೆ 2023ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನು ಪಡೆದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರ ಪರಿಚಯವನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಜಯಶ್ರೀ ಬಸವರಾಜು ಅವರು ಮಾಡಿಕೊಟ್ಟರು.

ಎಲ್ಲರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ದೆಹಲಿ ಕರ್ನಾಟಕ ಸಂಘದ ಎಲ್ಲರೂ ತಮ್ಮ ಕುಟುಂಬದವರಂತೆ ಭಾಸವಾಗುತ್ತಿದೆ. ತಮಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡುವ ಬಗ್ಗೆ ವಿಷಯ ತಿಳಿದಾಗ ಅಚ್ಚರಿ ಮತ್ತು ಸಂತೋಷವಾಯಿತು. ಪಂಪಭಾರತ, ವೇದವ್ಯಾಸರ ಮಹಾಭಾರತ ಮತ್ತು ಕುಮಾರವ್ಯಾಸರ ಮಹಾಭಾರತ ಕೃತಿಗಳು ಮೇರು ಗ್ರಂಥಗಳು. ಅರ್ಥ ಕಾಮಗಳ ರುಚಿ ಧರ್ಮವನ್ನು



ಬಿಟ್ಟಾಗ ವ್ಯಾಸರಿಗೆ ಅರ್ಥವಾಗಲಿಲ್ಲ. ಕನ್ನಡ ಭಾಷೆಯಲ್ಲಿ ಮರು ಸೃಷ್ಟಿ ಮಾಡುವ ಚಿರಂಜೀವಿತ್ವವಾಗಿಸುವ ಹಾಗು ಯಥಾ ಶಕ್ತಿ ಹಿಂಡುವ ಪ್ರಯತ್ನ ಮಾಡಿದ್ದೇನೆ. ಇದೊಂದು ಪ್ರಜ್ಞಾಪೂರ್ವಕ ಸಮ್ಮಿಲನ, ತಮಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ವ್ಯಾಸ–ಪಂಪ–ಕುಮಾರವ್ಯಾಸರಿಗೆ ಸಂದ ಪ್ರಶಸ್ತಿಯಾಗಿದೆ. ತಮ್ಮ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಮಗಳು ಮಾಳವಿಕ ಅವರೊಂದಿಗೆ ತಮ್ಮನ್ನು ಸಂಘಕ್ಕೆ ಆಹ್ವಾನಿಸಿ ಈ ಸುಂದರ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ನೀಡಿದ್ದಕ್ಕೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ಹಾಗೂ ಕಾರ್ಯಕಾರಿ ಸಮಿತಿಯವರಿಗೆ ಧನ್ಯವಾದಗಳು ಎಂದರು.

ನಂತರ ಸಂಘದ ಮಹಿಳಾ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ಪ್ರೇಮಕವಿಗಳಾದ ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರನ್ನು ನೆರೆದಿದ್ದವರಿಗೆ ಪರಿಚಯಿಸಿದರು.

ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರು ರಚನೆ ಮಾಡಿದ ಜನಪ್ರಿಯ ಪ್ರೇಮ ಕವಿತೆಗಳನ್ನು ಭಾವಗೀತೆಗಳನ್ನು ದೆಹಲಿಯ ಕಲಾವಿದರು ಸುಶ್ರಾವ್ಯವಾಗಿ ಹಾಡಿದರು. ಕು.ಪೂರ್ಣಿಮಾ ಅಡಿಗ ಮತ್ತು ಶ್ರೀ ಶ್ರೀಹರಿ ಶೇಖರ್ ಅವರು 'ನೆನಪಿದೆಯೇ ಓ ಗೆಳತಿ'...ಎಂಬ ಹಾಡನ್ನು, ಶ್ರೀಮತಿ ಮಮತಾ ಶಿವರಾಮ್ ಅವರು' ಹಿತ್ತಲ ಬೇಲಿಯ ಕಾವಲಿನಲ್ಲಿ'.... ಎಂಬ ಗೀತೆಯನ್ನು, ಶ್ರೀಮತಿ ಸುನಿತಾ ಅರವಿಂದ ಅವರು 'ಆಗು ಗೆಳೆಯ, ಆಗು ನೀ ಭರವಸೆಯ ಪ್ರವಾದಿ'.. ಎನ್ನುವ ಗೀತೆಗಳನ್ನು ಸುಮಧುರವಾಗಿ ಹಾಡಿದರು. 'ಜಾಲಿ ಬಾರಿನಲ್ಲಿ ಕೂತು ಪೋಲಿ ಗೆಳೆಯರು ಗೋಪಿಯನ್ನು ಗೇಲಿ ಮಾಡುತ್ತಿದ್ದರೆ'.. ಎಂಬ ಜನಪ್ರಿಯ ಗೀತೆಯನ್ನು ಶ್ರೀ ಎಸ್. ಕುಮಾರ, ಶ್ರೀ ಸಂತೋಷ ಉಪಾಧ್ಯಾಯ ಹಾಗೂ ಶ್ರೀ ಶ್ರೀಹರಿ ಶೇಖರ್ ಸಮೂಹವಾಗಿ ಹಾಡಿದರು. ನಂತರ ಕು. ಪೂರ್ಣಿಮಾ ಅಡಿಗ ಅವರು 'ಕರ್ನಾಟಕ ಬರಿ ನಾಡಲ್ಲ, ನಮ್ಮ ಸಂಸ್ಕೃತಿಯ ಧಾತು, ಕನ್ನಡ ಕೇವಲ ನುಡಿಯಲ್ಲ'... ಎಂಬ ಹಾಡನ್ನು ಮತ್ತು ಶ್ರೀ ಎಸ್. ಕುಮಾರ ಅವರು 'ಸುಬ್ಬ ಭಟ್ಟರ ಮಗಳೇ ಇದೆಲ್ಲಾ ನಂದೇ ತಗೊಳ್ಳೆ ಎನ್ನುವ ಗೀತೆಯನ್ನು ಹಾಡಿ ಮೆಚ್ಚುಗೆ ಪಡೆದರು. ಅನಂತರ ಸ್ಥಳೀಯ ಕಲಾವಿದರು ಹಾಡಿದ, ಶ್ರೀ ಹರಿಪ್ರಿಯ ಅವರ ನಿರ್ದೇಶನದಲ್ಲಿ ಸಿದ್ಧಪಡಿಸಿದ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರ 'ಇರಬೇಕು ಇರುವಾಗ ಹೇಗೆ'ಎಂಬ ಅಪ್ರಕಟಿತ ಗೀತೆಯ ಆಧಾರಿತ ವಿಡಿಯೋ ಅನ್ನು ಪ್ರದರ್ಶಿಸಲಾಯಿತು. ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರ ರಚನೆಯ ಗೀತೆಗಳನ್ನು ಹಾಡುವುದರೊಂದಿಗೆ ಅವರಿಗೆ ಗೀತ ನಮನದ ಗೌರವ ನೀಡಲಾಯಿತು.

ಅವರು ಮಾತನಾಡಿ ತಾವೊಬ್ಬ ಮೇಸ್ತ್ರರಾಗಿದ್ದವರು ಕವಿಯಾಗಿ ಮಾರ್ಪಟ್ಟಿದ್ದನ್ನು ವಿವರಿಸುತ್ತಾ ತಮ್ಮನ್ನು OUTSTANDING POET ಅಂದರೆ ಯಾವಾಗಲೂ ಹೊರಗಡೆ ನಿಲ್ಲುವ ಕವಿ ಎಂದು ಅಣಕವಾಗಿ ಕೆಲವರು ಹೇಳಿದ್ದನ್ನು ತಿಳಿಸಿದರು. ತಮ್ಮನ್ನು ಕೇವಲ ಪ್ರೇಮಕವಿ ಎಂದು ನೋಡುತ್ತಾರೆ ಕರೆಯುತ್ತಾರೆ, ಆದರೆ, ಪ್ರೇಮದ ಪರಿಧಿ ದೊಡ್ಡದಾಗಬೇಕು. ವಿಹದ ಕವಿ ಪರದ ಕವಿಯಲ್ಲಿ ಸಾರ್ಥಕತೆ ಕಾಣುವಂತಹವನು ಎನ್ನುತ್ತಾ 'ಇರಬೇಕು ಇರುವಾಗ ಹೇಗೆ ಎಲ್ಲಾ ನನ್ನದು ಎನ್ನುವ ಹಾಗೆ' ಎಂಬ ಪದ್ಯದ ಸಾಲನ್ನು ವ್ಯಾಖ್ಯಾನಿಸಿದರು. ಶ್ರೀ ಕೆ.ಎಸ್. ನರಸಿಂಹ ಸ್ವಾಮಿ ಅವರು ಹೇಳುತ್ತಿದ್ದ ಸಾಲುಗಳನ್ನು ನೆನಪಿಸಿಕೊಳ್ಳುತ್ತಾ ಒಬ್ಬ ಕವಿ ನಿಜವಾಗಲೂ ಕವಿಯಾಗುತ್ತಾನೆ ಯಾವಾಗ, ಅವನ ಗೀತೆಗಳು ಜನಪದ ಗೀತೆಗಳಾದ, ಕವಿತೆಗಳು ಜನರನ್ನು ಮುಟ್ಟಿದಾಗ ಎಂದರು. ತಾವು ಮತ್ತು ಶ್ರೀ ಲಕ್ಷ್ಮೀಶ ತೋಳ್ಪಾಡಿಯವರಿಬ್ಬರೂ ಲಂಕೇಶ್ ಅವರ ಶಿಷ್ಯರಾಗಿದ್ದೆವೆಂದು ಸ್ಮರಿಸುತ್ತಾ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಬೆಂಗಳೂರಿನಲ್ಲಿ ಆಗಾಗ ಸಿಕ್ಕಾಗ ತಮ್ಮನ್ನು ಇಲ್ಲಿಗೆ ಬರಲು ಆಹ್ವಾನಿಸುತ್ತಿದ್ದರು. ಆದರೆ ಈ ಹಿಂದೆ ಬರಲು ಸಾಧ್ಯವಾಗಿರಲಿಲ್ಲ. ಇಂದು ತಮ್ಮ ಮುಂದೆ ತಾವು ರಚಿಸಿದ ಗೀತೆಗಳನ್ನು ಇಲ್ಲಿನ ಕಲಾವಿದರೆಲ್ಲಾ ಚೆನ್ನಾಗಿ ಹಾಡಿದ್ದಾರೆ. ಅವರೆಲ್ಲರಿಗೂ, ಡಾ. ವೆಂಕಟಾಚಲ ಹೆಗಡೆ ಅವರಿಗೂ ಹಾಗೂ ಶ್ರೀ ಹರಿಪ್ರಿಯ ಅವರಿಗೆ ನಾನು ಆಭಾರಿ, ದೆಹಲಿ ಕರ್ನಾಟಕ ಸಂಘಕ್ಕೆ ಹಾಗೂ ಪದಾಧಿಕಾರಿಗಳಿಗೆ ಧನ್ಯವಾದಗಳು ಎಂದರು.

ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ, ಚಿಂತನಕಾರ್ತಿ,

## ಅಭಿನಂದನೆ

ದಿನಾಂಕ 12.03.2024 ರಂದು ನವದೆಹಲಿಯ ಕೋಪರ್ನಿಕಸ್ ಮಾರ್ಗದಲ್ಲಿರುವ ಕಮಾನಿ ಸಭಾಗಾರದಲ್ಲಿ ನಡೆದ ಸಮಾರಂಭದಲ್ಲಿ 2023ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಭಾರತೀಯ 24 ವಿವಿಧ ಭಾಷೆಯ ಕೃತಿಕಾರರಿಗೆ ನೀಡಿ ಗೌರವಿಸಲಾಗಿದೆ. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಾಧವ ಕೌಶಿಕ್ ಅವರು ಪ್ರಶಸ್ತಿಗಳನ್ನು ಪುರಸ್ಕೃತರಿಗೆ ಪ್ರದಾನ ಮಾಡಿದರು. ಕನ್ನಡ ಭಾಷೆಯಲ್ಲಿ ರಚಿಸಲಾದ 'ಮಹಾಭಾರತ ಅನುಸಂಧಾನದ ಭಾರತಯಾತ್ರೆ' ಕೃತಿಗಾಗಿ ಕನ್ನಡದ ಶ್ರೇಷ್ಠ ಲೇಖಕರು ಹಾಗೂ ಪರಿಸರ ತಜ್ಞರೂ ಆದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ಈ ಬಾರಿಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಸ್ವೀಕರಿಸಿರುವುದು ಎಲ್ಲ ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಪ್ರಖ್ಯಾತ ಒಡಿಯಾ ಲೇಖಕರಾದ ಶ್ರೀಮತಿ ಪ್ರತಿಭಾ ರೇ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷೆ ಶ್ರೀಮತಿ ಕುಮುದ್ ಶರ್ಮಾ ಹಾಗೂ ಕಾರ್ಯದರ್ಶಿ ಶ್ರೀ ಶ್ರೀನಿವಾಸ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮ ಅಧಿಕಾರಿಯಾದ ಕನ್ನಡಿಗ ಶ್ರೀ ಎಲ್. ಸುರೇಶ್ ಕುಮಾರ್ ಅವರು ಈ ಸಮಾರಂಭದ ಸಮನ್ವಯ ಮಾಡಿದ್ದರು.




2023ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾಗೂ ಅಭಿಮತ ಓದುಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು!

## ಪರಿಚಯ

### ಶ್ರೀ ಲಕ್ಷ್ಮೀಶ ತೋಳ್ಪಾಡಿ

### 2023ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು



ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ಕನ್ನಡದ ಶ್ರೇಷ್ಠ ಲೇಖಕರು ಮತ್ತು ಪರಿಸರ ತಜ್ಞರು. ಇವರು 1947ರ ನವೆಂಬರ್ 12ರಂದು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಜನಿಸಿದರು. ಪುತ್ತೂರು ಬೋರ್ಡ್ ಹೈಸ್ಕೂಲ್, ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ತಮ್ಮ ಶಿಕ್ಷಣವನ್ನು ಪಡೆದರು. ಇವರು ಸಾಂಪ್ರದಾಯಿಕ ಮಠಗಳಲ್ಲಿ ವಿದ್ಯಾಭ್ಯಾಸ ಮಾಡಿದ ಸಂಸ್ಕೃತ ವಿದ್ವಾಂಸರು. ಕನ್ನಡದ ಜೊತೆಗೆ ಸಂಸ್ಕೃತ ಮತ್ತು ಇಂಗ್ಲೀಷನ್ನು ಬಲ್ಲವರು. ವೃತ್ತಿಯಿಂದ ಕೃಷಿಕರು. ಇದುವರೆಗೆ ಅವರು ಒಟ್ಟು ಎಂಟು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಮಹಾಯುದ್ಧಕ್ಕೆ ಮುನ್ನ', 'ಬೆಟ್ಟ ಮಹಮ್ಮದನ ಬಳಿಗೆ ಬಾರದಿದ್ದರೆ', 'ಸಂಪಿಗೆ ಭಾಗವತ' ಮತ್ತು 'ಆನಂದ ಲಹರಿ' ಇವರ ಕೃತಿಗಳಲ್ಲಿ ಕೆಲವು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿ.ಕೃ. ಗೋಕಾಕ್ ಪ್ರಶಸ್ತಿ ಮತ್ತು ಪೊಳಲಿ ಶಾಸ್ತ್ರಿ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿ ಮತ್ತು ಗೌರವಗಳನ್ನು ಪಡೆದಿದ್ದಾರೆ.

'ಮಹಾಭಾರತ ಅನುಸಂಧಾನದ ಭಾರತಯಾತ್ರೆ' ಎಂಬುದು ಭಾರತೀಯ ಮಹಾ ಕಾವ್ಯವಾದ ಮಹಾಭಾರತದ ಗಹನವೂ ಜಟಿಲವೂ ಆದ ಪ್ರಪಂಚವನ್ನು ಒಳಹೊಕ್ಕು ಶೋಧಿಸುವ ವಿಚಾರ ಪ್ರಚೋದಕವಾದ ಪ್ರಬಂಧಗಳ ಸಂಕಲನ. ಮಾನವ ಬದುಕಿನ ಸಾರಸರ್ವಸ್ವವನ್ನು, ಇತಿಹಾಸ, ಪರಂಪರೆಗಳು ಮತ್ತು ಮಾನವ ಮನಸ್ಸಿನ ಸಂಕೀರ್ಣತೆಗಳನ್ನು ಚಿತ್ರಿಸುವ ವ್ಯಾಸರ ಪರಿಪ್ರೇಕ್ಷ್ಯದ ಅನನ್ಯತೆಯನ್ನು ಲೇಖಕರು ಇಲ್ಲಿ ಅನ್ವೇಷಿಸಿದ್ದಾರೆ. ಇಡೀ ಗ್ರಂಥವೇ ಮಹಾಭಾರತದ ಹಲವಾರು ಪ್ರಸಂಗಗಳ ವಿನೂತನ ವಿಚಾರಗಳ ಪುನರ್ ಸೃಷ್ಟಿಯಾಗಿದೆ. ಮಹಾಭಾರತದ ಈ ಕಥನ ಇಡೀ ಚಿಂತನಾ ಪ್ರಕ್ರಿಯೆಯನ್ನೇ ಉನ್ನತೀಕರಿಸುವ ಮೂಲಕ ಮಹಾಭಾರತ ಮಹಾಕಾವ್ಯವನ್ನು ಕನ್ನಡಕ್ಕೆ ಆಪ್ತವಾಗಿಸಿದೆ. ಆ ಕಾರಣ 'ಮಹಾಭಾರತ ಅನುಸಂಧಾನದ ಭಾರತಯಾತ್ರೆ'ಯು ಕನ್ನಡದಲ್ಲಿ ರಚಿತವಾಗಿರುವ ಭಾರತೀಯ ಪ್ರಬಂಧಗಳ ಪ್ರಕಾರಕ್ಕೆ ಬಹುಮುಖ್ಯ ಕೊಡುಗೆ ಎಂದು ಪರಿಗಣಿಸಿ ಈ ಕೃತಿಗೆ 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.ಅವರಿಗೆ ಹಾರ್ದಿಕ ಅಭಿನಂದನೆಗಳು.!

ಲೇಖಕಿ ಡಾ. ಎಚ್.ಎಸ್. ಪುಷ್ಪ ಅವರು ಮಾತನಾಡಿ ತಾವು ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೆಹಲಿ ಬಂದ ನಿಮಿತ್ತ ಸಂಘಕ್ಕೆ ಭೇಟಿ ನೀಡಿದ ಆಕಸ್ಮಿಕ ಅತಿಥಿಯಾಗಿದ್ದೇನೆ. ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರೊಬ್ಬ ಅಧ್ಯಯನ ಕವಿ, ಅವರಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿರುವುದಕ್ಕೆ ಅಭಿನಂದನೆಗಳು. ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರ ಜನಪ್ರಿಯತೆ ಅವರಿಗೆ ಪೋಲಿ ಕವಿ, ಪ್ರೇಮದ ಕವಿ ಎಂಬ ಹೆಸರು ತಂದುಕೊಟ್ಟಿದೆ. ಅವರಿಗೂ ಶುಭಾಶಯಗಳು. ಒಂದು ಒಳ್ಳೆಯ ಸಾಹಿತ್ಯ ಕಾರ್ಯಕ್ರಮ ಇಲ್ಲಿನ ಕರ್ನಾಟಕ ಸಂಘವು ಮಾಡುತ್ತಿರುವುದನ್ನು ನೋಡಿ ಬಹಳ ಸಂತೋಷವಾಗಿದೆ. ಇನ್ನೂ ಹೆಚ್ಚು ಇಂತಹ ಕಾರ್ಯಕ್ರಮ ಮಾಡಿ, ಎಲ್ಲರಿಗೂ ಶುಭವಾಗಲಿ ಎಂದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಸಿ.ಎಂ. ನಾಗರಾಜ ಅವರು ನಮ್ಮ ಹೊಸ ಕಾರ್ಯಕಾರಿ ಸಮಿತಿ ಬಂದ ಮೇಲೆ ಆಗುತ್ತಿರುವ ಮೊದಲ ಸಾಹಿತ್ಯಿಕ ಕಾರ್ಯಕ್ರಮ ಇದಾಗಿದ್ದು ಇದರ ಆಯೋಜನೆಯಲ್ಲಿ ಮುತುವರ್ಜಿ ವಹಿಸಿದ ಸಂಘದ ಮಾಜಿ ಅಧ್ಯಕ್ಷರೂ, ಜೆಎನ್‌ಯು ಪ್ರಾಧ್ಯಾಪಕರೂ ಆದ ಡಾ. ವೆಂಕಟಾಚಲ ಹೆಗಡೆ ಅವರಿಗೆ ಕೃತಜ್ಞತೆಗಳು ಎಂದರು. ಕನ್ನಡದ ಪ್ರಸಿದ್ಧ ಕವಿ ಶ್ರೀ ಲಕ್ಷ್ಮಣ ರಾವ್ ಅವರ ಅಭಿಮಾನಿಗಳು ದೆಹಲಿಯಲ್ಲಿ ಬಹಳ ಜನರು ಇದ್ದಾರೆ. ಆದರೆ ಇಂದು ವರ್ಕಿಂಗ್ ದಿನವಾದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಸೇರಲು ಸಾಧ್ಯವಾಗಿಲ್ಲ, ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರಿಗೆ ಮತ್ತು ಈ ಬಾರಿಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಮತ್ತು ಅವರ ಕುಟುಂಬದವರಿಗೆ ಅಭಿನಂದನೆಗಳು. ಹಿರಿಯ ಸಾಹಿತಿ ಹಾಗೂ ಲೇಖಕಿ ಡಾ. ಎಚ್.ಎಲ್. ಪುಷ್ಪ ಅವರಿಗೆ ಹಾಗೂ ಎನ್.ಎಸ್.ಡಿ. ಯ ಕಲಾ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರ ಅವರಿಗೆ ಹಾಗು ಈ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಕೃತಜ್ಞತೆಗಳು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರನ್ನು ಮತ್ತು ಶ್ರೀ ಬಿ.ಆರ್. ಲಕ್ಷ್ಮಣ್ ರಾವ್ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಹಾಗೂ ಅನೇಕ ಇತರ ಪದಾಧಿಕಾರಿಗಳು, ಸದಸ್ಯರು, ದೆಹಲಿ ಕನ್ನಡಿಗರು, ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಾಹಿತಿಗಳ ಜೊತೆ ಈ ಸಾಹಿತ್ಯ ಸಂಜೆ-ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸ್ಥಳೀಯ ಕಲಾವಿದರು ಪ್ರಸ್ತುತ ಪಡಿಸಿದ ಸುಮಧುರ ಗೀತೆಗಳ ಗಾಯನವನ್ನು ಕೇಳಿ ಸಂಭ್ರಮಿಸಿದರು.

ಕೊನೆಯಲ್ಲಿ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎನ್.ಆರ್. ಶ್ರೀನಾಥ ಅವರು ಸಂಘದ ಆಹ್ವಾನ ಸ್ವೀಕರಿಸಿ, ಕಾರ್ಯಕ್ರಮಕ್ಕೆ ಆಗಮಿಸಿ ಗೌರವ ಅಭಿನಂದನೆ ಸ್ವೀಕರಿಸಿದ ಇಬ್ಬರೂ ಸರಸ್ವತಿ ಪುತ್ರರಾದ ಕವಿ ಮತ್ತು ಸಾಹಿತಿ ಗಣ್ಯರಿಗೆ ವಂದನೆಗಳನ್ನು ಅರ್ಪಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿ.ಎಂ. ನಾಗರಾಜ ಅವರಿಗೆ, ಉಪಸ್ಥಿತರಿದ್ದ ಸಂಘದ ಪದಾಧಿಕಾರಿಗಳು ಹಾಗೂ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ತಿಳಿಸಿದರು.

***ಅಭಿಮತ ವರದಿ***

## ಪರಿಚಯ



### ಶ್ರೀ ಬಿ.ಆರ್. ಲಕ್ಷ್ಮಣ ರಾವ್

**ಕನ್ನಡ ಪ್ರಖ್ಯಾತ ಕವಿಗಳು**

ಪ್ರೇಮಕವಿಯೆಂದೇ ಪ್ರಸಿದ್ಧರಾದ ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರು 09.09.1946ರಲ್ಲಿ ಶ್ರೀ ಬಿ.ಆರ್. ರಾಜಾರಾವ್ ಮತ್ತು ಶ್ರೀಮತಿ ವೆಂಕಟಲಕ್ಷ್ಮಮ್ಮ ಅವರ ಪುತ್ರನಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ ಗ್ರಾಮದಲ್ಲಿ ಜನಿಸಿದರು. ಬಿ.ಎ., ಎಂ.ಎಡ್. ಪದವೀಧರರಾದ ಇವರು ಚಿಂತಾಮಣಿ ನಗರದಲ್ಲಿ ತಮ್ಮದೇ ಆದ ಸ್ವಂತ ಟ್ಯುಟೋರಿಯಲ್ಸ್ ನಡೆಸುತ್ತಿದ್ದು, ಈಗ ವಿಶ್ರಾಂತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

'ಗೋಪಿ ಮತ್ತು ಗಾಂಡಲೀನ' (1971) ದಿಂದ ಮೊದಲುಗೊಂಡು 'ನವೋನ್ಮೇಷ' (2020) ದವರೆಗೆ ಇವರ ಒಂಬತ್ತು ಕವನ ಸಂಕಲನಗಳು ಪ್ರಕಟವಾಗಿವೆ. ಜೊತೆಗೆ ಹನಿಗವನ ಮತ್ತು ಭಾವಗೀತೆಗಳ ಪ್ರತ್ಯೇಕ ಸಂಕಲನಗಳನ್ನೂ ಸಹ ಇವರು ಹೊರ ತಂದಿದ್ದಾರೆ. ಸಣ್ಣಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅನುವಾದ, ವ್ಯಕ್ತಿಚಿತ್ರ, ಲಲಿತ ಪ್ರಬಂಧ-ಹೀಗೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಇವರು ಕೃತಿರಚನೆ ಮಾಡಿದ್ದಾರೆ. ಇವರು ರಚಿಸಿದ ಅನೇಕ ಗೀತೆಗಳು ಚಲನಚಿತ್ರಗಳಲ್ಲಿ ಮೂಡಿ ಬಂದಿವೆ. ಇಂಗ್ಲೆಂಡ್, ಅಮೆರಿಕ, ಸಿಂಗಪುರ, ಮಧ್ಯ ಪ್ರಾಚ್ಯದೇಶಗಳ ಕನ್ನಡ ಸಂಘಗಳಿಂದ ಆಹ್ವಾನಿಸಲ್ಪಟ್ಟು ಸನ್ಮಾನಿತರಾಗಿದ್ದಾರೆ. ಇವರ ಕವಿತೆಗಳು ಶಾಲಾ ಕಾಲೇಜುಗಳಲ್ಲಿ ಪಠ್ಯಗಳಾಗಿವೆ; ಇಂಗ್ಲಿಷ್ ಮತ್ತು ಹಲವು ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಇವರ ಭಾವಗೀತೆಗಳು ಮತ್ತು ಚಿತ್ರಗೀತೆಗಳು ಅಪಾರ ಜನಪ್ರಿಯತೆ ಗಳಿಸಿವೆ.

ಇವರಿಗೆ ಸಂದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಕೆಲವು: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (1981), ಡಾ. ಪುತಿನ ಕಾವ್ಯ ಪುರಸ್ಕಾರ (2004), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2010) ಮತ್ತು ಮಾಸ್ತಿ ಪ್ರಶಸ್ತಿ (2014). ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ಹಿರಿಯ ಸಾಹಿತಿ ಮತ್ತು ಪ್ರೇಮಕವಿ ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರೀತಿಪೂರ್ವಕ ಅಭಿನಂದನೆಗಳು.!

## ಅಭಿನಂದನೆ



ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ (ಡಿಟಿಯು-Delhi Technological University) ದಲ್ಲಿ ವಿನ್ಯಾಸ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರೂ, ಹೆಮ್ಮೆಯ ದೆಹಲಿ ಕನ್ನಡಿಗರಾದ ಡಾ. ರಂಗನಾಥ ಎಂ. ಸಿಂಗಾರಿ ಅವರು ತಮ್ಮ ರೀಸರ್ಚ್ ಸ್ಕಾಲರ್ಸ್ ಹಾಗೂ ಸಹೋದ್ಯೋಗಿಗಳಾದ ಡಾ. ಪರ್‌ವೇಶ್ ಅಲಿ, ಡಾ. ಆರ್.ಎಸ್. ವಾಲಿಯಾ ಮತ್ತು ಡಾ. ಕಾಸಿಮ್ ಮುರ್ತಜ ಅವರೊಂದಿಗೆ ಮಾಡಿದ Thermal Additive Centrifugal Abrasive Flowmachining and Method There of ಎಂಬ ಆವಿಷ್ಕಾರಕ್ಕೆ ಪೇಟೆಂಟ್ ಲಭಿಸಿದ್ದು ಭಾರತ ಸರ್ಕಾರದ The Patent Office ನಿಂದ ಪೇಟೆಂಟ್ ಪ್ರಮಾಣ ಪತ್ರ ಪ್ರದಾನ ಮಾಡಲಾಗಿದೆ. ಇದು ಸಮಸ್ತ ದೆಹಲಿ ಕನ್ನಡಿಗರಿಗೆ ಸಂತಸ ಹಾಗೂ ಹೆಮ್ಮೆ ತಂದಿದೆ.

ಡಾ. ರಂಗನಾಥ ಎಂ. ಸಿಂಗಾರಿ ಅವರಿಗೆ ಮತ್ತು ಅವರ ಯಶಸ್ವಿ ತಂಡದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು!



# ಆರೋಗ್ಯಕರ ಕಣ್ಣುಗಳನ್ನು ಕಾಪಾಡಿಕೊಳ್ಳುವ ಹಾದಿ

ಇಂದಿನ ಜಗತ್ತಿನಲ್ಲಿ ಆರೋಗ್ಯಕರ ಮನಸ್ಸು ಮತ್ತು ಆರೋಗ್ಯಕರ ದೇಹವನ್ನು ಹೊಂದಿರುವುದು ಬಹಳ ಮುಖ್ಯ. ಉತ್ತಮ ಆಹಾರ ಪದ್ಧತಿ, ಜೀವನಶೈಲಿ ಮತ್ತು ದೈಹಿಕ ಚಟುವಟಿಕೆಯನ್ನು ನಿರ್ವಹಿಸಿಕೊಳ್ಳುವುದು ಆರೋಗ್ಯಕರ ಕಣ್ಣುಗಳನ್ನು ಕಾಪಾಡಿಕೊಳ್ಳಲು ಬಹಳಷ್ಟು ಸಹಕಾರಿಯಾಗುತ್ತದೆ. ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ನಮಗೆ ಸಹಾಯ ಮಾಡುವ ಕೆಲವು ಅಂಶಗಳನ್ನು ಪರಿಶೀಲಿಸೋಣ.

**ಉತ್ತಮ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಆಹಾರಗಳು** : ಹಸಿರು ಎಲೆಗಳ ತರಕಾರಿಗಳಾದ ಪಾಲಕ್ ಮತ್ತು ಕೋಸುಗಡ್ಡೆ, ಇತರ ತರಕಾರಿಗಳಾದ ಕ್ಯಾರೆಟ್, ಕುಂಬಳಕಾಯಿ ಮತ್ತು ಸಿಹಿ ಆಲೂಗಡ್ಡೆ, ಮಾವು, ಹಾಲು, ಮೊಟ್ಟೆಗಳು ವಿಟಮಿನ್ ಎ ಯನ್ನು ಸಮೃದ್ಧವಾಗಿ ಹೊಂದಿರುವ ಕೆಲವು ಆಹಾರಗಳಾಗಿವೆ. ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ಮಂದ ಬೆಳಕಿನ ಪರಿಸ್ಥಿತಿಗಳಿಗೆ ಕಣ್ಣು ಹೊಂದಿಕೊಳ್ಳಲು ವಿಟಮಿನ್ ಎ ಅತ್ಯಗತ್ಯ. ವಿಟಮಿನ್ ಎ ಭರಿತ ಆಹಾರಗಳ ಸೇವನೆಯು ಜನರು ತಮ್ಮ ಕನ್ನಡಕ / ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ಧರಿಸದೇ ಇರಲು ಸಹಾಯ ಮಾಡುತ್ತದೆ ಎಂಬುದು ಒಂದು ಮಿತ್ಯವಾಗಿದೆ.

ಆಂಟಿ-ಆಕ್ಸಿಡೆಂಟ್ ಭರಿತ ಆಹಾರಗಳಾದ ಡಾರ್ಕ್, ಎಲೆಗಳ ತರಕಾರಿಗಳು, ಬ್ಲೂಬೆರ್ರಿ, ಸ್ಟ್ರಾಬೆರಿ, ಕ್ರ್ಯಾನ್‌ಬೆರಿ, ಪ್ಲಮ್, ಚೆರ್ರಿಗಳಂತಹ ಹಣ್ಣುಗಳು ಕಣ್ಣುಗಳಿಗೆ ಆಕ್ಸಿಡೇಟಿವ್ ಹಾನಿಯನ್ನು ತಡೆಯುತ್ತದೆ ಮತ್ತು ಕಣ್ಣಿನಲ್ಲಿ ನೈಸರ್ಗಿಕ ವಯಸ್ಸಾದ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ. ಅವು ಕಣ್ಣಿಗೆ ರಕ್ಷಣೆ ನೀಡುತ್ತವೆ ಮತ್ತು ಕೆಲವು ವಯಸ್ಸಿಗೆ ಸಂಬಂಧಿಸಿದ ಅವನತಿಗಳನ್ನು (ARMD) ತಡೆಯುತ್ತವೆ.

ಒಮೆಗಾ-3 ಕೊಬ್ಬಿನಾಮ್ಲಗಳು ಮುಖ್ಯವಾಗಿ ಮೀನುಗಳು ಮತ್ತು ಸಮುದ್ರಾಹಾರಗಳಲ್ಲಿ ಕಂಡುಬರುತ್ತವೆ. ಅಗಸೆ ಬೀಜಗಳು, ಚಿಯಾ ಬೀಜಗಳು ಮತ್ತು ವಾಲ್‌ನಟ್‌ಗಳಂತಹ ಬೀಜಗಳು ಮತ್ತು ನಟ್ಸ್‌ಗಳು ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ಅಗತ್ಯ ಪೋಷಕಾಂಶವನ್ನು ನಮಗೆ ಒದಗಿಸುತ್ತವೆ ಮತ್ತು ಕೆಲವು ರೀತಿಯ ಕಣ್ಣಿನ ಶುಷ್ಕತೆ (ಒಣ ಕಣ್ಣುಗಳು-Dry Eyes) ಸಮಸ್ಯೆಯ ಚಿಕಿತ್ಸೆಗೆ ಸಹಾಯ ಮಾಡುತ್ತವೆ ಎನ್ನುವುದು ತಿಳಿದಿರುವ ಮಾಹಿತಿ.

**ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ದೈಹಿಕ ಚಟುವಟಿಕೆಗಳು** : ಆರೋಗ್ಯಕರ ಕಣ್ಣುಗಳನ್ನು ಕಾಪಾಡಿಕೊಳ್ಳಲು ನಿಯಮಿತವಾಗಿ ವ್ಯಾಯಾಮ ಮಾಡುವುದು ಮತ್ತು ದೈಹಿಕ ಫಿಟ್ನೆಸ್ ದಿನಚರಿಯನ್ನು ಹೊಂದಿರುವುದು ಸಹ ಅತ್ಯಗತ್ಯ.

ವಿಶೇಷವಾಗಿ ಮಕ್ಕಳು ಮತ್ತು ಯುವಜನರಲ್ಲಿ ಆರೋಗ್ಯಕರ ಕಣ್ಣುಗಳನ್ನು ಹೊಂದಲು ಹೊರಾಂಗಣ ಚಟುವಟಿಕೆಗಳನ್ನು ಮಾಡಲು ಪ್ರೋತ್ಸಾಹಿಸಲಾಗುತ್ತದೆ, ಅದರಲ್ಲೂ ಈ ಚಟುವಟಿಕೆಗಳು ಸಮೀಪದೃಷ್ಟಿ (ಮಯೋಪಿಯಾ-ಮೈನಸ್ ಲೆನ್ಸ್‌ಗಳಿಂದ ಸರಿಪಡಿಸಲ್ಪಟ್ಟ ಕಣ್ಣಿನ ವಕ್ರೀಕಾರಕ ಸ್ಥಿತಿ) ತಡೆಗಟ್ಟುವಲ್ಲಿ ಸಂಭವನೀಯ ಪಾತ್ರವನ್ನು ಸೂಚಿಸುವ ಕೆಲವು ಅಧ್ಯಯನಗಳಿವೆ.



ಲೇಖಕರು - ಡಾ. ಅನು ಪ್ರಸಾದ್ ಜಿ
ಎಂಬಿಬಿಎಸ್, ಎಂಎಸ್ (Ophthalmology)
ಕಂನ್ಸಲ್ಟೆಂಟ್ ನೇತ್ರ ತಜ್ಞರು,
ಫೋರ್ಟಿಸ್ ಎಸ್ಕಾರ್ಟ್ಸ್ ಹಾರ್ಟ್ ಇನ್ಸ್ಟಿಟ್ಯೂಟ್,
ಓಖ್ಲಾ ರಸ್ತೆ, ನವದೆಹಲಿ- 110025
(ಮೊ): 8792573931
ಇಮೇಲ್ : anu8vims@gmail.com

ಜೀವನದಲ್ಲಿ ಸಕ್ರಿಯವಾಗಿರುವುದು, ದೀರ್ಘಾವಧಿಯಲ್ಲಿ ದೃಷ್ಟಿ ಮತ್ತು ಕಣ್ಣುಗಳ ಆರೋಗ್ಯದ ಮೇಲೆ ಪರಿಣಾಮ ಬೀರುವಂತಹ ಮಧುಮೇಹ, ಹೆಚ್ಚಿನ ಮಟ್ಟದ ಕೊಲೆಸ್ಟ್ರಾಲ್ ಮತ್ತು ಅಧಿಕ ರಕ್ತದೊತ್ತಡದಂತಹ ಜೀವನಶೈಲಿಯಿಂದಾಗುವ ಅಸ್ವಸ್ಥತೆಗಳನ್ನು ತಡೆಯಲು ಸಹಾಯ ಮಾಡುತ್ತದೆ.

**ಕಣ್ಣಿನ ಆರೋಗ್ಯಕ್ಕೆ ಜೀವನಶೈಲಿ ಹೊಂದಾಣಿಕೆ:**

**ಪರದೆಯ ಸಮಯ (Screen Time) ವನ್ನು ಮಿತಿಗೊಳಿಸಿ** : ಪರದೆಯ ಸಮಯವು ವಿವಿಧ ಉದ್ದೇಶಗಳಿಗಾಗಿ ಬಳಸುವ ಕಂಪ್ಯೂಟರ್‌ಗಳು, ಮೊಬೈಲ್‌ಗಳು, ಟ್ಯಾಬ್ಲೆಟ್‌ಗಳು ಮತ್ತು ಒಂದೇ ರೀತಿಯ ಗ್ಯಾಜೆಟ್‌ಗಳ ಮುಂದೆ ಇರುವ ಸಮಯವನ್ನು ಒಳಗೊಂಡಿರುತ್ತದೆ. ಇಂಟರ್ನೆಟ್ ಮತ್ತು ವಿದ್ಯುನ್ಮಾನ ಮಾಧ್ಯಮ/ಇ-ಮಾಧ್ಯಮಗಳ ಈ ಯುಗದಲ್ಲಿ, ನಮ್ಮಲ್ಲಿ ಹೆಚ್ಚಿನವರು ಅದರ ಅರಿವಿಲ್ಲದೆ ಅನೇಕ ಗಂಟೆಗಳ ಕಾಲ ಪರದೆಯ ಮುಂದೆ ಇರುತ್ತಾರೆ. ಈ ಪರದೆಗಳ ಮುಂದೆ ನಾವು ಹೆಚ್ಚು ಸಮಯ ಇದ್ದರೆ, ಕಣ್ಣಿನ ಶುಷ್ಕತೆಯ ಅಪಾಯವು ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಒಣ ಕಣ್ಣುಗಳ ಸಮಸ್ಯೆಯಿಂದ ಅತಿಯಾದ ನೀರು, ಕಣ್ಣುಗಳಲ್ಲಿ ಸುಡುವ ಸಂವೇದನೆ, ಚುಚ್ಚುವ ನೋವು, ಭಾರವೆನಿಸುವ ಅನುಭವ ಉಂಟಾಗುತ್ತದೆ.

**20-20-20 ನಿಯಮವನ್ನು ಅನುಸರಿಸಿ:** ಇ-ಮಾಧ್ಯಮಗಳ ಮುಂದೆ ಇದ್ದಾಗ, ಈ ನಿಯಮವನ್ನು ಅನುಸರಿಸಿ. 20 ನಿಮಿಷಗಳಿಗೊಮ್ಮೆ, 20 ಅಡಿ ದೂರದ (ಮೂಲಭೂತವಾಗಿ ಏನಾದರೂ ದೂರದಲ್ಲಿರುವ)ಯಾವುದೇ ವಸ್ತುವಿನ ಮೇಲೆ ಕೇಂದ್ರೀಕರಿಸಲು ನಿಮ್ಮ ಪರದೆಯಿಂದ 20 ಸೆಕೆಂಡುಗಳ ಕಾಲ ವಿರಾಮ ತೆಗೆದುಕೊಳ್ಳಿ. ಇದು ಕಣ್ಣುಗಳ ಆಯಾಸವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಕಣ್ಣು ಮಿಟುಕಿಸುವ ಕಾರ್ಯವಿಧಾನವನ್ನು ಸುಧಾರಿಸುತ್ತದೆ ಹಾಗು ಒಣ ಕಣ್ಣುಗಳ ಪ್ರವೃತ್ತಿಯನ್ನು ಕಡಿಮೆ ಮಾಡುತ್ತದೆ.

**ಕಂಪ್ಯೂಟರ್ ಪರದೆಯ ಮುಂದೆ ದಕ್ಷತಾಶಾಸ್ತ್ರದ (ergonomic) ಭಂಗಿ** : ಕಂಪ್ಯೂಟರ್‌ಗಳ ಮುಂದೆ ಕೆಲಸ ಮಾಡುವಾಗ ಸರಿಯಾದ ಆಸನ ವ್ಯವಸ್ಥೆಯನ್ನು ಹೊಂದಿರುವುದು ಬಹಳ ಮುಖ್ಯ. ನಿಮ್ಮ ಬೆನ್ನನ್ನು ನೇರವಾಗಿ ಇರಿಸಿ, ಕಣ್ಣುಗಳು ಮತ್ತು ಕಂಪ್ಯೂಟರ್ ಪರದೆಯ ನಡುವೆ ಸುಮಾರು 10-15 ಡಿಗ್ರಿಗಳಷ್ಟು ಕೆಳಮುಖ ಕೋನವನ್ನು ನಿರ್ವಹಿಸಿ. ಉತ್ತಮ ಹಿನ್ನೆಲೆ ಪ್ರಕಾಶ ಹೊಂದಿರುವ ಪ್ರದೇಶದಲ್ಲಿ ಯಾವಾಗಲೂ ಕೆಲಸ ಮಾಡಿ. ಉತ್ತಮ ಭಂಗಿಗಳು ಕಣ್ಣಿನ ಆಯಾಸವನ್ನು ತಪ್ಪಿಸುವುದಲ್ಲದೆ, ಸ್ಪಾಂಡಿಲೈಟಿಸ್ ಮತ್ತು ಬೆನ್ನುನೋವಿನಂತಹ ಬೆನ್ನುಮೂಳೆಯ ಸಮಸ್ಯೆಗಳನ್ನು ತಡೆಯಲು ಸಹಾಯ ಮಾಡುತ್ತವೆ.

**ಮಲಗುವ ಸಮಯದಲ್ಲಿ ಪರದೆಯ ಸಮಯವನ್ನು ತಪ್ಪಿಸಿ** : ರಾತ್ರಿಯಲ್ಲಿ ಹಾಸಿಗೆಯ ಮೇಲೆ ಮಲಗಿರುವಾಗ ವಿಶೇಷವಾಗಿ ರೂಮ್ ಲೈಟ್‌ಗಳು ಡಿಮ್ ಆಗಿರುವಾಗ ಮೊಬೈಲ್ ಅಥವಾ ಇತರ ಇ-ಮಾಧ್ಯಮಗಳಲ್ಲಿ ಇಂಟರ್‌ನೆಟ್/ವಿಷಯಗಳನ್ನು ಸರ್ಚಿಂಗ್ ಮಾಡುವುದು, ನಮ್ಮಲ್ಲಿ ಹೆಚ್ಚಿನವರು ಮಾಡುವ ಕೆಲವು ಸಾಮಾನ್ಯ ತಪ್ಪುಗಳಾಗಿವೆ. ಇದು ಕಣ್ಣುಗಳನ್ನು ಆಯಾಸಗೊಳಿಸುವುದಲ್ಲದೆ, ಎಚ್ಚರವಾಗಿರಲು ಮೆದುಳಿಗೆ ಸಂಕೇತಗಳನ್ನು ಸಹ ಕಳುಹಿಸುತ್ತದೆ. ಇಂದಿನ ಯುಗದಲ್ಲಿ ರಾತ್ರಿಯಲ್ಲಿ ಗುಣಮಟ್ಟದ ನಿದ್ರೆಯ ಕೊರತೆಗೆ ಇದು ಸಾಮಾನ್ಯ ಕಾರಣಗಳಲ್ಲಿ ಒಂದಾಗಿದೆ.

**ಇ-ಮಾಧ್ಯಮಗಳಲ್ಲಿ ನೀಲಿ ಪರದೆಯ ಫಿಲ್ಟರ್ ಮೋಡ್‌ನ ಬಳಕೆ/ ನೀಲಿ ಫಿಲ್ಟರ್ ಗ್ಲಾಸ್‌ಗಳ ಬಳಕೆ:** ಇ-ಮೀಡಿಯಾದ ಪರದೆಗಳಿಂದ ಹೊರಸೂಸುವ ನೀಲಿ ಬೆಳಕು ಒಣ ಕಣ್ಣುಗಳಿಗೆ ಕಾರಣವಾಗಬಹುದು, ಮೆದುಳನ್ನು ಎಚ್ಚರವಾಗಿರಲು ಉತ್ತೇಜಿಸುವುದರ ಜೊತೆಗೆ ಆಕ್ಸಿಡೇಟಿವ್ ರೆಟಿನಾದ ಹಾನಿಯುನ್ನು ಉಂಟುಮಾಡಬಹುದು. ಆದ್ದರಿಂದ, ಈ ದಿನಗಳಲ್ಲಿ ಹೆಚ್ಚಿನ ಮಾಧ್ಯಮಗಳಲ್ಲಿ ಲಭ್ಯವಿರುವ ಈ ಮೋಡ್‌ಗಳನ್ನು ಬಳಸುವುದನ್ನು ಖಚಿತಪಡಿಸಿಕೊಳ್ಳಿ ಅಥವಾ ದೀರ್ಘಕಾಲದವರೆಗೆ ಪರದೆಗಳನ್ನು ಬಳಸುವಾಗ ನೀಲಿ ಬೆಳಕಿನ ಫಿಲ್ಟರಿಂಗ್ ಗ್ಲಾಸ್‌ಗಳನ್ನು ಬಳಸಿ.

**ಎಸಿಗಳು/ ಕೂಲರ್‌ಗಳು/ ಫ್ಯಾನ್‌ಗಳು/ ರೂಮ್ ಹೀಟರ್‌ಗಳನ್ನು ನಿಮ್ಮ ಕಣ್ಣುಗಳಿಗೆ ಎದುರಾಗಿ ಇಟ್ಟುಕೊಳ್ಳಬೇಡಿ:**

ಈ ಉಪಕರಣಗಳನ್ನು ನಿಮ್ಮ ಕಣ್ಣುಗಳ ಮುಂದೆ ಬಳಸುವುದರಿಂದ ನಿಮ್ಮ ಕಣ್ಣುಗಳನ್ನು ತ್ವರಿತವಾಗಿ ಒಣಗಿಸಬಹುದು ಮತ್ತು ಇದರ ಪರಿಣಾಮವಾಗಿ ಒಣ ಕಣ್ಣುಗಳ ಲಕ್ಷಣಗಳು ಕಂಡು ಬರುತ್ತವೆ.

ಅಂತಿಮವಾಗಿ, ಶುಷ್ಕ ಕಣ್ಣುಗಳಿಗೆ ನಿರ್ಜಲೀಕರಣವು ಸರಳ ಮತ್ತು ಸಾಮಾನ್ಯ ಕಾರಣಗಳಲ್ಲಿ ಒಂದಾಗಿರುವುದರಿಂದ ಮುಖ್ಯವಾಗಿ ನಿಮ್ಮನ್ನು ನೀವು ಚೆನ್ನಾಗಿ ಹೈಡ್ರೇಕರಿಸಿಕೊಳ್ಳಬೇಕು.

ಇದು ಆರಂಭವಷ್ಟೇ... ಆರೋಗ್ಯಕರ ಕಣ್ಣುಗಳು, ಆರೋಗ್ಯಕರ ದೇಹ ಮತ್ತು ಆರೋಗ್ಯಕರ ಮನಸ್ಸನ್ನು ಅಭಿವೃದ್ಧಿಪಡಿಸುವ ಮತ್ತು ಕಾಪಾಡಿಕೊಳ್ಳುವ ಕಡೆಗೆ ಕೆಲವು ಸಣ್ಣ ಹೆಜ್ಜೆಗಳು...!!

# ದೆಹಲಿ ಕರ್ನಾಟಕ ಸಂಘದಲ್ಲಿ ಅರ್ಥಪೂರ್ಣ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಸಂಭ್ರಮ




ಕಳೆದ ಮಾರ್ಚ್ ತಿಂಗಳಿನಲ್ಲಿ ವಿಶ್ವದಾದ್ಯಂತ ಆಚರಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ದಿನಾಂಕ 31.03.2024 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಮಹಿಳಾ ಕೇಂದ್ರಿತ ವಿಶಿಷ್ಟಪೂರ್ಣವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ನಿರ್ದೇಶಕರಾದ ಡಾ. (ಶ್ರೀಮತಿ) ರಾಜೇಶ್ವರಿ ಎಸ್. ಮಲ್ಲೇಗೌಡ ಹಾಗು ಭಾರತ ಸರ್ಕಾರದ ಹಣಕಾಸು ಗುಪ್ತಚರ ಘಟಕದ ಉಪ ನಿರ್ದೇಶಕರಾದ ಶ್ರೀಮತಿ ಎಸ್. ಕೀರ್ತಿಶ್ರೀ ಐ.ಆರ್.ಎಸ್. ಅವರು ಆಗಮಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಶುಭಾ ದೇವಿಪ್ರಸಾದ್, ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಖಜಾಂಚಿ ಶ್ರೀಮತಿ ಆಶಾಲತಾ ಎಂ. ಹಾಗೂ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಶುಭಾದೇವಿ ಪ್ರಸಾದ್ ಹಾಗೂ ಕು. ಪೂರ್ಣಿಮಾ ಅಡಿಗ ಅವರು ಹಾಡಿದ ಜಯ ಜಯಹೇ ಭಗವತಿ ಸುರ ಭಾರತಿ...ಎಂಬ ಪ್ರಾರ್ಥನಾ ಗೀತೆಯ ಹಿನ್ನೆಲೆಯಲ್ಲಿ ವೇದಿಕೆಯಲ್ಲಿದ್ದ ಮುಖ್ಯ ಅತಿಥಿಗಳು ಹಾಗೂ ಸಂಘದ ಪದಾಧಿಕಾರಿಗಳು ದೀಪ ಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಮಹಿಳಾ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ನಿರ್ವಹಿಸಿದರು.

ಆಗಮಿಸಿದ್ದ ಮುಖ್ಯ ಅತಿಥಿಗಳನ್ನು ಹಾಗೂ ಸಭಾಂಗಣದಲ್ಲಿ ಆಸೀನರಾಗಿದ್ದವರನ್ನು ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ಆತ್ಮೀಯವಾಗಿ ಸ್ವಾಗತಿಸುತ್ತಾ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಕ್ತಿ ಸ್ವರೂಪಿಣಿಯಾಗಿರುವಂತಹ ನವದುರ್ಗೆಯ "ಪ್ರಥಮಃ ಶೈಲಪುತ್ರಿತಿ ದೃತೀಯ ಬ್ರಹ್ಮಚಾರಿಣಿ, ತೃತೀಯಂ, ಚಂದ್ರಘಂಟೇತಿ, ಕೂಷ್ಮಾಂಡೇತಿ ಚತುರ್ಥಕಮ್, ಪಂಚಮಂ ಸ್ಕಂದ ಮಾತೇತಿ, ಷಷ್ಠಂ ಕಾತ್ಯಾಯಿನಿ ತಥಾ, ಸಪ್ತಮಂ ಕಾಲರಾತ್ರಿಶ್ಚ ಮಹಾಗೌರೀತಿ ಚಾಷ್ಟಮಮ್ ನವಮ ಸಿದ್ಧಿ ದಾತ್ರೀಚ ನವದುರ್ಗಾ ಪ್ರಕೀರ್ತಿತಾಃ ಎಂಬ ಸಂಸ್ಕೃತ ಶ್ಲೋಕವನ್ನು ಪಠಿಸುವುದರೊಂದಿಗೆ ತಮ್ಮ ಮಾತುಗಳನ್ನು ಆರಂಭಿಸಿದ ಅವರು ಚೈತ್ರ ನವರಾತ್ರಿಯ ಆಚರಣೆಯ 9 ದಿನಗಳ ಮುನ್ನಾ ಈ ನಮ್ಮ ಸಂಘದ ನೂತನ ಕಾರ್ಯಕಾರಿ ಸಮಿತಿ ಬಂದ ಮೇಲೆ ಸಭಾಂಗಣದಲ್ಲಿ ಆಗುತ್ತಿರುವ ಈ ಮೊದಲ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸುತ್ತಿರುವುದು ವಿಶೇಷವಾಗಿದೆ, ಮಹಿಳೆಯರನ್ನು ಲಕ್ಷ್ಮೀಯ ಸ್ವರೂಪ ಎನ್ನುತ್ತಾರೆ. ವೇದಿಕೆಯ ಮೇಲಿರುವ ಹಾಗೂ ಮುಂದಿರುವ ಮತ್ತು ಸಮಾಜದ ಎಲ್ಲಾ ಮಹಿಳೆಯರೂ ಲಕ್ಷ್ಮೀಯರೇ, ವಿಧವೆಯಾದ ಮಹಿಳೆಗೂ ಸಮಾನವಾದ ಗೌರವ ನೀಡುವುದು ಎಲ್ಲರ ಧರ್ಮ, ಸಭಾಂಗಣದಲ್ಲಿರುವ ಎಲ್ಲ ಲಕ್ಷ್ಮೀಯರಿಗೆ, ಲಕ್ಷ್ಮೀಪತಿಯರಿಗೆ ಹಾಗು ಲಕ್ಷ್ಮೀ ಪುತ್ರರಿಗೆ ನಮಸ್ಕರಿಸುತ್ತೇನೆ ಎಂದರು. ಮಹಿಳಾ ದಿನಾಚರಣೆ ಎಂಬ ಕಾನ್ಸೆಪ್ಟ್‌ನಲ್ಲಿ ಲಿಂಗ ಪಕ್ಷಪಾತ ತಮಗೆ ಎದ್ದು ಕಾಣುತ್ತಿದೆ. ಮಹಿಳಾ ದಿನಾಚರಣೆಯಂತೆ ಪುರುಷರ ದಿನಾಚರಣೆ ಮಾಡುವುದಿಲ್ಲ. ನನ್ನ ಯೋಚನೆಯಂತೆ ಇದಕ್ಕೆ ಪುರುಷರು ಉದಾರಿಗಳು ಹಾಗೂ ಮಹಿಳೆಯರಿಗಾಗಿ 365 ದಿನಗಳಲ್ಲಿ ಒಂದು ದಿನ ಬಿಟ್ಟು ಕೊಟ್ಟಿದ್ದಾರೆ ಎನ್ನುವುದು ಒಂದು ಕಾರಣವಿರಬಹುದು, ಇನ್ನೊಂದೆಡೆ ಯಾರೋ ಹೇಳಿದ ಹಾಗೆ 364 days you beat us and 365th day you greet us ಎನ್ನುವ ಧೋರಣೆ ಇರಬಹುದು. ಮಹಿಳೆ ಮತ್ತು ಪುರುಷ ಇಬ್ಬರೂ ಸಮಾನರು, ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡುವವರಿಗೆ ಗತಿ ಕಾಣಿಸುವಷ್ಟು ಬಲಿಷ್ಠವೂ ಸಶಕ್ತಳೂ ಈಗಿನ ಮಹಿಳೆ ಆಗಿದ್ದಾಳೆ ಎಂದು ಹೇಳಲಿಕ್ಕೆ ಹೆಮ್ಮೆಪಡುತ್ತೇನೆ ಎಂದರು.




ಮಹಿಳೆ ಅಬಲಳಲ್ಲ, ಹಾಗೆಯೇ ಪುರುಷ ಮಾತ್ರ ಸಬಲನಲ್ಲ, ಸಮಾಜದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ, ಸ್ತ್ರೀ ಮತ್ತು ಪುರುಷರಲ್ಲಿ ಯಾರೂ ಮೇಲು ಅಲ್ಲ, ಯಾರೂ ಕೀಳು ಅಲ್ಲ, ಇಬ್ಬರೂ ಒಂದು ರಥದ ಎರಡು ಚಕ್ರಗಳಿದ್ದಂತೆ. ಎರಡು ಚಕ್ರಗಳು ಸರಿಸಮಾನವಾಗಿ ಸಾಗಿದ್ರೆ ಮಾತ್ರ ಸಂಸಾರವೆಂಬ ಒಂದು ಬಂಡಿ ಸರಿಯಾಗಿ ಸಾಗಲಿಕ್ಕೆ ಸಾಧ್ಯ. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಸ್ತ್ರೀಯರ ಪಾತ್ರ ದೊಡ್ಡದು. ಸೀರೆ ಉಡುಪು ಭಾರತೀಯ ಸಂಸ್ಕೃತಿಯ ಪ್ರತೀಕ. ಈ ಮಹಿಳಾ ದಿನಾಚರಣೆಯ ಒಂದು ದಿನವನ್ನು ನಮ್ಮ ಅಸ್ತಿತ್ವದ ಸೆಲೆಬ್ರೇಷನ್ ಆಗಿ ನಾವು ಕಾಣಬೇಕು. ಡಾ. ಆರತಿ ಕೌಂಡಿನ್ಯ ಅವರು ಹೇಳಿರುವ ಹಾಗೆ ಸ್ತ್ರೀಯರಲ್ಲಿ ಇರಬೇಕಾದ ನಾಲ್ಕು ಗುಣಗಳು ಸ್ತ್ರೀತ್ವ, ಕರ್ತೃತ್ವ, ಮಾತೃತ್ವ ಹಾಗೂ ನೇತೃತ್ವ ಹೆಣ್ಣನ್ನು ಸಹನಾಮೂರ್ತಿಯಂತಲೂ ಹೇಳುತ್ತಾರೆ, ಈ ಎಲ್ಲಾ

ಗುಣಗಳು ಸ್ತ್ರೀಯರಿಗೆ ದೈವದತ್ತವಾಗಿ ಬಂದಿರುತ್ತದೆ. ಹಾಗೆಯೇ ಸಂಸ್ಕೃತ ಶ್ಲೋಕವೊಂದನ್ನು ಸ್ತುತಿಸುತ್ತಾ ಹೆಣ್ಣು ಮಕ್ಕಳು ಎಲ್ಲಿ ಶೋಕದಲ್ಲಿರುತ್ತಾರೋ ಅಂತಹ ಕುಲ ಉದ್ಧಾರವಾಗುವುದಿಲ್ಲ ಎನ್ನುವ ಅರ್ಥದ ಮಾತಿದೆ, ಹೆಣ್ಣು ಮಕ್ಕಳು ಖುಷಿಯಾಗಿದ್ದರೆ ಸಮಾಜವು ಬೆಳೆಯುತ್ತದೆ ಕುಲವೂ ಉಳಿಯುತ್ತದೆ ಎಲ್ಲರು ಖುಷಿಯಾಗಿರಬೇಕು, ಎಂದು ಹೇಳುತ್ತಾ ವೇದಿಕೆಯ ಮೇಲಿರುವ ಮುಖ್ಯ ಅತಿಥಿಗಳಿಗೆ, ಕಾರ್ಯಕಾರಿ ಸಮಿತಿಯ ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯೆಯರಿಗೆ, ಅಧ್ಯಕ್ಷರಿಗೆ, ಪ್ರಧಾನ ಕಾರ್ಯದರ್ಶಿ ಅವರಿಗೆ ಸಭಾಂಗಣದಲ್ಲಿ ಉಪಸ್ಥಿತರಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ನಿಯೋಜಿತರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಹಾಗೂ ನೆರೆದಿರುವ ಎಲ್ಲರಿಗೆ ಪ್ರೀತಿಪೂರ್ವಕ ಸ್ವಾಗತ ಕೋರಿದರು.

ಮುಖ್ಯ ಅತಿಥಿಗಳಲ್ಲಿ ಮೊದಲಿಗೆ ಮಾತನಾಡಿದ ಡಾ. ರಾಜೇಶ್ವರಿ ಎಸ್. ಮಲ್ಲೇಗೌಡ ಅವರು ಮಹಿಳೆಯರ ಸಬಲೀಕರಣದ (Empowerment of Women) ಹಾಗೂ ಮಹಿಳೆಯರಿಗಾಗಿಯೇ ಕೆಲಸ ಮಾಡುವಂತಹ ವರ್ಕ್ ಪ್ರೊಫೈಲ್ ತಮಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯದಲ್ಲಿ ಸಿಕ್ಕಿದೆ, NRLM (National Rural Livelihoods Mission) a completely dedicated to Empowerment of Women) ಯೋಜನೆಯಲ್ಲಿ ಕೆಲಸ ಮಾಡುವ ಅವಕಾಶಕ್ಕೆ ತಾವು ಬಹಳ ಅದೃಷ್ಟಶಾಲಿ ಎಂದು ಭಾವಿಸುತ್ತೇನೆ. ಈ ಯೋಜನೆ 10 ವರ್ಷಗಳ ಹಿಂದೆ ಆರಂಭವಾಗಿದ್ದು, through Self Help Groups (SGHS) ನಿಂದ ಬಡ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶ ಹೊಂದಿದೆ. I also feel fortunate and I feel it is a noble responsibility given to me to work with women across the country. Through SHGS we are enabling women to get involved in socio economic activities in ವಿಲೇಜ್ಸ್. ನಮ್ಮ ಹಳ್ಳಿಯ ಕಡೆ ಒಂದು ಗಾದೆ ಇದೆ 'ಅತ್ತೆ ಇರುವ ಮನೆಯಲ್ಲಿ ಸೊಸೆಯನ್ನು ಮಾತನಾಡಿಸಬಾರದು' ಎಂದು. ನನ್ನ ಸೊಸೆ ಜೊತೆ ಏನು ನಿಮ್ಮ ಮಾತು, ಏನಿದ್ದರೂ ನನ್ನ ಜೊತೆ ಮಾತನಾಡಿ ಎಂದು ಅತ್ತೆ ಬಯಸುತ್ತಾಳೆ ಎನ್ನುವುದು ಒಂದು ವಿಚಾರ, ನಾನು ಎಲ್ಲಾ ರಾಜ್ಯಗಳಲ್ಲೂ ಕೆಲಸ ಮಾಡಿದ್ದೇನೆ, ನಾನು ಯುರೋಪ್ ದೇಶಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ್ದೇನೆ, ಹಾಗೆಯೇ ನಾನು ಕೂಡ ಒಬ್ಬ GENDER Specialist, ಆಗಿದ್ದು, GENDER MAINSTREAM POLICY ಬರೆಯುವುದರಲ್ಲಿ ತೊಡಗಿಸಿಕೊಂಡಿದ್ದೇನೆ. ಗ್ರಾಮೀಣ ಸಚಿವಾಲಯದಲ್ಲಿ ಮುಖ್ಯವಾಗಿ ನನ್ನ ಜವಾಬ್ದಾರಿಯು NRLM ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸಿದ ಜೀವನೋಪಾಯ ಮಿಷನ್ನಲ್ಲಿ ಕೃಷಿ ಮತ್ತು ಕೃಷಿಯೇತರ ಜೀವನೋಪಾಯಗಳು (Farm and Non-Farm Livelihoods) ಎಂಬ ಎರಡು ಅಂಶಗಳ ಮೇಲೆ ಆಧಾರಿತವಾಗಿದೆ.

ಹಿಂದೆ ಸಂಘ ಎಂದರೆ ಮಹಿಳೆಯರು ಸ್ವಲ್ಪ ಗಾಸಿಪ್ ಮಾಡಲು ಸೇರಿಕೊಳ್ಳುತ್ತಿದ್ದ ಕಾಲ, ಅವರು ಉಳಿತಾಯ ಮಾಡಲು ಅವಕಾಶ ಕೇವಲ ಗಂಡನ ಆದಾಯದಿಂದ ಮಾತ್ರವಿತ್ತು, ಜೀವನೋಪಾಯ ಅವಕಾಶಗಳು ಅವರಿಗೆ ಸಿಕ್ಕಾಗ ಮಾತ್ರ ಅವರಿಗೆ ಸ್ವಂತ ದುಡಿಮೆ ಮಾಡಿ ಹಣ ಉಳಿತಾಯ ಮಾಡಲು ಸಾಧ್ಯ. ನಮ್ಮ NRLM ಯೋಜನೆಯ ಹಲವಾರು ಕಾರ್ಯಕ್ರಮಗಳಲ್ಲಿ ಆರ್ಥಿಕವಾಗಿ ಸಬಲೀಕರಿಸುವ ಪ್ರಯತ್ನ ನಡೆದಿದೆ, ಈವರೆಗೆ ನಮ್ಮ ಜೊತೆಗೂಡಿರುವ 10 ಕೋಟಿ ಮಹಿಳೆಯರಲ್ಲಿ ಒಂದು ಕೋಟಿ ಮಹಿಳೆಯರು ಲಕ್ಷಾಧಿಪತಿಯಾಗಿದ್ದು 'ಲಕ್ಪತಿ ದೀದಿ' ಎಂದು ಸಂಭೋದಿಸಿ ಪ್ರಧಾನಮಂತ್ರಿಯವರು ಅನೇಕ ಕಡೆ ಅವರನ್ನು ಕರೆದಿದ್ದಾರೆ. ಇದೊಂದು ನಮ್ಮ ಮಹತ್ತರ ಸಾಧನೆಯಾಗಿದೆ. ಸದ್ಯದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ಹೇಗೆ ಮಹಿಳೆಯರನ್ನು ಸಬಲಗೊಳಿಸಬಹುದೆಂಬ ಗುರುತರ ಜವಾಬ್ದಾರಿ ಗ್ರಾಮೀಣ ಅಭಿವೃದ್ಧಿ ಸಚಿವಾಲಯ (MORD) ದ ತಮ್ಮ ಮೇಲಿದೆ. Pottery, Handicrafts ಮುಂತಾದ ಚಟುವಟಿಕೆಗಳಲ್ಲಿ ಮಹಿಳೆಯರು ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ. ಅವರ ಕುಶಲ ತರಬೇತಿಗೆ ನಾವು ಪ್ರೋತ್ಸಾಹ ನೀಡುತ್ತಿದ್ದೇವೆ, ಆರ್ಥಿಕವಾಗಿಯೂ ನಮ್ಮ ಇಲಾಖೆ ಸಹಕಾರ ಕೊಡುತ್ತಿದೆ. ಇದಕ್ಕೆ ಒಂದು ನಿದರ್ಶನ ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ IIM-ಬಿ ಅವರ ಸಹಯೋಗದಲ್ಲಿ ಕರ್ನಾಟಕ ಸರ್ಕಾರದ ಯೋಜನೆ 'ಸ್ವಾವಲಂಬನೆ' ಕಾರ್ಯಕ್ರಮದಡಿಯಲ್ಲಿ ರಾಜ್ಯಾದ್ಯಾಂತ 150 ಮಹಿಳಾ ಉದ್ಯಮಿಗಳನ್ನು ಗುರುತಿಸಿ, ಅವರಿಗೆ 18 ತಿಂಗಳು Capacity Building Training ನೀಡಿ Soft loan (Upto 5 lacs) ಸಹಕಾರ ಒದಗಿಸಲಾಗುತ್ತಿದೆ. ಹಾಗೇನೇ NRLM ಯೋಜನೆಗಳ ಬಗ್ಗೆ ಮಾಹಿತಿಯನ್ನು ನಮ್ಮ ವೆಬ್ಸೈಟಿನಿಂದ ಅಥವಾ ಗೂಗಲ್ ಮಾಡಿ ಪಡೆದುಕೊಳ್ಳಬಹುದು. ಆಸಕ್ತರಿಗೆ ಏನಾದರೂ ಸಹಾಯ ಬೇಕಿದ್ದಲ್ಲಿ ತಮ್ಮನ್ನು ಅಥವಾ ತಮ್ಮ ಇಲಾಖೆಯ ದೇಶದಾದ್ಯಂತ ಇರುವ ಎಲ್ಲಾ ಕಚೇರಿಗಳ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದರು.

ಮುಂದುವರಿದು, ಮಹಿಳೆಯರೆಲ್ಲರೂ ದೊಡ್ಡದಾದ ಕನಸು ಕಾಣಬೇಕು (Women should Dream Big) ತಮ್ಮದೇ ನಿದರ್ಶನ ತೆಗೆದುಕೊಂಡರೆ, ತಾವು ಒಬ್ಬ ಅಗ್ರಿ-ಎಕಾನಾಮಿಸ್ಟ್, ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಯಿಂದ ಅಗ್ರಿಕಲ್ಚರಲ್ ಎಕನಾಮಿಕ್ಸ್ ಓದಿದ ನಂತರ ಯುರೋಪ್‌ನಲ್ಲಿ Erasmus Mundus Fellowship International Masters in Rural Development ನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಅನಂತರ Humboldt University of Berlin ನಿಂದ ಡಾಕ್ಟರೇಟ್ ಗಳಿಸಿದ್ದನ್ನು ತಿಳಿಸಿದರು. ಭಾರತಕ್ಕೆ ಮರಳಿ ಬಂದಾದ ಮೇಲೆ ವಯೋಮಿತಿ ಮೀರಿದ್ದ ಕಾರಣ ಸಿವಿಲ್ ಸರ್ವಿಸಸ್ ಪರೀಕ್ಷೆಗಳನ್ನು ತೆಗೆದುಕೊಳ್ಳಲಾಗಲಿಲ್ಲ ಮತ್ತೆ ಆ ನಿಟ್ಟಿನಲ್ಲಿ ಯೋಚನೆ ಮಾಡುತ್ತಿದ್ದಾಗ ಪ್ರಧಾನಮಂತ್ರಿಯವರ ಹೊಸ ಯೋಜನೆಯಡಿಯಲ್ಲಿ Sector Sepcialists ಗಳಿಗೆ Civil Services ನಲ್ಲಿ Lateral Entry ಮೂಲಕ ವಿವಿಧ ಸಚಿವಾಲಯಗಳಿಗೆ ಸೇರಿಕೊಳ್ಳಲು ಅವಕಾಶ ಕಲ್ಪಿಸಿದಾಗ ನಾನು ಪ್ರಯತ್ನ ಮಾಡಿ, ಸಫಲಳಾಗಿ ಸಿವಿಲ್ ಸರ್ವಿಸಸ್‌ಗೆ ಸೇರಿದ್ದನ್ನು ಆ ಮೂಲಕ ದೇಶದ ಸೇವೆ ಮಾಡಲು ಅನುಕೂಲವಾದದ್ದನ್ನು ವಿವರಿಸಿದರು. ಆದ್ದರಿಂದ We should always aim big, we should never ever draw a lime limiting ourselves, ಹಾಗೇನೇ ಕೇವಲ ಕನಸು ಕಂಡರೆ ಸಾಲದು ಅದನ್ನು ನನಸಾಗಿಸಲು ಪ್ರಯತ್ನಪಡಬೇಕು. We should always set our goal high and work hard towards achieving it ಎಂದರು. ಆರೋಗ್ಯಕರ ಸಮಾಜಕ್ಕೆ ಹೆಣ್ಣು ಗಂಡು ಇಬ್ಬರೂ ಮುಖ್ಯ. ಮಹಿಳೆಯರು ತಾವು ಯಾವುದರಲ್ಲಿ ಹೆಚ್ಚು ಸಾಧನೆ ಮಾಡಬಲ್ಲರೋ ಆ ಕ್ಷೇತ್ರದಲ್ಲಿ ಮುಂದುವರಿಯುವುದು ಸೂಕ್ತ ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಐ.ಆರ್. ಎಸ್. ಅಧಿಕಾರಿ ಶ್ರೀಮತಿ ಎಸ್. ಕೀರ್ತಿಶ್ರೀ ಅವರು ಮಾತನಾಡಿ ತಾವು ಇದೇ ಮೊದಲ ಬಾರಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದು ಈ ಹಿಂದೆ ದೆಹಲಿಗೆ ಬಂದಾಗ ಸಿವಿಲ್ ಸರ್ವಿಸಸ್ ಪರೀಕ್ಷೆ ಮತ್ತು ಅಣಕು ಸಂದರ್ಶನ (Mock Interview) ಸಂದರ್ಭ ಭೇಟಿ ನೀಡಿದ್ದೆ. ಈಗ ಸಿವಿಲ್ ಸರ್ವಿಸಸ್‌ಗೆ ಸೇರುತ್ತಿರುವ ಮಹಿಳೆಯ ಸಂಖ್ಯೆ ಶೇ 20ಕ್ಕೂ ಕಡಿಮೆ ಇದೆ. ಮಹಿಳೆಯರು 2-3 ಪ್ರಯತ್ನಗಳ ನಂತರ ಸಫಲರಾಗದಿದ್ದರೆ ಯುಪಿಎಸ್ಸಿ ಪರೀಕ್ಷೆಗೆ ಪುರುಷರಂತೆ ಪುನಃ ಪ್ರಯತ್ನ ಮಾಡುತ್ತಿಲ್ಲ. ನಾನು ಮೂರನೇ ಪ್ರಯತ್ನದಲ್ಲಿ ಯಶಸ್ವಿಯಾಗಿ ಐ.ಆರ್.ಎಸ್. ಅಧಿಕಾರಿಯಾಗಿದ್ದೇನೆ. ಹಿಂದಿ ಭಾಷೆಯ 12th Fail ಚಲನಚಿತ್ರದ ನಿದರ್ಶನ ನೀಡುತ್ತಾ ಪುರುಷ ಅಧಿಕಾರಿಗಳು ಪುರುಷ ಕೆಳ ಅಧಿಕಾರಿಗಳನ್ನೇ ಹೊಂದಲು ಬಯಸುತ್ತಾರೆ. ಮಹಿಳಾ ಕೆಳ ಅಧಿಕಾರಿಗಳನ್ನು ಅಥವಾ ಮೇಲಧಿಕಾರಿಗಳನ್ನು ಬಯಸುವುದಿಲ್ಲ ! ಭೇದ ಭಾವವಿರುತ್ತದೆ. Even if you reach a good position in this Country you are not out of gender discrimination. ಹಾಗೇನೇ ಮಹಿಳೆಯರು ಹೆಚ್ಚಿನ ವಿದ್ಯಾಭ್ಯಾಸ ಪದವಿ ಹೊಂದಿದರೆ ಅಥವಾ ಹೆಚ್ಚಿನ ಓದಿಗಾಗಿ ವಯಸ್ಸು ಮೀರುವ ಕಾರಣ, ಸರಿಯಾದ ಸಮಯಕ್ಕೆ ಮದುವೆಯಾಗಲು ತೊಂದರೆಗಳು ಎದುರಾಗುತ್ತವೆ ಎಂದರು.

ಇನ್ನು, ನಾವು ಏನೇ ದೊಡ್ಡ ಸಾಧನೆ ಮಾಡಿದರೂ ಸಾಮಾಜಿಕ ಜೀವನದಲ್ಲಿ ಕೆಲವೊಮ್ಮೆ ಅದನ್ನು ಕಡಿಮೆಯಾಗಿಸುವ ಪ್ರಯತ್ನ ನಡೆಯುತ್ತದೆ.



ಇದು ಕೇವಲ ಭಾರತದಲ್ಲಿ ಮಾತ್ರವಲ್ಲ ಹೊರ ದೇಶಗಳಲ್ಲಿಯೂ ಇದೆ. ನಾನು Nareotics ವಿಭಾಗದಲ್ಲಿ ಕೆಲಸ ಮಾಡುವಾಗ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗಿಯಾಗಿದ್ದ ಸಂದರ್ಭ ಬಾಂಗ್ಲಾ ದೇಶದವರೊಬ್ಬರು, ನೀವು ಮಹಿಳಾ ನಿರ್ದಿಷ್ಟ (Women Specific) ತರಬೇತಿ ನೀಡಿ ಎಂದು ಸಲಹೆ ನೀಡಿದ್ದರು. ನಾನು ಇಲ್ಲಿರುವ ಪುರುಷರಲ್ಲಿ ವಿನಂತಿಸುತ್ತೇನೆ ನೀವು ಮಹಿಳೆಯರಿಗೆ ಗಮನ ನೀಡಿ ಅವಕಾಶ ಮಾಡಿ ಕೊಡಬೇಕು. ಇಲ್ಲವಾದರೆ ಅವರು ಬದಿಗೊತ್ತಿದವರಾಗುತ್ತಾರೆ. ನಾನು ದೇಶದ ಹಲವಾರು ಕಡೆ ಕೆಲಸ ಮಾಡಿದ್ದೇನೆ, ಮುಂಬಯಿನಲ್ಲಿ ಸೇವೆ ಆರಂಭಿಸಿ, ಮಣಿಪುರದ ಇಂಫಾಲ್‌ನಲ್ಲಿ ಕಾರ್ಯ ನಿರ್ವಹಿಸಿ ಈಗ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಮಣಿಪುರದ ಮಹಿಳೆಯರು ಆರ್ಥಿಕವಾಗಿ ಸಾಕಷ್ಟು ಸಬಲೀಕರಣಗೊಂಡು ಸುಸ್ಥಿತಿಯಲ್ಲಿದ್ದಾರೆ. ಇಂಫಾಲ್‌ನಲ್ಲಿ ಇಮಾ ಮಾರ್ಕೆಟ್ ಎಂಬ ಜಾಗವಿದೆ. ಅದು ಏಷ್ಯಾದಲ್ಲೇ ಅತ್ಯಂತ ದೊಡ್ಡ ಮಾರ್ಕೆಟ್ ಪ್ಲೇಸ್ ಆಗಿದೆ, ಅಲ್ಲಿ ಸಂಪೂರ್ಣವಾಗಿ ಮಹಿಳೆಯರೇ ವ್ಯಾಪಾರ ಮಾಡುತ್ತಿದ್ದಾರೆ. ಕಾರಣ ಅಲ್ಲಿನ ಗಂಡಸರು ಏನೂ ಕೆಲಸ ಮಾಡುವುದಿಲ್ಲ. ಹೆಂಡತಿಯರನ್ನು ಬಿಟ್ಟಿರುತ್ತಾರೆ, ಸಂಸಾರದ ನಿರ್ವಹಣೆ ಮಹಿಳೆಯ ಮೇಲೆ ಇದ್ದ ಕಾರಣ ಅವರು ವ್ಯಾಪಾರ ಮುಂತಾದ ಜೀವನೋಪಾಯ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕಾದ, ಮನೆಯಲ್ಲೂ ಕೆಲಸ ಮಾಡಬೇಕು. ಹೊರಗಡೆಯೂ ಕೆಲಸ ಮಾಡಬೇಕಾಗಿರುವ ಅನಿವಾರ್ಯದ ಪರಿಸ್ಥಿತಿ ಇದೆ, ಮಹಿಳೆಗೂ ವಿಶ್ರಾಮ ಸಿಗಬೇಕು. ಅದು ನಿಜವಾದ Feminism ಎಂದು ನನ್ನ ಭಾವನೆ ಅಂದರು.

ಡಾ. ರಾಜೇಶ್ವರಿ ಮಲ್ಲೇಗೌಡ ಮೇಡಮ್ ಅವರು ಹೇಳಿದಂತೆ ನಾವೆಲ್ಲರೂ ದೊಡ್ಡ ಕನಸನ್ನು ಕಾಣಬೇಕು. ನಾನು ಐಐಟಿ ಖರಗ್ಪುರದಲ್ಲಿ ಮಾಸ್ಟರ್ಸ್ ಓದಿರುವುದು. ರಾಜ್ಯದ ಹೊರಗಡೆ ಹೆಚ್ಚು ಕನ್ನಡೇತರರೇ ಇರುವ ಜಾಗದಲ್ಲಿ ಅಲ್ಲಿನ ಜೀವನದ ಅನುಭವ ನನಗೆ ಸಮಾಜದ ಬಗ್ಗೆ ಉತ್ತಮ ಪರಿಕಲ್ಪನೆ ಪಡೆಯಲು ಸಹಾಯವಾಗಿತ್ತು. ಅನಂತರ ಮಣಿಪುರದಲ್ಲಿ ಮಹಿಳೆಯರ ಸ್ಥಿತಿ ನೋಡಿದ ನಂತರ ನಮ್ಮ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆ ಬಹಳ ಸದೃಢವಾಗಿದೆ ಎಂದು ಭಾಸವಾಗುತ್ತದೆ. If you work in a different society outside your state you will understand your society better. ನನ್ನ ಪತಿಯವರು ಹಿಂದಿಯವರು, ಮನೆಯಲ್ಲಿ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡುತ್ತೇವೆ, ನನಗೆ ಇಂದು ಈ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು ಎಂದರು.

ನಂತರ, ಪ್ರತಿ ವರ್ಷ ರಾಜ್ಯೋತ್ಸವ ಸಂದರ್ಭದಲ್ಲಿ ಸಂಘದಿಂದ ಕೊಡ ಮಾಡುವ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ 2023ರ ಸಾಲಿನಲ್ಲಿ ಆಯ್ಕೆಯಾಗಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರು ಈ ಹಿಂದೆ ಕಾರಣಾಂತರದಿಂದ ಪ್ರಶಸ್ತಿ ಸ್ವೀಕರಿಸಲು ಬರಲಾಗದಿದ್ದ ಕಾರಣ ಅವರಿಗೆ ಈ ಕಾರ್ಯಕ್ರಮ ಸಂದರ್ಭದಲ್ಲಿಯೇ ಆಹ್ವಾನಿಸಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ಪ್ರದಾನ ಮಾಡಲಾಯಿತು. ಅವರ ಪರಿಚಯವನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಶುಭಾದೇವಿ ಪ್ರಸಾದ್ ಮಾಡಿಕೊಟ್ಟರು.

'ವಿಶಿಷ್ಟ ಕನ್ನಡಿಗ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ತಮಗೆ ಈ ಪ್ರಶಸ್ತಿಯನ್ನು ಕೊಡಬೇಕೆಂದು ಸಮಿತಿಯ ನಿರ್ಧಾರವನ್ನು ನನ್ನ ಮಿತ್ರ ಶ್ರೀ ಸಿ.ಎಂ. ನಾಗರಾಜ ಅವರು ತಿಳಿಸಿದಾಗ ನಾನು ದೆಹಲಿಯಲ್ಲಿರಲಿಲ್ಲ, ಈ ಹಿಂದೆ ಪ್ರಶಸ್ತಿ ಸ್ವೀಕರಿಸಲು ನನಗೆ ಬರಲು ಸಾಧ್ಯವಾಗಿರಲಿಲ್ಲ; ಡಾ. ವೆಂಕಟಾಚಲ ಹೆಗಡೆ ಅಂತಹವರು, ನಾವೆಲ್ಲ ಸಂಘ ಕಟ್ಟಿದವರು ತುಂಬಾ ಕೆಲಸ ಮಾಡಿರುವ ನಮ್ಮದೇ ಸಂಘದಿಂದ ನಾನೇ ಪ್ರಶಸ್ತಿ ತೆಗೆದುಕೊಳ್ಳುವುದು ಸ್ವಲ್ಪ ಸಣ್ಣಾಚಾರ ಆದರೆ ಕೆಲವು ಸಾರಿ ದಾಕ್ಷಿಣ್ಯ ಇತ್ಯಾದಿಗಳು ಇರುತ್ತವೆ. ಆದರೆ ಇವತ್ತು ಅದನ್ನು ತೆಗೆದುಕೊಂಡ ನನಗೆ ಮಾತನಾಡಿದ ಇಬ್ಬರೂ ಮಹಿಳಾ ಮುಖ್ಯ ಅತಿಥಿಗಳ ಭಾಷಣ ಕೇಳಿದ ನಂತರ ತುಂಬಾ ಖುಷಿಯಾಯಿತು. ಅವರು ತಮ್ಮ ಹೃದಯದಿಂದ ಮಾತನಾಡಿದರು ಎಂದರು. ನಾನು ಇತ್ತೀಚೆಗೆ ಒಂದು ಕಡೆ ಮಾತನಾಡುವಾಗ ರಾಮಾಯಣದ ಒಂದು ಘಟನೆ ನೆನಪಿಗೆ ಬಂದಿತ್ತು. ನಮ್ಮ ಋಷಿಗಳೆಲ್ಲಾ ಹೆಚ್ಚು ತಿಳಿದುಕೊಂಡಿರುವ ದೊಡ್ಡವ ಗೌತಮ, ತನ್ನ ಹೆಂಡತಿ ಅಹಲ್ಯೆಗೆ ಶಾಪಕೊಟ್ಟು ಅವಳು ಕಲ್ಲಾಗಿದ್ದಳು. ಗೌತಮ ಹೆಂಡತಿಗೆ ಕಲ್ಲಾಗು ಎಂದು ಶಾಪ ಕೊಟ್ಟಿದ್ದನ್ನು ಪ್ರಶ್ನೆ ಮಾಡಿದವಳು ಇಡೀ ರಾಮಾಯಣದಲ್ಲಿ ಸೀತೆ ಮಾತ್ರ. ನಿಖರ, ನೇರ ಹಾಗೂ ಸ್ಪಷ್ಟವಾದ ಸೀತೆಯ ಪ್ರಶ್ನೆಗೆ ಗೌತಮ ಉತ್ತರ ಕೊಡಲು ಆಗಲಿಲ್ಲ. ತಲೆ ತಗ್ಗಿಸಿ ರಾಮ ಬಂದಾನು ಅಂತ ಹೇಳಿದ. ರಾಮ ಬಂದಾಗ ಅಹಲ್ಯೆಯ ಶಾಪ ವಿಮೋಚನೆಯಾಗುತ್ತದೆ.

ಹೀಗಾಗಿ ನಮ್ಮ ಸಾಹಿತ್ಯದಲ್ಲಿ, ಕಾವ್ಯಗಳಲ್ಲಿ ಪುರಾಣದಲ್ಲಿ ಮಹಿಳೆಯರು ಎತ್ತುವ ಪ್ರಶ್ನೆಗೆ ಉದಾಹರಣೆಗೆ ದ್ರೌಪದಿ ವಸ್ತ್ರಾಹರಣ ಸಂದರ್ಭದಲ್ಲಿ ಸಭೆಗೆ ಭೀಷ್ಮಾಚಾರ್ಯರಿಗೆ, ದ್ರೋಣಾಚಾರ್ಯರಿಗೆ ಕೇಳಿದ ಪ್ರಶ್ನೆಗೆ ಯಾರೂ ಉತ್ತರ ಕೊಡದೆ, ತಲೆ ತಗ್ಗಿಸುತ್ತಾರೆ. ಅವಳ ಮಾನ ಹೋಗುವ ಕಾಲದಲ್ಲಿ ಕೇಳಿದ ಪ್ರಶ್ನೆಗೆ ಕುರುಕ್ಷೇತ್ರದ ಯಾವುದೇ ಮಹನೀಯರು ಉತ್ತರ ಕೊಡಲಾಗಲಿಲ್ಲ. ಮಹಿಳೆ ಹೇಗೆ ಒಂದು ಸಂಸ್ಕೃತಿಯ ಮೂಲ ಧಾತುಗಳನ್ನು ತನ್ನ ಮೇಲೆ ನಿರಂತರ ಆಗುತ್ತಿರುವ ಅನ್ಯಾಯವನ್ನು ಸಹಿಸಿಕೊಂಡು ಬಂದಳು ಎಂಬುದು ಮುಖ್ಯವಾಗುತ್ತದೆ. ನನ್ನ 'ಕಾಗೆ ಮುಟ್ಟಿದ ನೀರು'ಎಂಬ ಆತ್ಮಕಥೆಯಲ್ಲಿ ನನ್ನ ಜೀವನದ ಘಟನೆಯೊಂದರ ಬಗ್ಗೆ ನಾನು ಈ ಹಿಂದೆ ಬರೆದೆ.

1955ರಲ್ಲಿ ಹುಟ್ಟಿದ ನನಗೆ 1961 ರವರೆಗೆ ಶಾಲೆಗೆ ಕಳುಹಿಸಲಿಲ್ಲ.ನಾನು ಹುಟ್ಟಿದ ಊರು ಬಹಳ ಹಿಂದುಳಿದ ಬಡತನದ ಪಶ್ಚಿಮ ಘಟ್ಟಗಳ ಒಂದು ಭಾಗವಾಗಿದ್ದ ಬಂಟಮಲೆ ಎಂಬಲ್ಲಿ. ಅಲ್ಲಿದ್ದವರು ನನ್ನ ತಂದೆ ತಾಯಿ, ನಾನು, ಜಿಗಣೆ ಮತ್ತು ಕೋತಿಗಳು ಮಾತ್ರ, ತೀವ್ರವಾದ ಬಡತನವಿದ್ದರಿಂದ ನನ್ನನ್ನು ಶಾಲೆ ಕಳುಹಿಸಲಿಲ್ಲ. ಜೊತೆಗೆ ನಾನು ಆಗಸ್ಟ್ ತಿಂಗಳಿನಲ್ಲಿ ಅಮಾವಾಸ್ಯೆಯ ಒಂದು ಆದಿತ್ಯವಾರ ಕೆಟ್ಟ ದಿನದಲ್ಲಿ ಹುಟ್ಟಿದ ಕಾರಣ ಜಾತಕ ನೋಡಿದವನು ನನಗೆ ವಿದ್ಯಾ ಯೋಗವಿಲ್ಲ ಎಂದು ಬರೆದು ಬಿಟ್ಟಿದ್ದ. ನನ್ನ ಅಪ್ಪ ಅದನ್ನೇ ಇಟ್ಟುಕೊಂಡು ನಿನಗೆ ವಿದ್ಯಾ ಯೋಗ ಇಲ್ಲ, ನನ್ನ ಹತ್ತಿರ ದುಡ್ಡು ಇಲ್ಲ ನೀನು ಶಾಲೆಗೆ ಏಕೆ ಹೋಗಬೇಕು ಎಂದಿದ್ದರು. ಆರು ವರ್ಷಗಳ ಕಾಲ ನಾನು ಕೋಣನ ತರಹ ಅಲ್ಲಿ ಓಡಾಡುತ್ತಿದ್ದೆ, ಆದರೆ ನನ್ನನ್ನು ಶಾಲೆಗೆ ಕಳುಹಿಸಿರಲಿಲ್ಲ. ಒಂದು ದಿನ ಸಂಜೆ ನನ್ನ ಅಮ್ಮ, ಅಪ್ಪನನ್ನು ಈ ಬಗ್ಗೆ ಪ್ರಶ್ನಿಸಿದಾಗ, ನನ್ನಲ್ಲಿ ದುಡ್ಡಿಲ್ಲ, ಇವನ ಜಾತಕದಲ್ಲಿ ವಿದ್ಯೆ ಇಲ್ಲವಾದ ಕಾರಣ ಯಾಕೆ ಶಾಲೆಗೆ ಕಳುಹಿಸಬೇಕು ಎಂದು ನನ್ನ ಅಪ್ಪ ಹೇಳಿದಾಗ ಅವರಿಬ್ಬರಲ್ಲಿ ಜಗಳವಾಗಿ ನನ್ನ ಅಮ್ಮ ತನ್ನ ಎರಡೂ ಕಿವಿಯ ತವರು ಮನೆಯಿಂದ ಕೊಟ್ಟಿದ್ದ ಚಿನ್ನದ ಓಲೆಯನ್ನು ಬಿಚ್ಚಿ ಅಪ್ಪನ ಕೈಗೆ ಕೊಟ್ಟಿ ಇದನ್ನು ಮಾರಿ ಹುಡುಗನನ್ನು ಶಾಲೆಗೆ ಕಳುಹಿಸಿ ಎಂದಿದ್ದಳು. ನನ್ನ ಅಪ್ಪ ಅದನ್ನು ತೆಗೆದುಕೊಳ್ಳದೆಯೇ ಮಾರದೆಯೇ ನನ್ನನ್ನು ಶಾಲೆಗೆ ಕಳುಹಿಸಿದರು. ಬಹುಶಃ ನನ್ನ ಅಮ್ಮ ಆ ದಿವಸ ತನ್ನ ಕಿವಿಯ ಓಲೆಗಳನ್ನು ಬಿಚ್ಚಿ ಅಪ್ಪನ ಕೈಯಲ್ಲಿ ಕೊಡದೇ ಹೋಗಿದ್ದರೆ, ಇವತ್ತು ನಾನು ನಿಮ್ಮ ಎದುರು ನಿಂತು ಮಾತನಾಡುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಇದು ಒಂದು ಅತ್ಯಂತ ಬಿಕ್ಕಟ್ಟಿನ ಕ್ಷಣಗಳಲ್ಲಿ ಮಹಿಳೆ ಸಂಸ್ಕೃತಿಯನ್ನು ಕುಟುಂಬವನ್ನ ಮತ್ತು ದೇಶವನ್ನು ರಕ್ಷಿಸಿಕೊಂಡು ಬಂದ ಬಗೆ, ಅದಕ್ಕೆ ನಾವೆಲ್ಲರೂ ಕೃತಜ್ಞರಾಗಿರೋಣ ಎಂದು ಹೇಳುತ್ತಾ ಈ ಪ್ರಶಸ್ತಿಯನ್ನು ತಮಗೆ ನೀಡಿದ ಸಂಘಕ್ಕೆ ನಾನು ಯಾವಾಗಲೂ ಕೃತಜ್ಞನಾಗಿರುತ್ತೇನೆ ಎಂದರು.

ಅನಂತರ, ಸಂಘದ ಒಂಬತ್ತು ಹಿರಿಯ ಮಹಿಳಾ ಸದಸ್ಯರನ್ನು ಗೌರವಿಸಿ ಅಭಿನಂದಿಸಲಾಯಿತು. ಅಭಿನಂದನಾ ಕಾರ್ಯಕ್ರಮವನ್ನು ಖಜಾಂಚಿ ಶ್ರೀಮತಿ ಆಶಾಲತಾ ಎಂ. ಮತ್ತು ಶ್ರೀಮತಿ ಜಯಶ್ರೀ



ಬಸವರಾಜು ಅವರು ನಡೆಸಿಕೊಟ್ಟರು. ಅಭಿನಂದನೆ ಸ್ವೀಕರಿಸಿದ ಹಿರಿಯ ದೆಹಲಿ ಕನ್ನಡಿಗರ ಮಹಿಳೆಯರು : ಶ್ರೀಮತಿ ಶಕುಂತಲಾ, ಶ್ರೀಮತಿ ನಾಗವೇಣಿ ಹೆಗಡೆ, ಶ್ರೀಮತಿ ಸರೋಜಾ ಮಾಧವ, ಶ್ರೀಮತಿ ರಾಜೇಶ್ವರಿ ಕಲ್ಲೂರ, ಶ್ರೀಮತಿ ನಂದಿನಿ ಮಲ್ಯ, ಶ್ರೀಮತಿ ರಾಜೇಶ್ವರಿ ಭಟ್, ಶ್ರೀಮತಿ ಹಾಸಿರ್, ಶ್ರೀಮತಿ ರಂಗಮಣಿ ರಾವ್ ಮತ್ತು ಶ್ರೀಮತಿ ಗೀತಾ ಆಚಾರ್ಯ. ಹಾಗೇನೇ ಸಂಘಕ್ಕೆ 4.5 ಲಕ್ಷ ರೂಪಾಯಿ ಅನುದಾನ ಬರುವಲ್ಲಿ ನೆರವಾದ ಶ್ರೀಮತಿ ಆಶಾ ನಾಯರ್ ಅವರನ್ನು ಸಹಾ ಗಣ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು.

ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಶ್ರೀ ಸಿ.ಎಂ. ನಾಗರಾಜ ಅವರು ದೆಹಲಿ ಕರ್ನಾಟಕ ಸಂಘದ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ನಾವು ಮಾರ್ಚಿ 8ರಂದೇ ಮಾಡಬೇಕಾಗಿತ್ತು, ಆದರೆ ಮಕ್ಕಳಿಗೆ ಪರೀಕ್ಷೆಗಳು ನಡೆಯುತ್ತಿದ್ದ ಕಾರಣ ತಡವಾಗಿ ಇಂದು ಆಯೋಜನೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಮುಖ್ಯ ಅತಿಥಿಗಳಾಗಿ ಡಾ. ರಾಜೇಶ್ವರಿ ಎಸ್. ಮಲ್ಲೇಗೌಡ ಅವರು ನಮ್ಮ ಸಂಘಕ್ಕೆ ಮೊಟ್ಟ ಮೊದಲ ಬಾರಿ ಬಂದಿರುವುದು ಮತ್ತು ಐ.ಆರ್.ಎಸ್. ಅಧಿಕಾರಿ ಶ್ರೀಮತಿ ಎಸ್. ಕೀರ್ತಿಶ್ರೀಯವರು ಸಂಘದ ಕಾರ್ಯಕ್ರಮದಲ್ಲಿ ಪ್ರಥಮ ಬಾರಿ ಆಗಮಿಸಿರುವುದು ನಮ್ಮ ಸೌಭಾಗ್ಯ, ಅವರಿಬ್ಬರಿಗೂ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಹಾಗೇನೇ ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿಯೇ ಹಿಂದಿನ ಕಾರ್ಯಕಾರಿ ಸಮಿತಿ ಆಯ್ಕೆಯಂತೆ ನೀಡಬೇಕಿದ್ದ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಇಂದು ಸ್ವೀಕರಿಸಿದ ನಮ್ಮ ಸಂಘದ ಮಾಜಿ ಅಧ್ಯಕ್ಷರೂ ಹಾಗು ಕರ್ನಾಟಕ ಸರ್ಕಾರದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಜಿತ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಅಭಿನಂದನೆಗಳು ಎಂದರು.

ಡಾ. ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘಕ್ಕೆ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠಕ್ಕೆಮತ್ತು ಕನ್ನಡ ಭಾಷೆಗಾಗಿ ನೀಡಿದ ಕೊಡುಗೆ ತುಂಬಾ ದೊಡ್ಡದು. ಇಲ್ಲಿರುವ ಸಾಂಸ್ಕೃತಿಕ ಸಮುಚ್ಚಯವನ್ನು ಪೂರ್ಣಗೊಳಿಸಲು ಅವರು ಪಟ್ಟ ಶ್ರಮ, ದೆಹಲಿ ಕನ್ನಡಿಗರನ್ನು ಅಂಗಲಾಚಿ ಧನ ಕ್ರೋಢೀಕರಣ ಮಾಡಿದ ಪರಿ ಶ್ಲಾಘನೀಯ. ಈ ಸಂದರ್ಭದಲ್ಲಿ ಅವರು ವಿಶಿಷ್ಟ ಕನ್ನಡಿಗ ಪ್ರಶಸ್ತಿ ಸ್ವೀಕರಿಸಿದ್ದು ನಮ್ಮ ಸೌಭಾಗ್ಯ. ಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದ ಜೊತೆ ಅತೀ ಹೆಚ್ಚು ಕನ್ನಡದ ಕೆಲಸ ಕಾರ್ಯಗಳು ನೆರವೇರಲಿ ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಸಂಘ 75ನೇ ವರ್ಷಗಳ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಮಾನ್ಯ ಪ್ರಧಾನಮಂತ್ರಿಗಳ ಉಪಸ್ಥಿತಿಯಲ್ಲಿ ಮಾಡಿ, ಅಮೃತ ಕಾಲದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಸ್ವಲ್ಪ ಕಾಲ ಬಿಡುವಿನ ನಂತರ ನಮ್ಮ ಹೊಸ ಕಾರ್ಯಕಾರಿ ಸಮಿತಿ ಬಂದ ಮೇಲೆ ಈ ಪ್ರಥಮ ಕಾರ್ಯಕ್ರಮಕ್ಕೆ ಬಂದಂತಹ ಎಲ್ಲರಿಗೂ ನಾನು ಕೃತಜ್ಞತೆಗಳನ್ನು ತಿಳಿಸುತ್ತೇನೆ ಎಂದರು.

ಡಾ. ಬಿಳಿಮಲೆ ಅವರು ಹೇಳಿದಂತೆ ಎಲ್ಲರ ಜೀವನದಲ್ಲಿಯೂ ಒಂದೊಂದು ಕಥೆ ಇರುತ್ತದೆ. ಅದರಲ್ಲಿ ಸ್ತ್ರೀ ಪಾತ್ರ ದೊಡ್ಡದಾಗಿರುತ್ತದೆ. ಅದೇ ರೀತಿ ಇವತ್ತು ನನ್ನದೇ ಉದಾಹರಣೆ ಹೇಳುವುದಾದರೆ ನನ್ನ ತಾಯಿ ಅವತ್ತು ಒಂದು ಹಳ್ಳಿಗಾಡಿನ ಕುಗ್ರಾಮದಲ್ಲಿ ನನ್ನನ್ನು ಸಲಹಿದ್ದರಿಂದ, ಇಂದು ದೆಹಲಿಗೆ ಬಂದು ನಿಮ್ಮ ಮುಂದೆ ನಾನು ನಿಂತಿರುವುದಕ್ಕೆ ನನ್ನ ತಾಯಿಯ ಕೊಡುಗೆ ದೊಡ್ಡದು, ಅವರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ, ಜೊತೆಗೆ ನನ್ನ ಯಶಸ್ಸಿಗೆ ಕಾರಣಕರ್ತ ಇನ್ನೊಬ್ಬ ಮಹಿಳೆ ನನ್ನ ಧರ್ಮಪತ್ನಿ ಶ್ರೀಮತಿ ಶೋಭಾ. ಅವಳು ನನ್ನ ಎಲ್ಲಾ ಕೆಲಸಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಂತವಳು. ಅವಳಿಗೂ ನಾನು ಈ ಸಂದರ್ಭದಲ್ಲಿ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಮಹಿಳೆಯರು ಬಹಳ ಬಲಿಷ್ಠವಾಗಿ ನಮ್ಮ ಬೆಂಬಲಕ್ಕೆ ನಿಂತಾಗ ನಮ್ಮ ಕುಟುಂಬ ಸುರಕ್ಷಿತವಾಗಿ, ಸುಭಿಕ್ಷವಾಗಿ ಹಾಗು ಸುಖವಾಗಿರುತ್ತದೆ. ಸಾವಿರಾರು ಕಿ.ಮೀ. ದೂರದ ದೆಹಲಿಗೆ ಬಂದು ನೆಲೆ ಕಟ್ಟಿಕೊಂಡ ಸಮಯದಲ್ಲಿ ನಮ್ಮ ದೂರತನವನ್ನು ಮರೆಸಲು ಸಂಘ ಸಂಸ್ಥೆಗಳು ಸಹಾಯವಾಗುತ್ತಿದೆ. ನಮ್ಮ ಯಾವುದೇ ಮಹಿಳೆಗೆ ತೊಂದರೆ ಆಗದಂತೆ ಸಂಘವನ್ನು ನಡೆಸಿಕೊಂಡು ಹೋಗುವುದು ನಮ್ಮ ಧರ್ಮವಾಗಿರುತ್ತದೆ ಎಂದರು.

ವೇದಿಕೆಯ ಮೇಲಿರುವ ನಮ್ಮ ಕಾರ್ಯಕಾರಿ ಸಮಿತಿಯ ಎಲ್ಲಾ ಆರು ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯೆಯರಿಗೆ ಈ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ. ಯಾವುದೇ ಒಂದು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ಸ್ತ್ರೀಯರ ಪಾತ್ರ ದೊಡ್ಡದಾಗಿರುತ್ತದೆ, ಶ್ರೀಮತಿ ಕೀರ್ತಿಶ್ರೀ ಮೇಡಂ ಅವರು ಹೇಳಿದಂತೆ ಅನೇಕ ಕನ್ನಡಿಗರು ಐಎಎಸ್ ಟಾಪರ್ ಶ್ರೀಮತಿ ನಂದಿನಿ ಮತ್ತು ಯು.ಪಿ. ಕ್ಯಾಡೆರ್ ನ ಶ್ರೀಮತಿ ಧನಲಕ್ಷ್ಮೀ ಸೇರಿದಂತೆ ಅನೇಕರು ಐ.ಎ.ಎಸ್. ಅಧಿಕಾರಿಗಳಾಗಿದ್ದಾರೆ, ಯುಪಿಎಸ್ಸಿ ಪರೀಕ್ಷಾರ್ಥಿಗಳಿಗೆ ನಮ್ಮ ಸಂಘ ಸದಾ ಸಹಕಾರ ನೀಡುತ್ತಿದೆ, ಮಾನ್ಯ ಪ್ರಧಾನಮಂತ್ರಿಗಳು ಹೇಳಿದಂತೆ, ಮುಂದಿನ 25 ವರ್ಷಗಳಲ್ಲಿ ವಿಶೇಷವಾದಂತಹ ಕೆಲಸಗಳನ್ನು ಮಾಡುತ್ತಿದ್ದೇವೆ. ಅದರಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ನಾವು ನಿರಂತರವಾಗಿ ನಡೆಸುತ್ತಾ ಇದ್ದೇವೆ. ಸಭಾಂಗಣದಲ್ಲಿರುವ ಅನೇಕ ಕನ್ನಡಿಗರ ಮಕ್ಕಳು ಈ ಕೇಂದ್ರಗಳಲ್ಲಿ ಕನ್ನಡ ಕಲಿತಿದ್ದಾರೆ / ಕಲಿಯುತ್ತಿದ್ದಾರೆ. ಜೊತೆ ಶಾಸ್ತ್ರೀಯ ನೃತ್ಯ ತರಬೇತಿ, ಹಿಂದೂಸ್ತಾನಿ ಸಂಗೀತ ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ಜವಾಬ್ದಾರಿಯನ್ನು ನಮ್ಮ ಈ ಸಂಘ ನಿರ್ವಹಿಸುತ್ತಿದೆ, ಜೊತೆಗೆ ಈ ಅಮೃತ ಕಾಲದಲ್ಲಿ ಯುಪಿಎಸ್ಸಿ ಪರೀಕ್ಷೆಗಾಗಿ ದೆಹಲಿಗೆ ಬರುವ ನಮ್ಮ ಕನ್ನಡಿಗರ ಮಕ್ಕಳಿಗಾಗಿ ಸಂಘಕ್ಕೆ ಇನ್ನೊಂದು ಹೊಸ ಜಾಗವನ್ನು ಪಡೆಯುವ ಪ್ರಯತ್ನದಲ್ಲಿದ್ದೇನೆ, ಅಲ್ಲಿ ಒಂದು ದಾಸೋಹ ಕೇಂದ್ರ ಮಾಡಬೇಕೆಂದಿದ್ದೇವೆ. ಅದೂ ಸಹ ಪ್ರಗತಿಯಲ್ಲಿದೆ, ನಿಮ್ಮೆಲ್ಲರ ಸಹಕಾರದಿಂದ ಆದಷ್ಟು ಬೇಗ ನೆರವೇರಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ ಈ ಹಿಂದೆಯೂ ನಾವು ಸ್ಥಳೀಯ ಕಲಾವಿದರಿಗೆ ಹಲವಾರು ಅವಕಾಶ ನೀಡಿದಂತೆ ಇವತ್ತೂ ಸಹಾ ಸ್ಥಳೀಯ ಮಹಿಳಾ ಕಲಾವಿದರಿಂದ ಸುಂದರವಾದ ನಾಟಕ, ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳು ನಿಮ್ಮ ಮುಂದೆ ಪ್ರಸ್ತುತಿಯಾಗಲಿವೆ, ಎಲ್ಲರಿಗೂ ಮಹಿಳಾ ದಿನದ ಶುಭಾಶಯಗಳು ಎಂದು ಹೇಳಿ ತಮ್ಮ ಅಧ್ಯಕ್ಷೀಯ ಮಾತುಗಳನ್ನು ಮುಗಿಸಿದರು.

ನಂತರ ಮುಖ್ಯ ಅತಿಥಿಗಳಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ನೀಡಲಾಯಿತು.

ಸಭೆಯ ಕೊನೆಯಲ್ಲಿ ಆಗಮಿಸಿದ್ದ ಅತಿಥಿಗಣ್ಯರಿಗೆ, ಅಧ್ಯಕ್ಷರಿಗೆ, ಪ್ರಧಾನ ಕಾರ್ಯದರ್ಶಿಗಳಿಗೆ, ವೇದಿಕೆಯಲ್ಲಿದ್ದ ಮಹಿಳಾ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಮತ್ತು ಸಭಾಂಗಣದಲ್ಲಿ ಆಸೀನರಾಗಿದ್ದ ದೆಹಲಿ ಕನ್ನಡಿಗರಿಗೆ, ಸಮಸ್ತ ಮಹಿಳೆಯರಿಗೆ ಸಂಘದ ಪರವಾಗಿ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಅವರು ವಂದನೆಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ಸ್ಥಳೀಯ ಮಹಿಳಾ ಕಲಾವಿದೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು



ಪ್ರದರ್ಶನಗೊಂಡವು. ಖಜಾಂಚಿಗಳಾದ ಶ್ರೀಮತಿ ಆಶಾಲತಾ ಎಂ. ಅವರು ಈ ಕಾರ್ಯಕ್ರಮವನ್ನು ನಿರ್ವಹಿಸಿದರು. ಗೀತೆಗಳ ಸುಮಧುರ ಸಮೂಹ ಗಾಯನ, ಮನಮೋಹಕ ನೃತ್ಯಗಳು ಪ್ರಸ್ತುತವಾದವು. ಆಕರ್ಷಕ ನೃತ್ಯ ಪ್ರದರ್ಶನ ಮಾಡಿದ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಮಹಿಳೆಯರು ಮತ್ತು ಗಾಯನ ಕಾರ್ಯಕ್ರಮ ನೀಡಿದ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಶಿಕ್ಷಕಿಯರು, ಗೋಕರ್ಣ ಮಂಡಲ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಮಹಿಳೆಯರು ಸಭಿಕರ ಮೆಚ್ಚುಗೆ ಪಡೆದರು.

ಕೊನೆಯಲ್ಲಿ ಪ್ರದರ್ಶನಗೊಂಡ ಸ್ಥಳೀಯ ಮಹಿಳೆಯರು ಅಭಿನಯಿಸಿದ ನಾಟಕ 'ಕುಲ್ಲಾ ಸಿಮ್ಸಿಮ್ ನೆರೆದಿದ್ದ ಪ್ರೇಕ್ಷಕರನ್ನು ಮನರಂಜಿಸಿತು. ಎನ್.ಎಸ್.ಡಿ. ಯ ಕಲಾ ನಿರ್ದೇಶಕಿ ಶ್ರೀಮತಿ ಮೀತಾ ಮಿಶ್ರ ನಿರ್ದೇಶನದಲ್ಲಿ ಆಲಿಬಾಬಾ ಮತ್ತು 40 ಕಳ್ಳರು ಕಥೆ ಆಧಾರಿತ ಸುಮಾರು ಒಂದೂವರೆ ಗಂಟೆ ಅವಧಿಯ ಕುತೂಹಲಕಾರಿಯಾದ ನಾಟಕ ಸ್ಥಳೀಯ ಮಹಿಳಾ ಕಲಾವಿದರ ಮನೋಜ್ಞ ಅಭಿನಯದಿಂದಾಗಿ ಬಹಳ ಆಕರ್ಷಕವಾಗಿ ಮೂಡಿ ಬಂದಿತು.

ನಾಟಕದ ಮುಖ್ಯ ಪಾತ್ರಧಾರಿಗಳು : ಶ್ರೀಮತಿಯರಾದ, ರಾಧ ಕೌಜಲಗಿ, ಜಯಶ್ರೀ ಬಸವರಾಜು, ರೇಣುಕ ಸಾವುಕಾರ, ವಿದ್ಯಾ ಭಟ್, ಮೀತಾ ಮಿಶ್ರ, ಸವಿತಾ ನಾರಾಯಣ ಭಟ್, ಪವಿತ್ರ ತಮಣಕರ್, ಅರ್ಚನಾ ದೇಶಪಾಂಡೆ ಕು.ವೈಷ್ಣವಿ ಸಾಹುಕಾರ್ ಮತ್ತು ಎನ್ ಎಸ್ ಡಿ ಕಲಾವಿದರು ಮತ್ತು ಮಕ್ಕಳು ಪ್ರಸಾಧನ: ಶ್ರೀ ಶಶಿಕಾಂತ್ ಪಾಟೀಲ, ಹಿನ್ನೆಲೆ ಸಂಗೀತ : ಶ್ರೀಮತಿ ಶುಭಾದೇವಿ ಪ್ರಸಾದ್ ಮತ್ತು ಕು. ಪೂರ್ಣಿಮಾ ಅಡಿಗ.

ಉತ್ತಮ ಪೋಷಾಕು, ವೇಷ ಭೂಷಣಗಳೊಂದಿಗೆ ಎಲ್ಲಾ ಮಹಿಳಾ ಪಾತ್ರಧಾರಿಗಳು ಅಭಿನಯಿಸಿದ ನಾಟಕವನ್ನು ವೀಕ್ಷಿಸಿದ ದೆಹಲಿ ಕನ್ನಡಿಗರು ಅಪಾರ ಕರತಾಡನಗಳೊಂದಿಗೆ ತಮ್ಮ ಮೆಚ್ಚುಗೆ ಸೂಚಿಸಿದರು. ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಂದಲೇ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಂದರ್ಭಿಕವಾಗಿ ಮೂಡಿ ಬಂದಿದ್ದು ವಿಶೇಷವಾಗಿತ್ತು. ನಂತರ, ನೃತ್ಯ ಪ್ರದರ್ಶನ ಮತ್ತು ಗೀತೆಗಾಯನ ನೀಡಿದ ಮಹಿಳಾ ಕಲಾವಿದರಿಗೆ ಹಾಗೂ ನಾಟಕದಲ್ಲಿ ಅಭಿನಯಿಸಿದ ಮಹಿಳೆಯರಿಗೆ ನಿರ್ದೇಶಕಿ ಶ್ರೀಮತಿ ಮೀತಾ ಮಿಶ್ರ ಅವರಿಗೆ ಮುಖ್ಯ ಅತಿಥಿಗಳಿಂದ ಪದಕ ಪ್ರದಾನ ಮಾಡಿ ಅಭಿನಂದಿಸಲಾಯಿತು.

ನಂತರ ರುಚಿಕರ ರಾತ್ರಿಯ ಭೋಜನ ಸವಿದು ದೆಹಲಿಯ ಕನ್ನಡ ಮಹಿಳೆಯರು ಹಾಗು ಆಗಮಿಸಿದ್ದ ಎಲ್ಲಾ ಕನ್ನಡಿಗರ ಕುಟುಂಬದವರು ಸಂತಸಪಟ್ಟರು. ಒಟ್ಟಾರೆ ಈ ಕಾರ್ಯಕ್ರಮವು ದೆಹಲಿ ಕನ್ನಡಿಗರ ಮನಃಪಟಲದಲ್ಲಿ ಸದಾ ಉಳಿಯುವಂತೆ ಅಭೂತಪೂರ್ವವಾಗಿ ಯಶಸ್ವಿಯಾಯಿತು.

***ಅಭಿಮತ ವರದಿ***

# 'ಕಪ್ಪೆ ಮದುವೆ': ಒಂದು ಅವಲೋಕನ


"ಕತೆಗಳು ಎಲ್ಲರ ಬಳಿಯೂ ಇರುತ್ತವೆ. ಲೇಖಕರಿಗೂ ಉಳಿದವರಿಗೂ ಇರುವ ವ್ಯತ್ಯಾಸವೇನೆಂದರೆ ಲೇಖಕರು ತಮ್ಮ ಕತೆಗಳನ್ನು ಅಕ್ಷರ ರೂಪಕ್ಕಿಳಿಸುತ್ತಾರೆ. ಉಳಿದವರು ಅದರ ಗೋಜಿಗೆ ಹೋಗುವುದಿಲ್ಲ", ಎಂದು ನಾನು ಸಾಮಾನ್ಯವಾಗಿ ಹೇಳುತ್ತಿರುತ್ತೇನೆ. ಹಾಗೆ ನೋಡಿದರೆ ಕತೆಗಳೇ ನಮಗರಿವಿಲ್ಲದಂತೆ ಅನುದಿನವೂ ನಮ್ಮನ್ನು ನಡೆಸುತ್ತಿರುತ್ತವೆ. ಜನಪ್ರಿಯ ಪುಢಾರಿಯೊಬ್ಬನ ಭಾಷಣ, ಆಫೀಸಿನಲ್ಲಿ ಬಾಸಿಗೆ ಹೇಳುವ ನೆಪ, ಗೆಳೆಯರೊಂದಿಗಿನ ಹರಟೆಗಳಲ್ಲಿ ಬರುವ ಗಾಸಿಪ್ಪು, ಮಗಳು ಪಾಕೆಟ್ ಮನಿಗಾಗಿ ಪೂಸಿ ಹೊಡೆಯುವ ಶೈಲಿ, ನಮಗೆ ಅಗತ್ಯವೇ ಇಲ್ಲದ ಉತ್ಪನ್ನವೊಂದನ್ನು ನಮ್ಮತ್ತ ದಾಟಿಸುವ ಸೇಲ್ಸ್ ಮ್ಯಾನ್, ಲೋಕಲ್ ಟೀ ಅಂಗಡಿಯಾತನೊಂದಿಗೆ ಮಾಡುವ ಕುಶಲೋಪರಿ... ಹೀಗೆ ನಾವಿರುವುದು ಕತೆಗಳದ್ದೇ ಲೋಕದಲ್ಲಿ. ಹೀಗಾಗಿ ವಯಸ್ಸಿನ ಭೇದವಿಲ್ಲದೆ ಕತೆಗಳೆಂದರೆ ಎಲ್ಲರಿಗೂ ಅಚ್ಚುಮೆಚ್ಚು.

ಬಹುತೇಕ ಎಲ್ಲರ ಬಾಲ್ಯದಲ್ಲೂ ಸಾಮ್ಯತೆಯಂತೆ ಸಿಗುವ ಏಕೈಕ ಅಂಶವೆಂದರೆ ಕತೆಗಳು. ಈ ನಿಟ್ಟಿನಲ್ಲಿ ನಮ್ಮ ಪೀಳಿಗೆಯ ಮಕ್ಕಳ ಬಾಲ್ಯವನ್ನು ಶ್ರೀಮಂತಗೊಳಿಸಲೆಂದೇ ಖ್ಯಾತ ಸಾಹಿತಿ, ಸಂಘಟಕಿ ಶ್ರೀಮತಿ ವತ್ಸಲಾ ಸುರೇಶ್ ಅವರು ಮತ್ತೊಂದು ಕೃತಿಯೊಂದಿಗೆ ಬಂದಿದ್ದಾರೆ. ವತ್ಸಲಾರ "ಕಪ್ಪೆ ಮದುವೆ" ಮಕ್ಕಳಿಗಾಗಿ ಬರೆಯಲಾಗಿರುವ ಸ್ಫೂರ್ತಿದಾಯಕ ಕತೆಗಳ ಸಂಕಲನ. ಇಂದಿನ ಸೆಲ್ಫ್ ಹೆಲ್ಪ್ ಸಾಹಿತ್ಯದ ಯುಗದಲ್ಲಿ ಹೇರಳವಾಗಿ ಬರುತ್ತಿರುವ ಸ್ಫೂರ್ತಿದಾಯಕ ಕೃತಿಗಳಲ್ಲಿ ಕಾಣುವ ಬಹಳ ದೊಡ್ಡ ಕೊರತೆಯೆಂದರೆ ಓದುಗರಿಗೂ, ಪುಸ್ತಕಗಳಲ್ಲಿ ಬರುವ ಅಂಶಗಳಿಗೂ ನೇರವಾಗಿ ಕನೆಕ್ಟ್ ಆಗದಿರುವುದು. ಹೀಗಾಗಿ ಈ ಬಗೆಯ ಕತೆಗಳು ಆದರ್ಶದ ಲೇಪವುಳ್ಳ ದೂರದೂರಿನ ಕತೆಗಳಂತೆ ಉಳಿಯುತ್ತವೆಯೇ ಹೊರತು ನೈಜಜೀವನದಲ್ಲಿ ಅಳವಡಿಸಿಕೊಳ್ಳಬಲ್ಲ ವಿಚಾರಗಳಂತೆ ಗಾಢವಾಗಿ ತಟ್ಟುವುದಿಲ್ಲ. ಆದರೆ ವತ್ಸಲಾರ ಕಪ್ಪೆ ಮದುವೆ ಕೃತಿಯು ಈ ಸವಾಲನ್ನು ಸಮರ್ಥವಾಗಿ ಗೆದ್ದಿದೆ. ಏಕೆಂದರೆ ಇಲ್ಲಿಯ ಕತೆಗಳಲ್ಲಿರುವುದು ಸಂಪೂರ್ಣವಾಗಿ ಮಕ್ಕಳದ್ದೇ ಜಗತ್ತು. ಹೀಗೆ ತಮ್ಮ ಪುಟ್ಟ ಲೋಕವನ್ನು ಮತ್ತಷ್ಟು ಚಂದಗಾಣಿಸುವ ನಿಟ್ಟಿನಲ್ಲಿ ಮಕ್ಕಳು ಎದೆಗವಚಿಕೊಂಡು ಓದಬಲ್ಲ ಕತೆಗಳು ಇಲ್ಲಿವೆ.

ಸಾಮಾನ್ಯವಾಗಿ ಮಕ್ಕಳ ಕತೆಗಳಲ್ಲಿ ಹೇರಳವಾಗಿ ಸಿಗುವ ಮಾನವ ಸಹಜ ಸಂಗತಿಗಳಾದ ಗುಣ, ಆಸೆ, ನೀತಿಗಳಾಚೆಗೂ ಇಲ್ಲಿನ ಕತೆಗಳು ತಮ್ಮ ಪರಿಧಿಯನ್ನು ವಿಸ್ತರಿಸಿಕೊಂಡಿವೆ. ಮೊಬೈಲು-ಸಿನೆಮಾಗಳ ಪರಿಣಾಮ, ಮೂಢನಂಬಿಕೆಗಳು, ತಂತ್ರಜ್ಞಾನ... ಇತ್ಯಾದಿ ಸ್ವಾರಸ್ಯಕರ ಸಂಗತಿಗಳ ಬಗ್ಗೆ ಮಕ್ಕಳಿಗೆ ಓದಿಸಬಹುದಾದ ಒಳ್ಳೊಳ್ಳೆಯ ಕತೆಗಳು ಇಲ್ಲಿವೆ. ಕೃತಿಯ ಶೀರ್ಷಿಕೆಯಾಗಿರುವ "ಕಪ್ಪೆ ಮದುವೆ" ಕತೆಯಂತೂ ತಿಳಿಹಾಸ್ಯ, ಚುರುಕು ಸಂಭಾಷಣೆ, ಸುಲಲಿತ ನಿರೂಪಣೆಗಳಿಂದ ಒಂದೊಳ್ಳೆಯ ಓದಿನ ಅನುಭವವನ್ನು ನೀಡುತ್ತದೆ. ವತ್ಸಲಾ ಅವರು ಮಕ್ಕಳ ಲೋಕವನ್ನು ಹತ್ತಿರದಿಂದ ಕಂಡಿರುವವರಲ್ಲದೆ, ಮಕ್ಕಳ ಬಗೆಗೆ ನಿಜವಾದ ಕಾಳಜಿಯನ್ನು ಹೊಂದಿರುವವರಾದ್ದರಿಂದ ಇಲ್ಲಿರುವ ಕತೆಗಳನ್ನು ಬಹಳ ಆಸ್ಥೆಯಿಂದ ಕಟ್ಟಿಕೊಟ್ಟಿದ್ದಾರೆ ಎಂಬುದು ಗಮನಾರ್ಹ ಅಂಶ.

ಕೃತಿಗೆ ಮುನ್ನುಡಿಯನ್ನು ಬರೆದಿರುವ ಹಿರಿಯ ಲೇಖಕಿ ಪ್ರಮೀಳಾ ಮಾಧವರ ಅವರು ವತ್ಸಲಾರನ್ನು ಮಕ್ಕಳ ಭಾವಲೋಕದ ಒಡನಾಡಿ ಎಂದು ಕರೆದಿದ್ದಾರೆ. ಜೊತೆಗೇ ಮತ್ತೋರ್ವ ಖ್ಯಾತ ಲೇಖಕರಾಗಿರುವ ಭದ್ರಾವತಿ ರಾಮಚಾರಿಯವರು ಇಲ್ಲಿಯ ಕಥೆಗಳನ್ನು ಪಠ್ಯಪುಸ್ತಕಗಳಲ್ಲೂ ಅಳವಡಿಸಿಕೊಳ್ಳಬಹುದು ಎಂದು ತಮ್ಮ ಆಶಯ ನುಡಿಯಲ್ಲಿ ದಾಖಲಿಸಿದ್ದಾರೆ. ಇವೆಲ್ಲವೂ ಮಕ್ಕಳ ಸಾಹಿತ್ಯಲೋಕದಲ್ಲಿ ಓದುಗರಿಗೆ ಅವರ ಮೇಲಿರುವ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿವೆ. ಇನ್ನು ಕಪ್ಪೆ ಮದುವೆಯ ಮುಖಪುಟ ಚಿತ್ರವನ್ನು ಬಿಡಿಸಿರುವ ಶಂಕರ ಬೆನ್ನೂರುರವರ ಚಿತ್ರವು, ದಶಕಗಳ ಹಿಂದೆ ಬರುತ್ತಿದ್ದ ನಾಡಿಗ್‌ರವರ ಚುರುಕು ವ್ಯಂಗ್ಯಚಿತ್ರಗಳನ್ನು ನೆನಪಿಸುವಂತಿದೆ. ಈ ಆಕರ್ಷಕ ಮುಖಪುಟವು ನಿಸ್ಸಂದೇಹವಾಗಿ ಕೃತಿಯ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ.

ಹೀಗೆ ಮಕ್ಕಳ ಸಾಹಿತ್ಯಲೋಕದಲ್ಲಿ ಈಗಾಗಲೇ ಸಾಕಷ್ಟು ಖ್ಯಾತರಾಗಿರುವ ವತ್ಸಲಾ ಅವರು ಈ ಕೃತಿಯ ಮೂಲಕವಾಗಿ ಮತ್ತೊಂದು ಕೊಡುಗೆಯನ್ನು ಮಕ್ಕಳಿಗಾಗಿ ನೀಡಿದ್ದಾರೆ. ಇಲ್ಲಿಯ ಕತೆಗಳು ಅವರ ಎಂದಿನ ಲವಲವಿಕೆಯ ಶೈಲಿಯಲ್ಲಿರುವುದಲ್ಲದೆ, ಬಾಲ್ಯಸಹಜ ಸಂವೇದನೆಗಳನ್ನು ಸೃಜನಶೀಲ ಚೌಕಟ್ಟಿನಲ್ಲಿ ಪ್ರಸ್ತುತಪಡಿಸಿರುವ ಒಂದು ಚಂದದ ಪ್ರಯತ್ನವಾಗಿದೆ. ಮಕ್ಕಳಿಗಾಗಿಯೇ ದಾಖಲಿಸಿರುವ ಇಂತಹ ಸದಭಿರುಚಿಯ, ಸ್ಫೂರ್ತಿದಾಯಕ ಕೃತಿಗಳು ಎಲ್ಲಾ ಕನ್ನಡ ಶಾಲೆಗಳ ಗ್ರಂಥಾಲಯಗಳನ್ನಷ್ಟೇ ಅಲ್ಲದೆ, ಹಲವು ಭಾಷೆಗಳಿಗೂ ಅನುವಾದವಾಗಿ ಅಸಂಖ್ಯಾತ ಬಾಲ ಓದುಗರನ್ನು ತಲುಪಬೇಕಾದ ಅವಶ್ಯಕತೆಯು ಇಂದು ಹೆಚ್ಚಿದೆ. ವತ್ಸಲಾರ "ಕಪ್ಪೆ ಮದುವೆ" ಇದಕ್ಕೊಂದು ಮುನ್ನುಡಿಯನ್ನು ಬರೆಯಲಿ.






ಕಥಾ ಸಂಕಲನ ಲೇಖಕಿ :
**ಶ್ರೀಮತಿ ವಸುವತ್ಸಲೆ**
(ವತ್ಸಲಾ ಸುರೇಶ್), ಶಿಕ್ಷಕಿ, ಸಾಹಿತಿ, ಚಿಂತನಕಾರ್ತಿ, ಬೆಂಗಳೂರು



ವಿಮರ್ಶಕರು
**ಶ್ರೀ ಪ್ರಸಾದ್ ನಾಯ್ಕ್**
(ಲೇಖಕರು, ಕತೆಗಾರರು, ಅಂಕಣಕಾರರು ಮತ್ತು ಅನುವಾದಕರು)

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಡಾ. ಮಂಜುನಾಥ ಗೋಸಾಲ್ ಅವರಿಗೆ ಕಳೆದ ವರ್ಷ 77ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನದಂದು ಅವರ ಉತ್ತಮ ಸಾಧನೆಗಾಗಿ ರಾಷ್ಟ್ರಪತಿ ಪದಕವನ್ನು ಪ್ರದಾನ ಮಾಡಲಾಗಿದೆ. ಇದು ಎಲ್ಲಾ ದೆಹಲಿ ಕನ್ನಡಿಗರಿಗೆ ಅತ್ಯಂತ ಸಂತೋಷದ ಮತ್ತು ಹೆಮ್ಮೆಯ ಸುದ್ದಿಯಾಗಿದೆ.ಮೂಲತಃ ಇವರು ಕರ್ನಾಟಕದ ಹುಬ್ಬಳ್ಳಿಯವರಾಗಿದ್ದು, 1998 ರಿಂದ ದೆಹಲಿಯಲ್ಲಿ ಗೃಹ ವ್ಯವಹಾರಗಳ ಸಚಿವಾಲಯದ ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ (BPR&D)ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹುಬ್ಬಳ್ಳಿಯ ಇಂಜಿನಿಯರಿಂಗ್ ಕಾಲೇಜಿನಿಂದ ಮೆಕ್ಯಾನಿಕಲ್ ಇಂಜಿನಿಯರ್ ಆದ ಇವರು 2010 ರಲ್ಲಿ ಐಐಟಿ ದೆಹಲಿ (IIT-D)ಯಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಸರಳ ಸಜ್ಜನಿಕೆಯ ವ್ಯಕ್ತಿ ಯಾದ ಇವರು ದೆಹಲಿ ಕರ್ನಾಟಕ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಸ್ಥಳೀಯ ಇತರ ಸಂಘ ಸಂಸ್ಥೆಗಳೊಂದಿಗೆ ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ರಾಷ್ಟ್ರಪತಿ ಪದಕ ಪುರಸ್ಕೃತರಾದ ಡಾ. ಮಂಜುನಾಥ ಗೋಸಾಲ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು.



# ಶ್ರೀ ಚೆನ್ನು ಎಸ್. ಮಠದ



1990ರ ನವೆಂಬರ್ ಕೊನೆಯ ವಾರದ ಸಂಜೆ. ದೆಹಲಿಯ ಐಫ್ಯಾಕ್ಸ್ ಥಿಯೇಟರಿನಲ್ಲಿ ಅಂದು ಆರ್. ನಾಗೇಶ್‌ವರಿಂದ ನಿರ್ದೇಶಿತವಾದ ನಾಟಕಗಳ ಪ್ರದರ್ಶನ. ಕಿಕ್ಕಿರಿದ ಜನಸಂದಣಿ. ಮಧ್ಯಂತರದಲ್ಲಿ ಸಭಾಂಗಣದಿಂದ ಹೊರಬಂದಾಗ, ಮೆಲುದನಿಯ ವ್ಯಕ್ತಿಯೊಬ್ಬರು ಎದುರಾದರು. "ಮೊನ್ನೆಯ ನವರಸ ನಾಟಕದಲ್ಲಿ ನರಸಿಂಹನ ಪಾತ್ರ ಮಾಡಿದವರು ನೀವೇ ಅಲ್ಲವೇ, ಭಾಳ ಚೆನ್ನಾಗಿತ್ತು. ಒಂಭತ್ತು ರಸಗಳನ್ನು ಪ್ರತಿ ದೃಶ್ಯದಲ್ಲೂ ತೋರಿಸುತ್ತ ಬರುವುದು ತುಂಬಾ ಕಷ್ಟದ ಕೆಲಸ. ಅದನ್ನು ಬಹಳ ಚೆನ್ನಾಗಿ ನಿಭಾಯಿಸಿದ್ದೀರಿ" ಎಂದು ಹೇಳುತ್ತಾ ತಮ್ಮ ಹೆಸರು ಚೆನ್ನು ಎಸ್. ಮಠದ ಎಂದು ಪರಿಚಯ ಮಾಡಿಕೊಂಡು ಕೈ ಕುಲುಕಿದ ಚೆನ್ನು ಮಠದ 23 ವರ್ಷಗಳು ಕಳೆದರೂ ನನ್ನ ಕೈ ಬಿಟ್ಟಿಲ್ಲ.

ಕಾಯಕವೇ ಕೈಲಾಸ ಎಂಬ ಬಸವಣ್ಣನವರ ನುಡಿಯನ್ನು ತತ್ವಶಃ ಪಾಲಿಸುತ್ತಿರುವ ಚೆನ್ನು ಮಠದವರ ಕೆಲಸದ ಗುಟ್ಟು, ಕೇವಲ ಆತ್ಮ ತೃಪ್ತಿ. ಉತ್ತಮ ವಿಚಾರಗಳಿವೆ; ವಾಗ್ಮಿಯಲ್ಲ, ಚರ್ಚೆಯಿಲ್ಲ, ಸಲಹೆಗಳ ಮಹಾಪೂರವೇ ಇದೆ. ಕಲೆಯ ಆಗರ. ಚಿತ್ರಕಲೆಯಲ್ಲಂತೂ ಎತ್ತಿದ ಕೈ. ಕೆಲವೇ ಪದಗಳಲ್ಲಿ ಬಹಳಷ್ಟನ್ನು ಬರೆದು ತಿಳಿಸಬಲ್ಲ ಸೂಕ್ಷ್ಮ ಜೀವಿ. ದೆಹಲಿ ಕರ್ನಾಟಕ ಸಂಘಕ್ಕೆ ಅವರು ಸಲ್ಲಿಸಿದ ಸೇವೆ ಅಗಾಧವಾಗಿದೆ. ಅವರೊಬ್ಬ ಭಾವ ಜೀವಿ.

ನಂತರದ ಒಂದೆರಡು ನಾಟಕ ಪ್ರದರ್ಶನಗಳಿಗೆ ಪ್ರಸಾದನ ಕಾರ್ಯ ನಿರ್ವಹಿಸಿದ ಚೆನ್ನು 1991–93ರ ಸಂಘದ ಚುನಾವಣೆಯಲ್ಲಿ ನಮ್ಮ ತಂಡದಿಂದ ಸ್ಪರ್ಧಿಸಿದ್ದರು. ಚುನಾವಣೆಯ ನಂತರ ಆಗ ಖಜಾಂಚಿಗಳಾಗಿದ್ದ ಗಣೇಶನ್ ಅವರು ವರ್ಗವಾಗಿ ಬೆಂಗಳೂರಿಗೆ ಹೋದಾಗ, ನಿಯಮಾವಳಿ ಪ್ರಕಾರ, ಜಂಟಿ ಕಾರ್ಯದರ್ಶಿ ಬಿ.ಪಿ. ಉತ್ತಪ್ಪನವರು ಖಜಾಂಚಿಗಳಾಗಿ, ಚೆನ್ನು ಮಠದ ಅವರು ಜಂಟಿ ಕಾರ್ಯದರ್ಶಿಯಾಗಿ ಭಡ್ತಿ ಹೊಂದಿ ಮುಂದಿನ ಸುಮಾರು ಎರಡು ಮುಕ್ಕಾಲು ವರ್ಷ ಜೊತೆಗೂಡಿ ಕೆಲಸ ಮಾಡಿದ್ದೆವು.

ನಾನು ಸಂಘದಲ್ಲಿ ಪ್ರಧಾನ ಕಾರ್ಯದರ್ಶಿ ಆಗಿದ್ದಾಗಲೇ ಅವರೂ ಸಹ ನನ್ನ ಜೊತೆಗೆ ಬೇರೆ ಬೇರೆ ಹಂತಗಳಲ್ಲಿ ದುಡಿದಿದ್ದರು. ಸಲಹೆಗಳನ್ನು ಕೊಟ್ಟಿದ್ದರು. ಮಾರ್ಗದರ್ಶನ ಮಾಡಿದ್ದರು.

ಚೆನ್ನು ಮಠದವರನ್ನು ನೋಡಿದಾಗ, ಅವರೊಬ್ಬ ದೊಡ್ಡ ಕಲಾವಿದ ಎಂಬ ಭಾವನೆ ಯಾರಿಗೂ ಮೂಡುವುದಿಲ್ಲ. ಅವರ ಕೆಲಸದಲ್ಲಿ ಸದ್ದಿಲ್ಲ. ಈಗಲೂ ನೆನಪಿದೆ. ಏಕಾಂಕ ನಾಟಕ ಸ್ಪರ್ಧೆಗಳ ಸಮಯದಲ್ಲಿ ಬ್ರೋಶರ್‌ಗಳ ವಿನ್ಯಾಸ ಅಥವಾ ಇನ್ನಾವುದೋ ಸಂದರ್ಭಗಳಲ್ಲಿ ಸಂಘದ ವಿಶಿಷ್ಟ ಕಾರ್ಯಕ್ರಮಗಳಲ್ಲಿ ವಿನ್ಯಾಸದ ಅವಶ್ಯಕತೆ ಇದ್ದಾಗಲೆಲ್ಲ ರಾತ್ರೆ 12 ಗಂಟೆಗೆ ಅವರ ಮನೆಗೆ ಹೋಗಿ ಅವರನ್ನು ನಿದ್ದೆಯಿಂದ ಎಬ್ಬಿಸಿ, ಅವರ ಶ್ರೀಮತಿ ಜಮುನಾ ಮಠದವರಲ್ಲಿ ಒಂದು ಚಹ ಮಾಡಿಕೊಡುವಂತೆ ಒತ್ತಾಯಿಸಿ ಸಂಘಕ್ಕೆ ಬೇಕಾದ ಚಿತ್ರವನ್ನು ಅವರಿಂದ ಮಾಡಿಸಿ, ರಾತ್ರೆ 2 ಗಂಟೆಗೆ ಅವರ ಮನೆಯಿಂದ ಹೊರಬಿದ್ದ



ಸಂದರ್ಭಗಳು ಅನೇಕ. ಆಗಿನ್ನೂ ಪುಟಾಣಿಗಳಾಗಿದ್ದ ಮಗ ವಿನಯ್ ಮತ್ತು ಮಗಳು ನಂದಿನಿಗೆ ಇದೆಲ್ಲ ಒಂದು ವಿಚಿತ್ರ ಅನುಭವ. ಆದರೆ ಸಂಘದ ಪ್ರತಿಯೊಂದು ಕಾರ್ಯಕ್ರಮಕ್ಕೂ ಬರುತ್ತಿದ್ದ ಅವರೆಲ್ಲ ನಮ್ಮ ಮನೆ ಮಕ್ಕಳಂತಿದ್ದರು. ಹಾಗಾಗಿ ಅವರಿಗೂ ಅಭ್ಯಾಸವಾಗಿತ್ತು.

ಸಂಘದ ನೆನಪಿನ ಸಂಚಿಕೆಯನ್ನು ಹೊರತರುವ ಸಂದರ್ಭದಲ್ಲಿ ಕೊನೇ ಘಳಿಗೆಯಲ್ಲಿ ಸುಮಾರು 40 ತಾಸುಗಳ ಕಾಲ ನಿರಂತರವಾಗಿ ನಾವಿಬ್ಬರೂ ಜೊತೆ ಸೇರಿ ಮಾಡಿದ ಕೆಲಸ ಮರೆಯುವಂತಿಲ್ಲ. ಸಂಘದ ಕಾರ್ಯಕಾರೀ ಸಮಿತಿಯಲ್ಲಿ ಹಲವಾರು ಬಾರಿ ಸದಸ್ಯರು, ಪದಾಧಿಕಾರಿಗಳಾಗಿ, ಚೆನ್ನಯ್ಯ ಸಿದ್ದರಾಮಯ್ಯ ಮಠದ ಮಾತ್ರವಲ್ಲ, ಅವರ ಪತ್ನಿ ಜಮುನಾ ಸಿ. ಮಠದ ಅವರೂ ಸಹ ಕಾರ್ಯ ನಿರ್ವಹಿಸಿದ್ದಾರೆ. ಅಭಿಮತ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿಯೂ ಹಲವಾರು ವರ್ಷಗಳ ಕಾಲ ಅವರು ಸಲ್ಲಿಸಿದ ಸೇವೆ ಶ್ಲಾಘನೀಯ.

ದೆಹಲಿ ಕರ್ನಾಟಕ ಸಂಘ, ಬಸವ ಇಂಟರ್ ನ್ಯಾಷನಲ್ ಸೆಂಟರ್ ಅಥವಾ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಚೆನ್ನು ಅವರ ಪರಿಚಯ ಇಲ್ಲದ ಕನ್ನಡಿಗರಿಲ್ಲ ನಿಜ. ಆದರೆ ದೆಹಲಿಯ ಕನ್ನಡಿಗರಿಗೆ ತಿಳಿಯದ ಅವರ ಇನ್ನೊಂದು ಮುಖ ಎಂದರೆ ಬೀದರದಲ್ಲಿ ಇರುವ ಚನ್ನಾರ್ಟ್ಸ್ ಎಜ್ಯುಕೇಶನ್ ಸೊಸೈಟಿ, ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ, ಗುಲಬರ್ಗಾ ಯುನಿವರ್ಸಿಟಿ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿ, ದೆಹಲಿಯಲ್ಲಿ ಕೃಷಿ ಖಾತೆಯಲ್ಲಿ ಉದ್ಯೋಗಸ್ಥರಾಗಿ ಬಂದಾಗ, ಬೀದರದ ಕಲಾ ವಿದ್ಯಾಲಯವನ್ನು ತಮ್ಮ ಅಣ್ಣನಿಗೆ ಬಿಟ್ಟು ಕೊಟ್ಟು ಸೇವಾ ನಿವೃತ್ತಿಯ ನಂತರ ಅಧ್ಯಕ್ಷರಾಗಿ ಮುಂದುವರಿಸಿ, ಈಗಲೂ ಈ ಪ್ರತಿಷ್ಠಿತ ಸಂಸ್ಥೆಯ ಅಧ್ಯಕ್ಷರಾಗಿ ಮತ್ತೆ ಮುಂದುವರಿದಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಮೊಟ್ಟ ಮೊದಲ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ, ಮುಂಬೈಯ ಮೈಸೂರು ಅಸೋಸಿಯೇಶನ್‌ನಲ್ಲಿ ನಡೆದ ನಾಟಕ 'ದೇವರು ಎದ್ದು ಬಂದಾಗ'. ಶ್ರೀ ಎಚ್.ಎಸ್. ಕುಲಕರ್ಣಿಯವರ ನಿರ್ದೇಶನದ ನಾಟಕದಲ್ಲಿ ಸಂಘದ ಅಂದಿನ ಅಧ್ಯಕ್ಷ ಶ್ರೀ ಕೆ.ಆರ್. ನಾಗರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಸರವು ಕೃಷ್ಣ ಭಟ್, ಮ್ಯಾನೇಜರ್ ಲಕ್ಷ್ಮೀನಾರಾಯಣ ಹೆಗಡೆ ಕುಟುಂಬ ಹಾಗೂ ಚೆನ್ನು ಎಸ್. ಮಠದ, ಜಮುನಾ ಸಿ. ಮಠದ, ವಿನಯ ಮಠದ ಹಾಗೂ ಎಸ್.ಎಲ್. ಭಂಡಾರ್‌ಕರ್, ಎಸ್.ಬಿ. ಕುರಂದವಾಡ ಮುಂತಾದವರೆಲ್ಲ ಭಾಗಹಿಸಿದ್ದರು. ನಾಟಕಗಳೆಂದರೆ ತುಂಬಾ ತೊಡಗಿಸಿಕೊಳ್ಳುವ ಚೆನ್ನು ಮಠದವರ ಕೊಡುಗೆ ಅನನ್ಯ ಹಾಗೂ ಸದಾ ಸ್ಮರಣೀಯ. ದೆಹಲಿ ಕರ್ನಾಟಕ ಸಂಘದ ಒಳಿತಿನ ವಿಷಯ ಬಂದಾಗ ಅನೇಕ ಬಾರಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಎಲ್ಲ ಸಂದರ್ಭಗಳಲ್ಲೂ ನನ್ನ ಜೊತೆಗಿದ್ದ ಚೆನ್ನು ಅಂತಹ ನಿರ್ಧಾರಗಳು ಯಾಕೆ ಬೇಕು ಅನ್ನುವುದನ್ನು ಸರ್ವ ಸದಸ್ಯರಿಗೆ ಮನದಟ್ಟು ಮಾಡುತ್ತಿದ್ದ ರೀತಿಯನ್ನು ನಾನೆಂದೂ ಮರೆಯಲಾರೆ. ವಿಷಯಗಳನ್ನು ಬೇಗನೆ ಅರ್ಥ ಮಾಡಿಕೊಂಡು ಸಮಸ್ಯೆಯ ಭಾಗವಾಗದೆ ಪರಿಹಾರದ ಭಾಗವಾಗಿ, ದೂರದರ್ಶಿಯಾಗಿ, ಅವರು ಸಮಾಜಕ್ಕೆ ನೀಡಿದಷ್ಟು ಕೊಡುಗೆ, ಪ್ರಾಯಶಃ, ಅವರ ಮನೆಗಾಗಿಯೂ ನೀಡಿರಲಾರರು. ತಮ್ಮ ಸ್ವಂತಿಕೆಯನ್ನು ಕಾಪಾಡಿಕೊಂಡೇ ಎಲ್ಲರೊಳಗೊಂದಾಗುವ ಚೆನ್ನುವಿನ ಜೊತೆ ಕೆಲಸ ಮಾಡುವುದು ಒಂದು ಸುಖಾನುಭವ.

ಸಂಘದ ಮುಂಭಾಗದಲ್ಲಿರುವ ಶಿಲ್ಪಕಲೆಗಳ ಆಯೋಜನೆಗೆ ಅವರ ಪರಿಶ್ರಮ ಹಾಗೂ ಒಂದು ಕಲ್ಲಿನ ಮೇಲೆ ಅವರೇ ಕೆತ್ತನೆ ಕೆಲಸ ಮಾಡುವುದನ್ನು ನೋಡಿದ ನನಗೆ ಅವರೊಬ್ಬ ಅಪರೂಪದ ಆಸ್ತಿ ಎಂಬುದನ್ನು ತಮ್ಮ ಕಾಯಕದಿಂದಲೇ ಮನದಟ್ಟು ಮಾಡಿಸಿದ್ದಾರೆ. 1999ರಲ್ಲಿ ದೆಹಲಿಯ ನಾಟಕ ತಂಡಗಳಿಗೆ ಹೆಚ್ಚಿನ ಹಣಕಾಸು ಒದಗಿಸುವ ವಿಚಾರದಲ್ಲಿ ಕಾರ್ಯಕಾರೀ ಸಮಿತಿಯ ನಿರ್ಧಾರವನ್ನು ಪುನರ್‌ಪರಿಶೀಲಿಸುವಂತೆ ಒತ್ತಾಯಿಸುವಾಗ ಚೆನ್ನು ಮಠದ ಅವರು ನನ್ನ ಜೊತೆಗಿದ್ದರು. ಶ್ರೀ ಎಚ್. ಎಸ್. ಕುಲಕರ್ಣಿ, ಜಯಪ್ರಕಾಶ ಬೆಂಗೇರಿ, ಚೆನ್ನು ಎಸ್. ಮಠದ, ಹರಿಶ್ಚಂದ್ರ ಬಂಟ್ವಾಳ, ಎಸ್.ಬಿ. ಕುರಂದವಾಡ ಮುಂತಾದವರ ಸದ್ದಿಲ್ಲದ ಸಹಕಾರ ದೆಹಲಿ ಸಾಂಸ್ಕೃತಿಕ ವಲಯಕ್ಕೆ ತಂದ ಅರ್ಥಪೂರ್ಣ ಸೇವೆ.

ಸಂಘದಿಂದ ನಮಗೆ ಅನುಕೂಲವಾಗಿದೆ. ನಮ್ಮ ಮಕ್ಕಳು ಕನ್ನಡದಲ್ಲಿ ಮಾತನಾಡುವುದಕ್ಕೆ ಅವಕಾಶವಾಗಿದೆ ಎಂದು ಕೃತಜ್ಞತೆಯಿಂದಲೇ ಸ್ಮರಿಸಿಕೊಳ್ಳುತ್ತಿರುವುದು ಅವರ ದೊಡ್ಡ ಗುಣ.

ದೆಹಲಿ ಕರ್ನಾಟಕ ಸಂಘದ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ ಹಲವು ಮಹನೀಯರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಆದರೆ, ಮುಂಚೂಣಿಯಲ್ಲಿ ಇರುವವರಿಗೆ ಪೂರಕವಾಗಿ, ಹೆಗಲು ಕೊಡುವ ಕೆಲವು ಮಂದಿ ವಿಶಿಷ್ಟ ಕನ್ನಡಿಗರಲ್ಲಿ ಒಬ್ಬರು ಚೆನ್ನಯ್ಯ ಸಿದ್ದರಾಮಯ್ಯ ಮಠದ. ನನ್ನ ಬದುಕಿನಲ್ಲಿ ಮರೆಯಲಾಗದ ಗೆಳೆಯ.



**ಸರವು ಕೃಷ್ಣ ಭಟ್**

# 'ತಿರುಕರ ಪಿಡುಗು' ನಾಟಕದ ಪ್ರಯೋಗ

**ಬೇಂ**ದ್ರೆ ಅವರು ಬರೆದ 'ತಿರುಕರ ಪಿಡುಗು' ಕನ್ನಡ ನಾಟಕದ ಪ್ರಯೋಗ ಕುರಿತು ರಂಗಕರ್ಮಿಶ್ರೀ ಗುಂಡಣ್ಣ ಚಿಕ್ಕಮಗಳೂರು ಅವರು ಬರೆದಿರುವ ಈ ಲೇಖನವನ್ನು ತಪ್ಪದೆ ಮುಂದೆ ಓದಿ?

ಮಾರ್ಚ್ 04, 2024 ರಂದು ದೆಹಲಿಯ ಲೋಧಿ ಎಸ್ಟೇಟ್ ನಲ್ಲಿರುವ ದೆಹಲಿ ಕನ್ನಡ ಶಾಲೆಯ ಒಂದು ಕೊಠಡಿಯಲ್ಲಿ ಈ ಕನ್ನಡ ನಾಟಕದ ಪ್ರಯೋಗ ನಡೆಯಿತು. ದ.ರಾ. ಬೇಂದ್ರೆ ಅವರ 'ತಿರುಕರ ಪಿಡುಗು', ನಾಟಕದ ಪರಿಚಯ ಮಾಡುತ್ತಾ ನಿರ್ದೇಶಕರು ಮಾಹಿತಿ ನೀಡಿದ ಪ್ರಕಾರ ದ.ರಾ. ಬೇಂದ್ರೆ ಅವರು ಈ ನಾಟಕವನ್ನು ರಚಿಸಿದ್ದು ಬರೋಬ್ಬರಿ ಒಂದು ನೂರು ವರುಷಗಳ ಹಿಂದೆ (1924ರಲ್ಲಿ). ಬೇಂದ್ರೆ ಅವರ 128ನೇ ಜನ್ಮದಿನದ ಕಾರಣಕ್ಕಾಗಿ ಈ ನಾಟಕ, ನಮ್ಮ ವಿಜಯಪುರದ ಒಂದು ಕಾಲದ ಸಕ್ರಿಯ ರಂಗಕಾರ್ಯಕರ್ತ, ಕಳೆದ ಮೂವತ್ತು ವರುಷಗಳಿಂದ ದೆಹಲಿ ವಾಸಿ ನಿರ್ದೇಶಕ ಶ್ರೀ ಶಿವಾನಂದ ಇಂಗಳೇಶ್ವರ ಅವರು ದೆಹಲಿಯಲ್ಲಿನ ಕೇಂದ್ರ ಸರ್ಕಾರಿ ಕಚೇರಿಗಳು ಸರ್ಕಾರ, ದೆಹಲಿ ರಾಜ್ಯ ಸರ್ಕಾರ ಕಚೇರಿಗಳು, ದೆಹಲಿ ಮತ್ತು ಕೇಂದ್ರ ಸರ್ಕಾರಗಳ ಹಲವು ನಿಗಮ ಮತ್ತು ಮಂಡಳಿಗಳಲ್ಲಿ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ದೆಹಲಿ ಕನ್ನಡಿಗರು ಸೇರಿ ಕಟ್ಟಿಕೊಂಡಿರುವಂತಹ ಒಂದು ಕನ್ನಡ ಭಾಷೆಯ ಸಾಂಸ್ಕೃತಿಕ ಚಟುವಟಿಕೆಗಳ ಸಂಸ್ಥೆ ದಿನಕರ (ದಿಲ್ಲಿ ನಗರ ಕನ್ನಡ ಕಲಾವಿದರ ರಂಗ) ಫೌಂಡೇಶನ್ (ರಿ). ಹೆಚ್ಚಿನವರು ಹುಬ್ಬಳ್ಳಿ-ಧಾರವಾಡ, ಹಗರಿಬೊಮ್ಮನಹಳ್ಳಿ, ದಾವಣಗೆರೆ, ವಿಜಯಪುರ, ಕಲಬುರಗಿ ಮುಂತಾದ ಹಲವು ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಜಿಲ್ಲೆಗಳ ಮಂದಿ ಈ ದಿನಕರ ಸಂಸ್ಥೆಯ ಸದಸ್ಯರು; ಕಲೋಪಾಸಕರು. ದಕ್ಷಿಣ ಕನ್ನಡ ಜನ ಕೂಡ ಈ ಸಂಸ್ಥೆಯಲ್ಲಿದ್ದಾರೆ.

ದೆಹಲಿಯ ದೂರ ದೂರದ ಪ್ರದೇಶಗಳಲ್ಲಿ ವಾಸಿಸುವ ಈ ದೆಹಲಿ ಕನ್ನಡಿಗರು, ತಮ್ಮ ಕಚೇರಿಯ ಕೆಲಸ ಕಾರ್ಯಗಳನ್ನು ಮುಗಿಸಿ, 30-40 ಕಿಲೋ ಮೀಟರ್‌ಗಳ ದೂರವನ್ನು ಮೆಟ್ರೋ, ಬಸ್, ಸ್ವಂತ ವಾಹನಗಳಲ್ಲಿ ಪ್ರಯಾಣ ಮಾಡಿ, ನಿರ್ದೇಶಕರ ಶಿಸ್ತಿನ ಕೆಂಗಣ್ಣಿಗೆ ಗುರಿಯಾಗಿ, ಬೈಗುಳ ತಿಂದು, ಅಂತಿಮವಾಗಿ ನಾವೂ ನಾಟಕ ಮಾಡಬೇಕು, ಅಭಿನಯಿಸಬೇಕು ಎನ್ನುವ ಉಮೇದಿನಲ್ಲಿ ತಿಂಗಳಿಗೂ ಹೆಚ್ಚು ದಿನ ತಾಲೀಮು ನಡೆಸಿ, ರಂಗ ಪ್ರದರ್ಶನ ನೀಡುವುದು ಸಣ್ಣ ಮಾತಲ್ಲ. ಅಪಾರ ತಾಳ್ಮೆ, ರಂಗಭೂಮಿ ಹುಚ್ಚು, ಎಲ್ಲವೂ ಮುಖ್ಯ.

ರಂಗಭೂಮಿ, ತನ್ನ ರಂಗ ಚಟುವಟಿಕೆಗಳ ಮುಖಾಂತರ ಸಾಮಾನ್ಯ ಜನರನ್ನು ತಲುಪಬೇಕು, ಎಲ್ಲರನ್ನೂ ಬೆಸೆಯುವ ಸೇತುವೆ ಆಗಬೇಕು ಎನ್ನುವುದು ಒಟ್ಟಾರೆ ರಂಗಭೂಮಿಯ ಆಶಯ. ದೆಹಲಿ ಕನ್ನಡ ಶಾಲೆಯ ಎಸ್.ವಿ. ಕೃಷ್ಣಮೂರ್ತಿ ರಾವ್ ಹೆಸರಿನ ಒಂದು ಪರಿವರ್ತಿತ ಆಪ್ತ ರಂಗಮಂದಿರದಲ್ಲಿ ತಿರುಕರ ಪಿಡುಗು ನಾಟಕ ನೋಡಿದಾಗ ಈ ಮಾತು ನೂರಕ್ಕೆ ನೂರು ಖರೆ ಅನ್ನಿಸಿತು.

ಆಪ್ತ ಸಭಾಂಗಣದಲ್ಲಿ ಹಾಜರಿದ್ದ ಎಪ್ಪತ್ತಕ್ಕೂ ಹೆಚ್ಚು ಪ್ರೇಕ್ಷಕರಿಗೆ, ಎಲ್ಲರಿಗೂ ಬೇಂದ್ರೆ ಅಜ್ಜ ಗೊತ್ತು. ಗೊತ್ತು ಎಂದರೆ ಕೇವಲ ಹೆಸರಿನ ಪರಿಚಯ ಅಲ್ಲ, ಬಾರೋ ಸಾಧನ ಕೇರಿಗೆ ಎನ್ನುವ ಜನಮನದ ಹಾಡನ್ನು ಯಾರ ಒತ್ತಾಯಕ್ಕೂ ಒಳಗಾಗದೆ ಸುಶ್ರಾವ್ಯವಾಗಿ ಹಾಡಿ, ನಂತರ ನಡೆದ ಪ್ರಯೋಗದ ಬಗ್ಗೆ ಸಂವಾದ ಮಾಡಿದವರು ಒಬ್ಬರಾದರೆ, ಬೇಂದ್ರೆ ಯಾವ ಕಾಲಕ್ಕೆ ಯಾವ ನಾಟಕಗಳನ್ನು ರಚನೆ ಮಾಡಿದರು ಎನ್ನುವ ಮಾಹಿತಿ ನೀಡಿದವರು ಮತ್ತೊಬ್ಬರು. ಈ ನಾಟಕಕ್ಕೆ ಪ್ರೇರಣೆ ಅವರದೇ ಮತ್ತೊಂದು ನಾಟಕ 'ಜಾತ್ರೆ' ಇರಬಹುದು ಎಂದು ಮತ್ತೊಬ್ಬರು ಮಾತನಾಡಿದರೆ, ಕುರುಡು ಕಾಂಚಾಣದ ಸಾರವೇ ಈ ನಾಟಕ ಎಂದು ವ್ಯಾಖ್ಯಾನಿಸಿದವರು ಮತ್ತೊಬ್ಬರು. ನಾಟಕಗಳಲ್ಲಿ ಬರುವ ಬುಡುಬುಡಿಕೆ ದಾಸಯ್ಯ, ಜೋಗಮ್ಮ, ಗೊಲ್ಲರಾಕೆ, ದಾಸರು ಮುಂತಾದ ಜನಾಂಗದವರು ನಾವು ಸಣ್ಣವರಿದ್ದಾಗ ನಮ್ಮ ಮನೆಗಳಿಗೆ ಬಂದು ನಾವು ಕೊಟ್ಟಿದ್ದನ್ನು ಪಡೆದುಕೊಂಡು ಹೋಗುತಿದ್ದರು; ಅಂತಹವರನೆಲ್ಲಾ ಮತ್ತೆ ನೆನಪಿಸಿದ್ದಕ್ಕೆ ಧನ್ಯವಾದಗಳು ಎಂದು ಹೇಳಿ ಧನ್ಯತಾ ಭಾವದಿಂದ ಭಾವಾವೇಶಕ್ಕೆ ಒಳಗಾದವರು ಮತ್ತೊಬ್ಬರು.

ಬೇಡುವುದು-ನೀಡುವುದು ಇವೆರಡೂ theory of economics-ಎಂದು ಅರ್ಥಶಾಸ್ತ್ರದ ಪಾಠ ಹೇಳಿ, ಇಡೀ ನಾಟಕವನ್ನು ವಿಭಿನ್ನ ಆಯಾಮದಿಂದ ಅರ್ಥೈಸಿದವರು ಮಗದೊಬ್ಬರು.

ಕೊನೆಗೆ ಇಂತಹ ನೋಡುಗರ ಮಧ್ಯೆ ಇದ್ದ ನನಗೆ ಅನ್ನಿಸಿದ್ದು, ನಿರ್ದೇಶಕರು ಯಾಕೆ ಸಂವಾದ ಕಾರ್ಯಕ್ರಮ ಇಟ್ಟರು? ಎಂದು. ಇದು ಖಂಡಿತ ಕಾಟಾಚಾರದ ಸಂವಾದವಾಗಿರದೆ, ಅತ್ಯಂತ ಆತ್ಮೀಯ, ಗಂಭೀರ ಹಾಗೂ ಜೀವಂತ ಸಂವಾದ ಕಾರ್ಯಕ್ರಮವಾಗಿತ್ತು.

ಬೇಂದ್ರೆ ಬರೆದ ನಾಟಕದ ಸತ್ವಕ್ಕಿಂತ, ಬೇಂದ್ರೆ ಬೊಕ್ಕತಲೆಗೆ ಕೈಹಾಕಿ, ಕೆರೆದು, ಅವರಿಗೆ ಅವರ ನಾಟಕವನ್ನು ಅರ್ಥೈಸುವ ಪ್ರಯತ್ನಕ್ಕೆ ಒಂದೇ ಒಂದು ಹೆಜ್ಜೆ ಹಿಂದೆ ಇದ್ದರು ಪ್ರೇಕ್ಷಕ ಮಹಾಶಯರು. ನಾಟಕದ ಹೆಸರೇ ಸೂಚಿಸುವ ಹಾಗೆ, ಒಬ್ಬ ಸಭ್ಯ, ತನ್ನ ಮನೆಯೊಡತಿಯ ಅತಿ ಶಿಸ್ತಿನ ಶಿಸ್ತಿಗೆ ತನಗಿಷ್ಟವಿಲ್ಲದಿದ್ದರೂ, ಮನೆಯೊಡತಿಯ ಪ್ರೀತಿ ಮತ್ತು ಹೆದರಿಕೆಗೆ ಒಳಗಾಗಿ ಅವಳ ಶಿಸ್ತನ್ನು ಪಾಲಿಸುವ ಸಭ್ಯ ಗಂಡ. ದೈನಂದಿನ ದಿನಚರಿಯನ್ನು ಅವಳು ಬರೆದಿರುವ ಹಾಗೆ ಸೂಚಿಸಿದ ಸಮಯಕ್ಕೆ ಮಾಡಿ ಮುಗಿಸುವ ಹಪಾಹಪಿಯಲ್ಲಿರುವ ಮನೆಯೊಡೆಯ. ಹಾಗೇ ಮಾಡುವಾಗ ಅವನ ಶಿಸ್ತನ್ನು ಭಂಗ ಮಾಡಲು ಬರುವ ಹಲವು ತಿರುಕರೇ ನಾಟಕದ ಜೀವಾಳ. ತಿರುಪೆ ಬೇಡಲು ಬಂದು ಮನೆ ಬಾಗಿಲಲ್ಲಿ ನಿಂತವರಿಗೆ, ಈ ಮನೆಯೊಡೆಯ ಅವರವರ ವರ್ತನೆಗಳ ಮುಖಾಂತರ ಅವರನ್ನು ಹಂಗಿಸಿ, ಹೀಯಾಳಿಸಿ, ಒಂದು ಕಾಸನ್ನೂ ಕೊಡದೆ ತಿರುಗಿ ಕಳುಹಿಸುವ ಧೀರ ಈ ಮನೆಯೊಡೆಯ. ಹೆಂಗಸರು ಬಂದಾಗ, ಅವರ ವರ್ತನೆ ಜೊತೆಗೆ ಅವರ ದೈಹಿಕ ಸೌಂದರ್ಯವನ್ನೂ ಹೀಯಾಳಿಸಿ ಅಪಮಾನಗೊಳಿಸುವ ವೀರ ನಮ್ಮ ಮನೆಯೊಡೆಯ. ಕೊನೆಗೂ ಯಾರಿಗೂ ತಿರುಪೆ ನೀಡದೆ, ಅಂದಿನ ಕಾರ್ಯಚಟುವಟಿಕೆಗಳನ್ನು ಮುಗಿಸಿ, ತಾನು ಊಟಕ್ಕೆ ಒಳಗೆ ಹೋಗುವುದರಲ್ಲಿ ನಾಟಕ ಕೊನೆಯಾಗುತ್ತದೆ.

ಇದು ಒಂದು ಏಕಾಂಕ ನಾಟಕ; Drawing room comedy; ಬಹಳ ಸರಳ ರಂಗಸಜ್ಜಿಕೆಯ, ಅರ್ಥಗರ್ಭಿತ ನಾಟಕ; ವಸ್ತ್ರವಿನ್ಯಾಸ ಮತ್ತು ಪ್ರಸಾಧನ ಹೊರತು ಪಡಿಸಿ ಮತ್ತೇನನ್ನೂ ಬೇಡದ ಒಂದು ಏಕಾಂಕ.ಅಭಿನಯವೇ ಮೂಲದ್ರವ್ಯವಾಗಿರುವ ಈ ನಾಟಕಕ್ಕೆ, ದೆಹಲಿಯ ಹೊರನಾಡ ಕನ್ನಡಿಗ ಕಲಾವಿದರು ಬಹಳ ಉತ್ತಮ ಪ್ರದರ್ಶನ ನೀಡಿದರು. ರಂಗಭೂಮಿ ಮತ್ತು ಅಭಿನಯದಲ್ಲಿ ಇವರಿಗೆ ಹೇಳಿಕೊಳ್ಳುವ ಸಾಧನೆ ಇಲ್ಲದಿದ್ದರೂ ಸಹ, ಯಾವುದೇ ಭಿಡೆ ಇಲ್ಲದೆ ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ಅಭಿನಯಿಸಿ, ತಾವು ಮಾಡಿದ ಪಾತ್ರಕ್ಕೆ ನ್ಯಾಯ ಒದಗಿಸಿದ ನಾಟಕದ ಎಲ್ಲ ಕಲಾವಿದರೂ ಅಭಿನಂದನಾರ್ಹರು. ಅದರಲ್ಲೂ ತುಂಬಾ ಚಪ್ಪಾಳೆ ಗಿಟ್ಟಿಸಿ, ಬೇರೆಯವರಿಗಿಂತ ಒಂದು ಗುಲಗಂಜಿ ತೂಕದಷ್ಟು ಉತ್ತಮ ಅಭಿನಯ ನೀಡಿದವರು ಬುಡುಬುಡಿಕೆಯವ (ಶ್ರೀಹರಿ ಶೇಖರ್)

ಮುಖ್ಯ ಪಾತ್ರಧಾರಿ ಮಿಸ್ಟರ್ ನಾಯಕ (ಶ್ರೀ ಸಂತೋಷ ಉಪಾಧ್ಯಾಯ), ಜೋಗಮ್ಮ(ಶ್ರೀಮತಿ ಮಂಜುಳಾ ನಾಗರಾಜ್), ಗೊಲ್ಲರಾಕೆ (ಶ್ರೀಮತಿ ಆಶಾಲತಾ ಎಂ), ಆಚಾರ್ಯರು (ಶ್ರೀ ನಾರಾಯಣ ಬಿ) ಜೋಶಿಗ (ಶ್ರೀ ವೈ.ಎಂ. ಹರೀಶ್) ಮತ್ತು ಸೂತ್ರದಾರ (ಶ್ರೀ ಡಿ. ಧರ್ಮರಾಜ ರಂಗಪುರಿ) ಮನೋಜ್ಞ ಅಭಿನಯ ನೀಡಿದರು.

ಎಲ್ಲಾ ಪಾತ್ರಗಳಿಗೂ ಜೀವಕಳೆ ತುಂಬಿದ ವಸ್ತ್ರಾಲಂಕಾರ ಮಾಡಿದ ಕಲಾವಿದರು, ಪ್ರಸಾದನ ಕಲಾವಿದರಾದ ಶ್ರೀ ಶಶಿಕಾಂತ ಪಾಟೀಲ, ರಂಗ ಸಜ್ಜಿಕೆ ಮಾಡಿದ ಶ್ರೀ ಹರಿಪ್ರಿಯಾ ಎಸ್. ಇವರುಗಳು ವಿಶೇಷ ಅಭಿನಂದನೆಗೆ ಅರ್ಹರು.

ಸುಮ್ಮನೆ ಟೈಮ್ ಪಾಸ್‌ಗಾಗಿ ನಾಟಕ ನೋಡಲು ಹೋದ ನನಗೆ, ಗಂಭೀರ ಪ್ರಸ್ತುತಿ ನೋಡಿದ ಗಾಢ ಅನುಭವ ನೀಡಿತು ಈ ಪ್ರಯೋಗ; ಅಷ್ಟೇ ಅಲ್ಲ, ಈ ನಾಟಕ ಪ್ರಸ್ತುತಿ ಕುರಿತು ಇಂತಹ ಒಂದು ದೀರ್ಘ ಲೇಖನ ಬರೆಯಲು ಉತ್ಸಾಹ ತುಂಬಿದ ನಾಟಕದ ಪ್ರಯೋಗ, ಪ್ರಯೋಗದ ನಂತರ ಸಂವಾದ ಕಾರ್ಯಕ್ರಮದಲ್ಲಿ ಅಕಾಡೆಮಿಕ್ ಆಗಿ ಭಾಗವಹಿಸಿ, ಇಡೀ ರಂಗ ಮಂದಿರವನ್ನೇ ಗಂಭೀರ ಸ್ವರೂಪಕ್ಕೆ ಕರೆದೊಯ್ದ ಪ್ರೇಕ್ಷಕ ಮಹಾಶಯರು ನಿಜಕ್ಕೂ ಅಭಿನಂದನಾರ್ಹರು.

ಶ್ರೀ ಶಿವಾನಂದ ಇಂಗಳೇಶ್ವರ ಅವರಿಗೆ ದೆಹಲಿಗೂ, ತಮ್ಮ ಮೂಲ ವಿಜಯಪುರಕ್ಕೂ ವ್ಯತ್ಯಾಸವೇ ಕಾಣುತ್ತಿಲ್ಲ. ಸುಮಾರು ನಲವತ್ತು ವರುಷಗಳ ಹಿಂದೆ ಬಿಜಾಪುರದಾಗ ಏನು ರಂಗಶ್ರಮ ಮಾಡುತ್ತಿದ್ದರೋ, ಅದೇ ಶಿಸ್ತಿನ ಶ್ರಮವನ್ನು ಹಾಕಿ ದಿನಕರ ರಂಗ ಸಂಸ್ಥೆ ಪ್ರಾರಂಭಿಸಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಮಹಾನ್ ನಾಟಕಗಳನ್ನು ದೆಹಲಿ ಕನ್ನಡಿಗರನ್ನೇ ಇಟ್ಟುಕೊಂಡು ದೆಹಲಿಯಲ್ಲಿ ನಿರಂತರ ಚಟುವಟಿಕೆ ನಡೆಸಿದ್ದಾರೆ. ಕೊರೊನಾ ದುರಿತ ಮಾಹಾಮಾರಿ ಕಾಲದಲ್ಲೂ, ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಪರಿಚಯಿಸುವ ಐವತ್ತಕ್ಕೂ ಹೆಚ್ಚು ಆನ್‌ಲೈನ್ ಕಾರ್ಯಕ್ರಮಗಳನ್ನು ಮಾಡಿ, ಯು-ಟ್ಯೂಬ್‌ನಲ್ಲಿ ಪರಿಚಯಿಸಿದ್ದಾರೆ.

ಸಕ್ರಿಯ ರಂಗಕರ್ಮಿಗೆ ಹಳ್ಳಿಯೂ ಒಂದೇ, ದಿಲ್ಲಿಯೂ ಒಂದೇ ಎನ್ನುವ ಹಾಗೆ ಬಿಡುವಿಲ್ಲದ, ದಣಿವರಿಯದ ನಿರಂತರ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಇವರಿಗೆ, ಕರ್ನಾಟಕದ ಮತ್ತು ಕನ್ನಡ ರಂಗಭೂಮಿಯ ನಾವೆಲ್ಲರೂ ಅಭಿನಂದನೆಗಳನ್ನು ಹೇಳಲೇಬೇಕು. ಇಂತಹ ಹೊರನಾಡ ಕನ್ನಡಿಗರ ಪ್ರತಿಭೆಗಳನ್ನು ಗುರುತಿಸಿ, ಬೆಂಗಳೂರಿನಲ್ಲಿ ಪ್ರದರ್ಶನ ಏರ್ಪಾಡು ಮಾಡಿ, ಅವರ ದಣಿವನ್ನು ನೀಗಿಸಿ, ಬೆನ್ನು ತಟ್ಟಿದರೆ, ಇನ್ನಷ್ಟು ವರುಷಗಳ ಕಾಲ ಕನ್ನಡ ರಂಗಭೂಮಿ ಚಟುವಟಿಕೆಗಳನ್ನು ಮುಂದುವರೆಸಲು ಅವರಿಗೆ ಪ್ರೋತ್ಸಾಹ ಮತ್ತು ಶಕ್ತಿ ನೀಡಿದ ಹಾಗೆ ಆಗುತ್ತದೆ.

ಇವೆಲ್ಲವನ್ನೂ ಆಗು ಮಾಡಲು, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರೋತ್ಸಾಹ ನೀಡಲು ಗಟ್ಟಿಯಾದ ಸಹಕಾರ ನೀಡುತ್ತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗದವರನ್ನು ನಾವು ಕೃತಜ್ಞತಾ ಭಾವದಿಂದ ನೆನಪಿಸಿಕೊಂಡು, ಧನ್ಯವಾದಗಳನ್ನು ಅರ್ಪಿಸಲೇಬೇಕು.

***ಗುಂಡಣ್ಣ ಚಿಕ್ಕಮಗಳೂರು***
ನವದೆಹಲಿ

# ಬೇಂದ್ರೆಯವರಿಗೆ ದಿನಕರದ ರಂಗ ನಮನ



ಮೇರು ಸಾಹಿತಿ ಡಾ. ದ.ರಾ. ಬೇಂದ್ರೆಯವರ ಮಹತ್ವದ ನಾಟಕ 'ತಿರುಕರ ಪಿಡುಗು' ಈಚೆಗೆ ದೆಹಲಿಯಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಂಡು ಮೆಚ್ಚುಗೆ ಗಳಿಸಿದೆ. ಗಾತ್ರದಲ್ಲಿ ಕಿರಿದಾದ ಇಪ್ಪತ್ತಮೂರು ಪುಟಗಳ ಈ ಏಕಾಂಕ ನಾಟಕ ಕಲಾ ರಸಿಕರನ್ನು ಚಿಂತನೆಗೆ ಹಚ್ಚುತ್ತದೆ. ವರ್ಷ 1924ರಲ್ಲಿ ಪ್ರಕಟಗೊಂಡಿದ್ದ ನಾಟಕವೊಂದು ಸರಿಯಾಗಿ ನೂರು ವರ್ಷಗಳ ಬಳಿಕ ರಾಷ್ಟ್ರ ರಾಜಧಾನಿಯಲ್ಲಿ ಪ್ರದರ್ಶನಗೊಂಡಿದ್ದು ಐತಿಹಾಸಿಕ ಮತ್ತು ಉಲ್ಲೇಖನೀಯ. ಬೇಂದ್ರೆಯವರ ಜನ್ಮದಿನದ ಸಂದರ್ಭದಲ್ಲಿಯೇ ದೆಹಲಿಯ ದಿನಕರ ರಂಗ ತಂಡ ಇದನ್ನು ಪ್ರದರ್ಶಿಸಿ ಬೇಂದ್ರೆಯವರಿಗೆ ಅರ್ಥಪೂರ್ಣವಾಗಿ ರಂಗ ನಮನ ಸಲ್ಲಿಸಿದೆ. ಇದಕ್ಕಾಗಿ ರಂಗ ನಿರ್ದೇಶಕ ಶ್ರೀ ಶಿವಾನಂದ ಇಂಗಳೇಶ್ವರ ಮತ್ತು ದಿನಕರದ ಕಲಾವಿದರು ಅಭಿನಂದನಾರ್ಹರು.

ಬೇಂದ್ರೆಯವರ 'ತಿರುಕರ ಪಿಡುಗು' ನಾಟಕದಲ್ಲಿ ಕತೆಯಿಲ್ಲ. ನಾಟಕೀಯ ತಿರುವುಗಳಿಲ್ಲ. ಆದರೂ ಭಿಕ್ಷಾಟನೆಯೆಂಬ ಸಾಮಾಜಿಕ ಸಮಸ್ಯೆಯನ್ನು ಪ್ರಹಸನದ ಮೂಲಕ ನೀಡಿ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುತ್ತಾರೆ.

ಮಿಸ್ಟರ್ ನಾಯಕ ಎಂಬ ಶ್ರೀಮಂತ ಇಲ್ಲಿ ಮುಖ್ಯ ಪಾತ್ರಧಾರಿ. ವೇಳಾಪಟ್ಟಿಯ ಮೂಲಕ ಬದುಕುವ ನಾಯಕನಿಗೆ ನಡು ನಡುವೆ ತಿರುಕರು ಬಂದು ಆತನ ದಿನಚರಿಗೆ ಅಡ್ಡಿಪಡಿಸುತ್ತಾರೆ.

'ಉದರ ನಿಮಿತ್ತಮಂ ಬಹುಕೃತ ವೇಷಂ' ಎಂಬಂತೆ ಸಮಾಜದಲ್ಲಿ ಬರುವ ತಿರುಕರ ಪಾತ್ರಗಳಾದ ದಾಸ, ಆಚಾರ್ಯ, ಜೋಗಮ್ಮ, ಬುಡುಬುಡಕೆಯವ, ಗೊಲ್ಲರಾಕೆ ಇತ್ಯಾದಿ ವಿವಿಧ ಮುಖಗಳು ಇಲ್ಲಿ ಅನಾವರಣಗೊಳ್ಳುತ್ತದೆ. ಇವರೆಡೆಗೆ ನಾಯಕ ತೋರುವ ತಿರಸ್ಕಾರ ನಗೆಯ ಅಲೆಯೆಬ್ಬಿಸಿ ಗಂಭೀರ ಚಿಂತನೆಗೆ ಹಚ್ಚುತ್ತದೆ. ದಾನದಿಂದ ಜನರು ಬಡವರಾಗಿಯೇ ಉಳಿಯುತ್ತಾರೆ, ದುಡಿತದಿಂದ ಜನರ ಏಳಿಗೆಯಾಗಿ ದೇಶದ ಉನ್ನತಿಯಾಗುತ್ತದೆ ಎಂಬ ವೈಚಾರಿಕ ಸಂದೇಶವನ್ನು ಈ ನಾಟಕ ನೀಡುತ್ತದೆ.

ಭಾರತೀಯ ಸಮಾಜದಲ್ಲಿ ಭಿಕ್ಷಾ ಸಂಸ್ಕೃತಿ ಹಿಂದೆಯೂ ಇತ್ತು. ಈಗಲೂ ಇದೆ. ಆದರೆ ಭಿಕ್ಷಾಟನೆಯ ನಾನಾ ಮುಖಗಳಲ್ಲಿ ಈಗ ಕೆಲವು ಕಣ್ಮರೆಯಾಗಿದೆ. ಈ ತಲೆಮಾರಿಗೆ ನಮ್ಮ ಅನಾದಿ ಕಾಲದ ಸಂಸ್ಕೃತಿಯನ್ನು ಪರಿಚಯಿಸಲು ಈ ನಾಟಕ ಸಹಕಾರಿ. ಮುಖ್ಯವಾಗಿ ಮಹಾನಗರಗಳಲ್ಲಿ ಇದು ಪ್ರದರ್ಶನಗೊಳ್ಳಬೇಕು. ಬೀದಿ ನಾಟಕವಾಗಿಯೂ ಇದನ್ನು ಪ್ರದರ್ಶಿಸಬಹುದು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಎಸ್.ವಿ. ಕೃಷ್ಣಮೂರ್ತಿ ರಾವ್ ಸಭಾಂಗಣದಲ್ಲಿ ಮೂಡಿ ಬಂದ 'ತಿರುಕರ ಪಿಡುಗು' ಶಿವಾನಂದ ಇಂಗಳೇಶ್ವರ ಅವರ ದಕ್ಷ ರಂಗ ನಿರ್ದೇಶನಕ್ಕೆ ಸಾಕ್ಷಿ. ಇಲ್ಲಿನ ಕಲಾವಿದರ ಸಹಜ ಅಭಿನಯ, ಶಶಿಕಾಂತ ಪಾಟೀಲರ ಪ್ರಸಾಧನ, ಎಸ್. ಕುಮಾರ್ ಅವರ ಸಂಗೀತ ಮತ್ತು ಹರಿಪ್ರಿಯ ಎಸ್ ಅವರ ರಂಗ ಸಜ್ಜಿಕೆಯಲ್ಲಿ ಮೂಡಿ ಬಂದ ಈ ನಾಟಕ ದಿನಕರದ ಮತ್ತೊಂದು ಸಾರ್ಥಕ ರಂಗ ಪ್ರಯೋಗ.

***ಡಾ. ಅವನೀಂದ್ರನಾಥ್ ರಾವ್***


**Statement of Ownership and other Particulars about**

**Delhi Karnataka Sangha's ABHIMATA**

**FORM-IV (See Rule 8)**

| | |
|---|---|
| **Place of Publication** | : Delhi Karnataka Sangha, New Delhi |
| **Periodicity of Pub** | : Monthly |
| **Printers Name** | : M/s Saujanya Printing Press, B-303, Okhla Industrial Area, Phase-I, New Delhi-110020 |
| **Publishers Name** | : Radhakrishna |
| **Nationality** | : Indian |
| **Address** | : Delhi Karnataka Sangha Rao Tularam Marg, Sector-12, R.K. Puram, New Delhi - 110022 |
| **Editor's Name** | : K.Sreenivasa Murthy |
| **Nationality** | : Indian |
| **Address** | : As Above |
| **Name & Address** of Individual who own the News Paper | : Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, **Radhakrishna,** hereby declare that the particulars given above are true to the best of my knowledge and belief.

**09.04.2024**
**New Delhi**

**Sd\-**
**Publisher**



ಉಪಾಧ್ಯಾಯ'ಸ್ ಚಂದನ

**ನವದೆಹಲಿ ಕರ್ನಾಟಕ ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ–**

ಕುಂದಾಪುರ ತಾಲೂಕು ಆನೆಗುಡ್ಡೆ ಉಪಾಧ್ಯಾಯ ಇಂಡಸ್ಟ್ರೀಸ್ ಇವರ "ಚಂದನ" ಬ್ರಾಂಡ್ ಹೆಸರಿನ ಸುಪ್ರಸಿದ್ಧ ಉತ್ಪನ್ನ ನಿಮ್ಮ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದೇವೆ.

**ಚಂದನ ಬ್ರಾಂಡ್ ಹೆಸರಿನಲ್ಲಿ ಸಾರಿನ ಪುಡಿ, ಪುಳಿಯೋಗರೆ ಪುಡಿ, ಬಿಸಿಬೇಳೆಬಾತ್ ಪುಡಿ ಅಲ್ಲದೆ ನಿಮಗೆ ಬೇಕಾದ ಇನ್ನೂ ಹತ್ತಾರು ಬಗೆಯ ಪುಡಿಗಳು ಹಾಗೂ ಎಲ್ಲಾ ಬಗೆಯ ಹಪ್ಪಳ, ಸಂಡಿಗೆ, ಅಪ್ಪೆ ಮಿಡಿ ಅಲ್ಲದೆ ಇತರೆ ಉಪ್ಪಿನಕಾಯಿ ದೊರೆಯುತ್ತದೆ.**

ನಿಮಗೆ ನಮ್ಮ ಎಲ್ಲ ಉತ್ಪನ್ನಗಳ ವಿವರ, ಬೆಲೆ, ಕೆಟಲಾಗ್ ಬೇಕಾದಲ್ಲಿ, ನಿಮ್ಮ ಹೆಸರು, ವಾಟ್ಸಪ್ಪ್ ನಂಬರ್ ನಮಗೆ ತಿಳಿಸಿದರೆ ಕೂಡಲೇ ನಿಮ್ಮ ವಾಟ್ಸಪ್ಪ್‌ಗೆ ಎಲ್ಲಾ ವಿವರ ಕಳಿಸುತ್ತೇವೆ.

ನಿಮಗೆ ಬೇಕಾದ ಐಟಂ ಸ್ಪೀಡ್ ಪೋಸ್ಟ್ ಮೂಲಕ ಕಳಿಸುತ್ತೇವೆ.

ನಿಮಗೆ ಐಟಂ ತಲುಪಿದ ನಂತರ ಹಣ ಕಳಿಸಿದರೆ ಸಾಕು.

ನಿಮ್ಮ ಆರ್ಡರ್ ಮತ್ತು ವಿವರಕ್ಕೆ ಸಂಪರ್ಕಿಸಿ :
ಪತ್ರಕರ್ತ **ನಾಗೇಶ ಚಡಗ**
ವಾಟ್ಸಪ್ಪ್ : 9844746851
ಮೊಬೈಲ್ : 9844966864 / 9844746851
ವಂದನೆಗಳು.

**ಆನೆಗುಡ್ಡೆ ಉಪಾಧ್ಯಾಯ ಇಂಡಸ್ಟ್ರೀಸ್**
ಕುಂಭಾಸಿ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.
ಕರ್ನಾಟಕ 576257

**ಗಮನಿಸಿ : ದೆಹಲಿಯಲ್ಲಿ ಮಾರ್ಕೆಟಿಂಗ್ ಪ್ರತಿನಿಧಿಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಲು ಕೋರಲಾಗಿದೆ.**

# ದೇವಭೂಮಿಯ ಪರ್ಯಟನೆ



ನಾಲ್ಕಾರು ದಿನ ಬಿಡುವು ಇದ್ದ ಕಾರಣ ಹಾಗೆ ಸುಮ್ಮನೆ ಉತ್ತರಾಖಂಡ ಸುತ್ತಿಬರೋಣ ಅಂತ ಹೊರಟೆವು. ಈ ಹಿಂದೆ ಗಡವಾಲ ಪ್ರಾಂತದ ಕೆಲವು ಊರುಗಳ (ನೈನಿತಾಲ್, ಹರಿದ್ವಾರ, ರಿಷಿಕೇಶ, ದೇವಪ್ರಯಾಗ, ಡೆಹ್ರಾಡೂನ್ ಇತ್ಯಾದಿ) ಪರ್ಯಟನೆ ಮಾಡಿದ್ದರೂ ಸಹ ಕುಮಾಂವ್ ಪ್ರಾಂತದ ಪರಿಚಯ ನಮಗೆ ಆಗಿರಲಿಲ್ಲ.

ಕೆಲವು ದಿನಗಳ ಹಿಂದಷ್ಟೇ ಸ್ನೇಹಿತ ರಾಮಸಿಂಹ ಅವರೊಂದಿಗೆ ಮಾತನಾಡುತ್ತಾ ಮಾಯಾವತಿ ಅದ್ವೈತ ಆಶ್ರಮದ ಬಗ್ಗೆ ತಿಳಿದು ಬಂದಿತ್ತು. ಅವರ ಸಹಾಯದಿಂದ ಗೆಸ್ಟ್ ಹೌಸ್ ಕಾಯ್ದಿರಿಸಿಕೊಂಡು ಅಲ್ಲಿಗೆ ಹೋಗುವ ತಯಾರಿ ನಡೆಸಿದೆವು. ಅಲ್ಲದೆ ಗೂಗಲ್ ಸಹಾಯದಿಂದ ಅದರ ಸುತ್ತಮುತ್ತಲಿನ ಕೆಲವು ಊರುಗಳನ್ನು ನೋಡುವ ತಯಾರಿ ಸಹ ಮಾಡಿಕೊಂಡೆವು.

ಡ್ರೈವ್ ಮಾಡೋದು ಗಿರೀಶ್‌ಗೆ ಆಪ್ಯಾಯ. ಮಾರ್ಚ 21ರ ಬೆಳಗಿನ ಜಾವ ನಮ್ಮ ಉತ್ತರಾಖಂಡ ಕುಮಾಂವ್ ಪರ್ಯಟನೆ ಆರಂಭವಾಯ್ತು. ದೆಹಲಿಯಿಂದ ಹೊರಟಾಗ ತುಂತುರು ಮಳೆ ಶುರುವಾಗಿತ್ತು. ಸ್ವಲ್ಪ ಮುಂದೆ ಹೋಗುವಷ್ಟರಲ್ಲಿ ಮಳೆರಾಯನ ಆರ್ಭಟ ಜೋರಾಗಿ ಕಾರಿನ ಗತಿ ನಿಧಾನವಾಯಿತು. ಮಾರ್ಗ ಮಧ್ಯೆ ಮನೆಯಿಂದ ತಂದ ಊಟ ಉಪಹಾರ ಕಳೆದಿತ್ತು. ಮಧ್ಯಾಹ್ನ ಸುಮಾರು ಮೂರು ಗಂಟೆಯ ಹೊತ್ತಿಗೆ ಟನಕಪುರ ತಲುಪಿದ್ದೆವು.

ಇಲ್ಲೇ ನಮ್ಮ ಉತ್ತರಾಖಂಡ ಪ್ರವೇಶ. ಟನಕಪುರ ಕುಮಾಂವ್ ಹಿಮಾಲಯ ಪ್ರಾಂತ್ಯದ ಹೆಬ್ಬಾಗಿಲು ಎಂದೇ ಕರೆಸಿಕೊಂಡಿದೆ. ಅಲ್ಲಿಂದ ಮುಂದೆ ಪ್ರಯಾಣ ಕಡಿದಾದ ಗುಡ್ಡಗಾಡು ರಸ್ತೆಯಲ್ಲಿ ಸಾಗುತ್ತದೆ. ದಾರಿ ಸುಗಮವಾಗಿತ್ತು. ಆ ದುರ್ಗಮ ಪ್ರದೇಶದಲ್ಲಿ ಇಂಥ ರಸ್ತೆ ನಿರ್ಮಿಸಿದ ಮಾನವನ ಬುದ್ಧಿಮತ್ತೆಗೆ ತಲೆ ಬಾಗಲೇಬೇಕು. ಹಿಮಾಲಯದ ಘಟ್ಟಗಳಲ್ಲಿ ಸಾಗುವಾಗ ಕಣ್ಣುಗಳಿಗೆ ಮನಸ್ಸಿಗೆ ಅವರ್ಣನೀಯ. ಪ್ರಕೃತಿಯ ಸೌಂದರ್ಯ ಒಂದೆಡೆಯಾದರೆ ಇನ್ನೊಂದೆಡೆ ಸಾಲು ಗಿರಿಕಂದಕಗಳ ರೌದ್ರ. ಎಲ್ಲವನ್ನೂ ಆಸ್ವಾದಿಸುತ್ತಾ ಪಯಣ ಸಾಗುತ್ತಿತ್ತು. ಮಾರ್ಗಮಧ್ಯೆ ಜೋಶಿ ಚಾಯ್ ವಾಲಾ ಬಳಿ ನಿಂತು ವಿರಮಿಸಿ. ಕಟ್ಟಿಗೆ ಒಲೆಯ ಮೇಲೆ ಮಾಡಿದ ಘಮಘಮಿಸುವ ಚಹಾ ಕುಡಿದು ಹೊರಟೆವು. ಅಲ್ಲಿಂದ ಮುಂದೆ ಸೀದಾ ಮಾಯಾವತಿಗೆ ಪ್ರಯಾಣ ವಿರಾಮ ಎಂದು ನಿರ್ಧರಿಸಿ ಸಾಗಿದೆವು. ಮಳೆರಾಯ ಅಲ್ಲಲ್ಲಿ ಎದುರಾಗಿ ನಿಧಾನ ಗತಿಯಲ್ಲಿ ಆಶ್ರಮ ತಲುಪಿದೆವು.

ಮಾಯಾವತಿ ಅದ್ವೈತ ಆಶ್ರಮವನ್ನು ಸ್ವಾಮಿ ವಿವೇಕಾನಂದರ ಭಕ್ತರಾದ ಬ್ರಿಟನ್‌ನ ಕ್ಯಾಪ್ಟನ್ ಜೇಮ್ಸ್ ಹೆನ್ರಿ ಮತ್ತು ಶೆರ್ಲೋಟಾ ಎಲಿಸೆಬತ್ 1899 ರಲ್ಲಿ ಸ್ಥಾಪಿಸಿದ್ದರು. ನಂತರ ಸ್ವಾಮೀಜಿ ಅವರು 1901 ರಲ್ಲಿ ಆಶ್ರಮಕ್ಕೆ ಭೇಟಿ ನೀಡಿ ಕೆಲವು ದಿನ ಅಲ್ಲಿಯೇ ಧ್ಯಾನಾಸಕ್ತರಾಗಿದ್ದರಂತೆ. ಈಗ ಆಶ್ರಮವು ಶ್ರೀ ರಾಮಕೃಷ್ಣ ಮಿಷನ್‌ನ ಒಂದು ಅಂಗವಾಗಿದೆ. ಉತ್ತರಾಖಂಡದ ಚಂಪಾವತ್ ಜಿಲ್ಲೆಯ ಲೋಹಾಘಾಟ್ ಮುಖ್ಯರಸ್ತೆ ಇಂದ ಕೇವಲ 8 ಕಿ. ಮೀ. ಮೊದಲೇ ಗೆಸ್ಟ್ ಹೌಸ್ ಕಾಯ್ದಿರಿಸಿದ್ದರಿಂದ ಯಾವುದೇ ಸಮಸ್ಯೆ ಇರಲಿಲ್ಲ. ಆದರೆ ಅಷ್ಟರಲ್ಲಾಗಲೇ ಪೂರ್ತಿ ಕತ್ತಲಾಗಿತ್ತು. ಗುಡ್ಡದ ಮಧ್ಯೆ ಕಾಡುರಸ್ತೆ ನಿರ್ಜನವಾಗಿತ್ತು. ಕೊರೆಯುವ ಚಳಿ ಜಿಯ್ಯುಗುಡುವ ದಾರಿ ಸ್ವಲ್ಪ ಭಯ ಆವರಿಸಿತ್ತು. ಮುಂದೆ ಅನತಿ ದೂರದಲ್ಲಿ ಆಶ್ರಮದ ಮಿಣುಕು ದೀಪಗಳನ್ನು ಕಂಡಮೇಲೆ ಧೈರ್ಯಮೂಡಿತ್ತು.

Booking formalities ಮುಗಿಸಿ ಗೆಸ್ಟ್ ಹೌಸ್‌ಗೆ ಹೋಗಿ ಫ್ರೆಶ್ ಆಗಿ ಪುನಃ ಆಶ್ರಮಕ್ಕೆ ಹೊರಟೆವು. ಅಲ್ಲಿ ಬಿಸಿ ಬಿಸಿ ರುಚಿಯಾದ ಸಾತ್ವಿಕ ಊಟ ಹಿತವಾಗಿತ್ತು. ಊಟದ ನಂತರ ಆಶ್ರಮದ ಗೋಶಾಲೆಯ ಹಸುವಿನ ಹಾಲು. ಬೆಲ್ಲದ ಜೊತೆಗೆ ಬಿಸಿಯಾದ ಹಾಲು ಕೊರೆವ ಚಳಿಯಲ್ಲಿ ಅಮೃತದಂತಿತ್ತು.

ನಂತರ ಸ್ವಾಮೀಜಿ ಮತ್ತು ಇತರ ಆಶ್ರಮದ ಸಹಚರರೊಂದಿಗೆ ಮಾತನಾಡಿ ಅಲ್ಲಿಯ ರೀತಿ ನಿಯಮಗಳ ಬಗ್ಗೆ ತಿಳಿದುಕೊಂಡೆವು. ರಾತ್ರಿಯಲ್ಲಿ ಕ್ರೂರ ಪ್ರಾಣಿಗಳ ಭಯವಿದೆ. ಒಂಟಿಯಾಗಿ ಓಡಾಡಬೇಡಿ ಎಂದೂ ಸಹ ಎಚ್ಚರಿಸಿದರು (ಹಿಂದೆ ಈ ಕುಮಾಂವ್ ಪ್ರಾಂತ್ಯ ನರಭಕ್ಷಕ (man eaters) ಗಳ ನಾಡಾಗಿತ್ತಲ್ಲವೆ. ಧ್ಯಾನ ಮಂದಿರದಲ್ಲಿ ಧ್ಯಾನ ಮಾಡಲು ಕುಳಿತೆವು. ಮನಸ್ಸಿಗೆ ಏನೋ ಹಿತ ಶಾಂತಿಯ ಅನುಭವ. ಮತ್ತೆ ಗೆಸ್ಟ್ ಹೌಸ್ ಕಡೆ ಹೊರಟೆವು. ಸುದೀರ್ಘ ಪ್ರಯಾಣದಿಂದ ದಣಿವಾಗಿತ್ತು. ಯಾವಾಗ ನಿದ್ದೆಗೆ ಜಾರಿದೆವೋ ತಿಳಿಯಲೇ ಇಲ್ಲ.

ಮಾರನೆಯ ದಿನ ಮಾರ್ಚ 22 ಯುಗಾದಿ ಹಬ್ಬ ಶೋಭಕ್ರುತ್ ಸಂವತ್ಸರದ ಶುಭಾರಂಭ. ನಸುಕಿನಲ್ಲಿ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಆಶ್ರಮದೆಡೆಗೆ ನಡೆದೆವು, ಗೆಸ್ಟ್ ಹೌಸ್ ಆಶ್ರಮದಿಂದ ಅನತಿ ದೂರ.

ಹಿಂದಿನ ದಿನ ಕತ್ತಲಾಗಿದ್ದರಿಂದ ಆಶ್ರಮದ ವಾತಾವರಣ ಸುತ್ತಮುತ್ತ ಹೇಗಿದೆ ಎಂದು ನಮಗೆ ಕಂಡಿರಲಿಲ್ಲ. ಬೆಳಿಗ್ಗೆ ಸೂರ್ಯೋದಯದ ಸಮಯ ಅಶ್ರಮಾಭಿಮುಖವಾಗಿ ಹೊರಟಾಗ ಕಂಡ ದೃಶ್ಯಕ್ಕೆ ಬೆರಗಾಗಿ ಹೋದೆ ಎತ್ತೆತ್ತಲೂ ಹಸಿರು ದಿಟ್ಟಬೆಟ್ಟಗಳು, ಬಣ್ಣ ಬಣ್ಣದ ಹೂವುಗಳು, ದೇವದಾರು ವೃಕ್ಷಗಳ ಸಾಲು, ಧ್ಯಾನಮಂದಿರ ಅದರ ಮುಂಭಾಗದಲ್ಲಿ ಪುಟ್ಟ ತೋಟ ಗ್ರಂಥಾಲಯ ಇತ್ಯಾದಿ ಸುಂದರ ಕಟ್ಟಡಗಳು. ಕಡೆಯಲ್ಲಿ ದೃಷ್ಟಿ ಹಾಯಿಸಿದರೆ ಕಂಡದ್ದೇನು.... ಹಿಮಾಚ್ಛಾದಿತ ಪರ್ವತಗಳ ಸಾಲು!!!! ಹಾಲು ಬಿಳುಪಿನ ಪರ್ವತಗಳ ಮೇಲೆ ಬಾಲರವಿಯ ಹೊನ್ನ ಕಿರಣಗಳು. ಕಣ್ಣಿಗೆ ಹಬ್ಬ!!! .ಈ ನೋಟ ಸೌಂದರ್ಯದ ಪರಮಾವಧಿ ಎನಿಸಿತ್ತು. ಈ ಪ್ರಾಂತ್ಯಕ್ಕೆ ದೇವಭೂಮಿ ಅನ್ನುವುದು ಅನ್ವರ್ಥವೇ ಸರಿ.

ಈ ಧೀಮಂತ ಹಿಮಾಲಯ ನಮ್ಮ ದೇಶದಲ್ಲಿ ಮಾತ್ರ. ಪಾಶ್ಚಿಮಾತ್ಯ ದೇಶಗಳಲ್ಲಿ ಎಷ್ಟೇ ಹಿಮ ಬಿದ್ದರೂ ಸಹ ಈ ರೀತಿ ಅಚಲವಾಗಿ ನಿಂತ ಉದಾಹರಣೆ ಇಲ್ಲ. ಹಾಗೆಯೆ ಕೆಲಹೊತ್ತು ನಿಂತು ಆ ದೃಶ್ಯವನ್ನು ಕಣ್ಣು ತುಂಬಿಸಿಕೊಳ್ಳುತ್ತಿದ್ದೆ... ಸಾಕೆನಿಸುವುದೇ ಇಲ್ಲ. ಕಾಲದ ಓಟ ಹೀಗೆ ಇಲ್ಲೇ ನಿಲ್ಲಬಾರದೆ ಅನಿಸಿದ್ದರೆ ಅತಿಶಯೋಕ್ತಿ ಏನಲ್ಲ!! ಅಷ್ಟರಲ್ಲಿ ಸ್ವಾಮೀಜಿ ಯವರ ಪ್ರವಚನ ಸಮಯ. ಜೀವನದಲ್ಲಿ ಆಧ್ಯಾತ್ಮದ ಪ್ರಾಮುಖ್ಯತೆಯ ಬಗ್ಗೆ ಹಿತಮಿತವಾದ ಮಾತು. ಮನಸ್ಸು ಉಲ್ಲಾಸಮಯವಾಗಿತ್ತು.

ಶಾಂತ ಮನೋಹರ ಪರಿಸರ ಮತ್ತೆ ಧ್ಯಾನ ಮಂದಿರದಲ್ಲಿ ಕಾಲ ಸಂಚಯಿಸಿ ಅಲ್ಲೇ ಸುತ್ತಾಡಿಕೊಂಡು ಬಂದೆವು. ನಂತರ ಗ್ರಂಥಾಲಯ, ಪುಸ್ತಕದ ಅಂಗಡಿಗಳನ್ನು ನೋಡಿಕೊಂಡು ಕಾಡಿನ ಮಧ್ಯೆ ಘಟ್ಟಗಳಲ್ಲಿ ಒಂದು ಸಣ್ಣ ಡ್ರೈವ್ ಹೋಗಿ ಬಂದೆವು. ಹಿಂದಿನ ದಿನ ಮಳೆ ಆಗಿದ್ದರಿಂದ ಪರಿಸರ ಆಹ್ಲಾದಕರವಾಗಿತ್ತು ರಾತ್ರಿಯಲ್ಲಿ ಮಾತ್ರ ಚಳಿ ಹೆಚ್ಚು. ರಾತ್ರಿ ಊಟದ ನಂತರ ಮತ್ತೆ ಸ್ವಾಮೀಜಿಯವರೊಂದಿಗೆ ಸಮಯ ಕಳೆದು ಗೆಸ್ಟ್ ಹೌಸ್‌ಗೆ ತೆರಳಿದೆವು. ಮತ್ತೊಂದು ದಿನ ಆಶ್ರಮದಲ್ಲಿ ಕಳೆದಿದ್ದು ತುಂಬಾ ಖುಷಿ ಕೊಟ್ಟಿತ್ತು. ಮಾಯಾವತಿ ಆಶ್ರಮದಲ್ಲಿ ಊಟ ವಸತಿ ಎಲ್ಲವೂ ಉಚಿತ. ಶಕ್ತ್ಯಾನುಸಾರ ದೇಣಿಗೆ ಕೊಡಬಹುದು.

ಮಾರನೆ ದಿನ ನಸುಕಿನಲ್ಲಿ ಸ್ನಾನಾದಿಗಳನ್ನು ಮುಗಿಸಿ ಮತ್ತೆ ಹಿಮಾಲಯ ದರ್ಶನ. ತಣಿಯದ ಕಣ್ಮನಗಳು...ಮತ್ತೊಮ್ಮೆ ಆಶ್ರಮಕ್ಕೆ ಬರುವ ನಿರ್ಧಾರ ಮಾಡಿ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಪಿತೋರಘಡ್ ಕಡೆಗೆ ಪ್ರಯಾಣ ಮುಂದುವರೆಸಿದೆವು.

ಪಿತೋರಘಡ್ ಉತ್ತರಾಖಂಡದ ಒಂದು ಮುಖ್ಯವಾದ ಜಿಲ್ಲೆ. ವ್ಯಾಪಾರ ವಹಿವಾಟು ಮತ್ತು ಪ್ರವಾಸೋದ್ಯಮದ ಕೇಂದ್ರ. ಮಾಯಾವತಿ–ಪಿತೋರಘಡ್ ರಸ್ತೆ ಸುಸ್ಥಿತಿಯಲ್ಲಿತ್ತು. ಯಥಾಪ್ರಕಾರ ಗಿರಿಕಂದಕಗಳ ಮಧ್ಯೆ ಸಾಗುತ್ತದೆ. ದಾರಿ ಉದ್ದಕ್ಕೂ ಹಿಮಾಲಯದಲ್ಲಿ ಹುಟ್ಟಿ ಹರಿದು ಬರುವ ಅನೇಕ ಸಣ್ಣ ಪುಟ್ಟ ನದಿಗಳು ಗಿರ್ಥಿ ಕಿಯೋಗಡ್, ಕಾಳಿ (ಶಾರದಾ), ಗೊರಿಗಂಗ, ಧೌಲಿ ಗಂಗಾ, ಸರಯೂ (ಸ್ಥಳೀಯರು ಸರುಗಂಗ / ಸರ್ಜು ಎಂತಲೂ ಕರೆಯುತ್ತಾರೆ), ರಾಮಗಂಗ, ಕೋಸಿ ಇತ್ಯಾದಿ ನದಿಗಳು ಕಣಿವೆಗಳಲ್ಲಿ ಬಳುಕುತ್ತಾ ಹರಿಯುತ್ತಿದ್ದ ದೃಶ್ಯ ಅಪ್ರತಿಮವಾಗಿತ್ತು. (ಕೊನೆಗೆ ಈ ಎಲ್ಲ ನದಿಗಳು ಗಂಗೆಯೊಂದಿಗೆ ಬೇರೆ ಬೇರೆ ಸ್ಥಳಗಳಲ್ಲಿ ಸಮಾಗಮಗೊಳ್ಳುತ್ತವೆ). ಸರಯೂ ನದಿ ಕುಮಾಂವ್ ಜನಾಂಗದಲ್ಲಿ ಬಹು ಮುಖ್ಯ ಪವಿತ್ರ ಹಾಗೂ ಜೀವನದಿ. ಅಲ್ಲಿಯ ಮೆಟ್ಟಿಲು ಕೃಷಿ (step farming) ಭೂಮಿಗಳು ನೋಡಲು ಚಂದ.

ಹೀಗೆ ದಾರಿಯುದ್ದಕ್ಕೂ ಪ್ರಕೃತಿಯನ್ನು ಆಸ್ವಾದಿಸುತ್ತಾ ಸುಮಾರು 3 ತಾಸುಗಳ ಪ್ರಯಾಣದ ನಂತರ ಪಿತೋರಘಡ್ ತಲುಪಿದ್ದೆವು. ಈ ಮೊದಲೇ ಕಾಯ್ದಿರಿಸಿದ ಪೈನ್ ರೆಸಾರ್ಟ್‌ನ ಕೋಣೆಯಲ್ಲಿ ಲಗ್ಗೇಜ್ ಇಟ್ಟು ಸೈಟ್ ಸೀಯಿಂಗ್‌ಗೆ ತಯಾರಾದೆವು. ನಮ್ಮ ಕಾರನ್ನು ರೆಸಾರ್ಟ್‌ನಲ್ಲಿ ಬಿಟ್ಟು ಅಲ್ಲಿನ ಗೈಡ್ ಜೀವನ್ ಅವರ ಕ್ಯಾಬ್‌ನಲ್ಲಿ ಹೊರಟೆವು.....

ನಮ್ಮ ವಾಹನ ಝೂಲಘಾಟ್ (ನೇಪಾಳ)ಕಡೆಗೆ ಸಾಗಿತ್ತು. ಮಾಯಾವತಿ ಗೆ ವ್ಯತಿರಿಕ್ತವಾದ ಹವಾಮಾನ. ಪಿತೋರಘಡದಲ್ಲಿ ಭಯಂಕರ ಬಿಸಿಲು ಸುಡುತ್ತಿತ್ತು. ರಸ್ತೆ ಸಹ ಸರಿ ಇರಲಿಲ್ಲ. ಎಲ್ಲಾಕಡೆ ಧೂಳುಮಯ. ಅನುಭವಿ ಡ್ರೈವರ್ ಜೀವನ್ ಅವರೊಂದಿಗೆ ಸ್ಥಳೀಯ ವಿಷಯಗಳ ಬಗ್ಗೆ ಮಾತನಾಡುತ್ತಾ ದಾರಿ ಸವೆಯುತ್ತಿತ್ತು. ಪಹಾಡಿ ಭಾಷೆ, ಆಹಾರ ಪದ್ಧತಿ, ಕೃಷಿ ಪದ್ಧತಿ ಹೀಗೆ ಹಲವಾರು ವಿಷಯಗಳು.

ಗಡಿ ಭದ್ರತಾ ಪಡೆ (BSF) ವಲಯ ದಾಟಿ ಮುಂದೆ ಹೋಗಿ ದೇಶದ ಗಡಿ ತಲುಪಿದೆವು. ಅಲ್ಲಿಂದ ಸುಮಾರು ಅರ್ಧ ಕಿ.ಮೀ. ಕಾಲ್ನಡಿಗೆ ಯ ನಂತರ ಶಾರದಾ ನದಿಯ ತೀರ. (ನೇಪಾಳಿಯರು ಕಾಳಿ ಅಥವಾ ಮಹಾಕಾಳಿ ಎಂದು ಕರೆಯುತ್ತಾರೆ) ಈ ನದಿಯು ಭಾರತ ನೇಪಾಳ ದೇಶಗಳನ್ನು ಪ್ರತ್ಯೇಕಿಸುವ ಪ್ರಕೃತಿದತ್ತ ಗಡಿ. ನದಿ ದಾಟಲು ಸುಮಾರು ನೂರು ಮೀ ಉದ್ದವಿರುವ ಒಂದು

ತೂಗು ಸೇತುವೆಯ ಮೇಲೆ ನಡೆದುಕೊಂಡು ಹೋದರೆ ನೇಪಾಳ ಪ್ರವೇಶಿಸಬಹುದು. ಯಾವುದೇ VISA/Currency ಬೇಕಿಲ್ಲ. ಕಾಳಿ ನದಿಯ ಈ ತೂಗು ಸೇತುವೆ ಯನ್ನು ಇಂಡೋ–ನೇಪಾಳ ಬ್ರಿಡ್ಜ್ ಎಂದು ಕರೆಯುತ್ತಾರೆ. ನೇಪಾಳದ ಮಾರುಕಟ್ಟೆಯಲ್ಲಿ ಓಡಾಡಿ, ಅಲ್ಪಸ್ವಲ್ಪ shopping ಸಹ ಮಾಡಿ, ಸುಂದರ ದೃಶ್ಯವನ್ನು ಕಣ್ತುಂಬಿಕೊಂಡು ತೂಗುಸೇತುವೆ ಮೂಲಕ ಪುನಃ ಭಾರತದೆಡೆಗೆ ಹೊರಟೆವು. ನಮ್ಮ ದೇಶದ ಗಡಿಭಾಗದಲ್ಲಿ ಓಡಾಡುವುದೇ ಒಂದು ವಿಶಿಷ್ಟ ಅನುಭವ. ಈ ಹಿಂದೆ ಅಟ್ಟಾರಿ (ಪಾಕ್ ಗಡಿ), ನಥೂಲ ಪಾಸ್ (ಚೀನಾ ಗಡಿ) ನೋಡಿದಾಗಲೂ ಸಹ ನನಗೆ ಇದೇ ಅನುಭವ ಆಗಿತ್ತು.

ನಂತರ ಅಲ್ಲಿಂದ ಹೊರಟು ಕಾಮಾಖ್ಯ ಮಂದಿರ ದರ್ಶನ ಮಾಡಿದೆವು. ಪಿತೋರಘಢ್ ಊರೆಲ್ಲ ಸುತ್ತಿ ಕೊನೆಗೆ ರೈ ಗುಹಾ ಶಿವಾಲಯ ವೀಕ್ಷಿಸಿದೆವು. ವಿವಿಧ ರೀತಿಯ ನೈಸರ್ಗಿಕ ರಚನೆಗಳುಳ್ಳ ಸುಣ್ಣದಕಲ್ಲಿನ (limestone) ಗುಹೆ ಅದಾಗಿತ್ತು. ಈ ಭಾಗದಲ್ಲಿ ಇಂತಹ ಗುಹೆಗಳು ಹೇರಳವಾಗಿ ಕಂಡುಬರುತ್ತವೆ ಅವುಗಳಲ್ಲಿ ನೈಸರ್ಗಿಕವಾಗಿ ರೂಪುಗೊಂಡ ಆಕಾರಗಳು ಆಶ್ಚರ್ಯ ಹುಟ್ಟಿಸುತ್ತವೆ. ನಿಜಕ್ಕೂ ಈ ಭೂತಳ ಎಷ್ಟೊಂದು ವಿಸ್ಮಯಗಳ ಆಗರ !!

ದಾರಿಯಲ್ಲಿ ಪಹಾಡಿ special ಅಂತ ಚನಾ ಸಮೋಸ ತಿನ್ನಲು ಜೀವನ್ ಶಿಫಾರಸು ಮಾಡಿದರು. ನಿಜಕ್ಕೂ ತುಂಬ ರುಚಿಯಾಗಿತ್ತು.

ಅಷ್ಟರಲ್ಲಾಗಲೇ ಕತ್ತಲಾಗುತ್ತಿತ್ತು. ನಮ್ಮ ವಾಸ್ತವ್ಯದೆಡೆಗೆ ಹಿಂದಿರುಗಿದೆವು.

ಮಾರನೆಯ ದಿನ ಮಾರ್ಚ 24 ನಮ್ಮ ಪರ್ಯಟನೆಯ ನಾಲ್ಕನೆಯ ದಿನ. ಚಂಪಾವತ್ ಮತ್ತು ಲೋಹಾಘಾಟ್ ವೀಕ್ಷಣೆಯ ಯೋಜನೆ ಹಾಕಿಕೊಂಡೆವು. ಉತ್ತರಾಖಂಡ ರಾಜ್ಯದಲ್ಲಿ ಮುಖ್ಯವಾಗಿ ಕಾಣುವುದು ಪ್ರಕೃತಿ ಸೌಂದರ್ಯ, ಪುಟ್ಟ ಪುಟ್ಟ ನದಿಗಳು ಅಗಾಧವಾದ ಗಿರಿಕಂದರಗಳು ಜೊತೆಗೆ ಪ್ರತಿ 4–6 ಕಿ.ಮೀ ಗೊಂದು ಶಿವಾಲಯಗಳು.

ಸುಮಾರು 90 ಕಿ.ಮೀ ದೂರದ ಪಂಚೇಶ್ವರ್‌ಗೆ ಹೋಗುವುದೆಂದು ನಿರ್ಧರಿಸಿದ್ದೆವು. ಬಹಳ ಪುಣ್ಯಸ್ಥಳ ಕಾಳಿ ಸರಯೂ ನದಿಯ ಸಂಗಮ ಹಾಗೂ ಪಂಚೇಶ್ವರ ಮಹದೇವ್ ಮಂದಿರ ಇರುವುದನ್ನು ತಿಳಿದುಕೊಂಡೆವು. ಅಷ್ಟರಲ್ಲಿ ನಮ್ಮ ಗೈಡ್ ಜೀವನ್ ಅವರಿಂದ ತಿಳಿದು ಬಂದಿದ್ದು ಭುವನೇಶ್ವರ್ ಎಂಬ ಪುಟ್ಟ ಊರಿನ ನಲ್ಲಿರುವ ಪಾತಾಳ ಭುವನೇಶ್ವರ್ ಗುಹೆಯವಿಷಯ. ಅದರ ಬಗ್ಗೆ ಆಸಕ್ತಿ ಮೂಡಿತು. ಅಲ್ಲಿಗೆ ಹೊರಡುವುದೆಂದು ನಿರ್ಧರಿಸಿದೆವು. ಜೀವನ್ ಅವರಿಂದ ಬೀಳ್ಕೊಂಡು ಪೈನ್ ರೆಸಾರ್ಟ್ ನಿಂದ ನಮ್ಮ ಸವಾರಿ ಹೊರಟಿತು.

ಭುವನೇಶ್ವರ್‌ದ ದಾರಿಯ ಬಗ್ಗೆ ಮಾಹಿತಿ ಪಡೆದು ಹೊರಟೆವು. ಪಿತೋರಘಢ್ ಇಂದ 85 ಕಿ.ಮೀ. ಪ್ರಯಾಣ. ಲೋಹಾಘಾಟ್, ಘಾಟ್, ಗಂಗೊಲಿ ಘಾಟ್ ಇತ್ಯಾದಿ ಊರುಗಳನ್ನು ದಾಟಿ ಪಯಣ ಮುಂದೆ ಸಾಗಿತ್ತು. ದಾರಿಯುದ್ದಕ್ಕೂ ನಮ್ಮೊಂದಿಗೇ ಹರಿದು ಬರುತ್ತಿದ್ದ ಸರಯೂ ನದಿ. ಮನೋಹರ ಪರ್ವತ ಶ್ರೇಣಿ. ರಸ್ತೆ ಮಾತ್ರ ತುಂಬಾ ಕೆಟ್ಟಿತ್ತು. ಅಲ್ಲದೆ ಕೆಲವು ಕಡೆ ಕಣ್ ತಣಿಸುವ ದೃಶ್ಯಗಳನ್ನು ಸೆರೆಹಿಡಿಯಲು ನಿಲ್ಲುತ್ತಿದ್ದೆವು. ಹೀಗಾಗಿ ಪ್ರಯಾಣ ಸುದೀರ್ಘವಾಗಿತ್ತು. ಅಂತೂ ಭುವನೇಶ್ವರ್ ತಲುಪುವ ವೇಳೆಗೆ ಮಧ್ಯಾಹ್ನ ಎರಡು ಘಂಟೆ.

ಅಲ್ಲಿ ಪ್ರಾಚೀನ ಕಾಲದ ಚಂಡಿಕಾ ದೇವಿಯ ಮಂದಿರ ನೋಡಿಕೊಂಡು ಗುಹೆಯ ಬಳಿ ಹೊರಟೆವು. ಅಲ್ಲಿಯೇ ಮೊಬೈಲ್ deposit ಮಾಡಿ ಟಿಕೆಟ್ ತೆಗೆದುಕೊಂಡು ಗುಹೆಯ ಪ್ರವೇಶದ್ವಾರದ ಬಳಿ ನಿಂತೆವು. ಕಿರಿದಾದ ದಾರಿ?? ಭೂಮಿಯ ಆಳಕ್ಕೆ ಇಳಿಯಬೇಕು!!! ಅದ್ಯಾಕೋ ಭಯ ಆವರಿಸಿತು. ಒಂದು ಕ್ಷಣ ಬೇಡ ವಾಪಸ್ ಹೋಗೋಣ ಅನ್ನಿಸಿತ್ತು. ಅಷ್ಟರಲ್ಲಿ ಅಲ್ಲಿನ ಗೈಡ್ ಬಂದು ಇಷ್ಟು ದೂರ ಬಂದಿದ್ದೀರಿ ಒಳಗೆ ಹೋಗಿ ಮಹಾದೇವನ ದರ್ಶನ ಮಾಡಿ ಭಯಪಡುವ ಕಾರಣವಿಲ್ಲ, ನಾನು ಜೊತೆಗೇ ಇದ್ದೇನೆ ಎಂದು ಹುರಿದುಂಬಿಸಿದರು. ಅಲ್ಲದೆ ಗುಹೆ ಇಂದ ಹೊರಗೆ ಬರಲು ನಿಂತಿದ್ದ ದಂಪತಿಯೊಬ್ಬರು ಧೈರ್ಯವಾಗಿ ಬನ್ನಿ ನೋಡಲೇ ಬೇಕಾದ ಸ್ಥಳ ಎಂದರು. ಅಂತೂ ಗುಹೆ ಒಳಗೆ ಹೋಗುವ ನಿರ್ಧಾರ ಮಾಡಿ ಹೊರಟೆವು . ಅಂಕುಡೊಂಕಾದ ಮೆಟ್ಟಿಲುಗಳು ಕೆಲವೆಡೆ ಕುಳಿತು ಹಲವೆಡೆ ಸರಿದು ಒಂದೆರಡು ಕಡೆ ತೆವಳಿ....ಓಹ್ ಹೇಗೋ ಸುಮಾರು 90 ಅಡಿ ಆಳದ ಪಾತಾಳ ಗುಹೆ ಯನ್ನು ಪ್ರವೇಶಿಸಿದೆವು.

ಗುಹೆಯ ಒಳಭಾಗದಲ್ಲಿ ವಿದ್ಯುದ್ದೀಪಗಳು ಬೆಳಕು ಚೆಲ್ಲುತ್ತಿದ್ದವು. ಕೆಲವು ಕಡೆ ಆರಾಮವಾಗಿ ನಡೆಯ ಬಹುದಿತ್ತಾದರೂ ಹೆಚ್ಚಾಗಿ ತಲೆ ಬಗ್ಗಿಸಿಕೊಂಡೇ ನಡೆಯಬೇಕಿತ್ತು. ಗೈಡ್ ಆಗಾಗ ಎಚ್ಚರಿಸುತ್ತಲೇ ಇದ್ದರು. ನೈಸರ್ಗಿಕ ರಚನೆಗಳು ಹೇರಳವಾಗಿದ್ದವು. ಅತ್ಯದ್ಭುತವಾಗಿದ್ದವು. ಹಿಂದೂ ಪುರಾಣಗಳಲ್ಲಿ ಬರುವ ಎಲ್ಲಾ ಕಥೆ ಅಲ್ಲಿ ಪ್ರಕಟಗೊಂಡಿದ್ದುವು.

ಆದಿಶೇಷ, ಗಣೇಶನ ಛಿದ್ರಗೊಂಡ ಶಿರ, ಶಿವನ ಜಟೆ, ಗಂಗೆ, ತ್ರಿಮೂರ್ತಿಗಳು, ಮುಕ್ಕೋಟಿ ದೇವತೆಗಳು ಕಾಮಧೇನು, ಕಲ್ಪವೃಕ್ಷ, ಒಂದೇ ಎರಡೇ....... ಏನೇ ಇರಲಿ ಈ ಸುಣ್ಣದ ಕಲ್ಲಿನಲ್ಲಿ ನೈಸರ್ಗಿಕವಾಗಿ ಇಷ್ಟೊಂದು ಕಥೆಗಳು ರೂಪುಗೊಂಡಿರುವುದು ಆಶ್ಚರ್ಯ...ಸೃಷ್ಟಿಯ ವೈಚಿತ್ರ್ಯ! ಸುಮಾರು 150 ಅಡಿ ಉದ್ದವಿರುವ (depth) ಗುಹೆಯಲ್ಲಿ ಇನ್ನೂ ಅನೇಕ ಕಥೆಗಳನ್ನು ಹೇಳುತ್ತಾ ನಮ್ಮ ಗೈಡ್ ಪಂಡಿತ್ ಅವರು ಸಾಗುತ್ತಿದ್ದರು. ಈ ಗುಹೆ ಆದಿ ಕಾಲದಿಂದಲೂ ಇದೆ. ಸ್ಕಂದ ಪುರಾಣದ ಮಾನಸಖಂಡದಲ್ಲಿ ಇದರ ಬಗ್ಗೆ ಉಲ್ಲೇಖವಿದೆ. ತ್ರೇತಾಯುಗದಲ್ಲಿ ಸೂರ್ಯವಂಶದ ದೊರೆ ಋತುಪರ್ಣ ಮೊಟ್ಟ ಮೊದಲು ಈ ಗುಹೆಯನ್ನು ಪ್ರವೇಶಿಸಿದ್ದನಂತೆ.

ದ್ವಾಪರ ಯುಗದಲ್ಲಿ ಪಾಂಡವರು ಮರುಶೋಧನೆ ಮಾಡಿದ್ದರಂತೆ. ಮತ್ತೆ ಕಲಿಯುಗದಲ್ಲಿ ಆದಿಗುರು ಶಂಕರಾಚಾರ್ಯರು ಈ ಗುಹೆಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ನಂತರ ಕುಮಾಂವ್‌ನ ಚಾಂದ್ ರಾಜವಂಶದವರು ಪೂಜೆಗಾಗಿ ಪಂಡಿತರನ್ನು ನಿಯಮಿಸಿದರಂತೆ. ಅದೇ ಇಂದಿಗೂ ಅಲ್ಲಿ ಸಾಂಗವಾಗಿ ಪೂಜೆ ನಡೆಯುತ್ತಿದೆ. ಅಲ್ಲದೆ ಆದಿ ಗುರು ಶಂಕರರು ಪ್ರತಿಷ್ಠಾಪಿಸಿದ ಶಿವಲಿಂಗವು ಈಗಲೂ ಸಹ ಅಲ್ಲಿದೆ. ಮಹಾದೇವನಿಗೆ ನಮ್ಮ ಕೈಯಿಂದಲೆ ಅಭಿಷೇಕ ಮಾಡಿ ಧನ್ಯರಾದೆವು.

ತದನಂತರ 2003 ರಲ್ಲಿ ಪುರಾತತ್ವ ಇಲಾಖೆಯು ಈ ಸ್ಥಳವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದೆ ಎಂಬ ಮಾಹಿತಿ ಸಹ ಗೈಡ್ ನಮಗೆ ತಿಳಿಸಿದರು.

ಗುಹೆಯಿಂದ ಹೊರಗೆ ಬರುವಾಗಲೂ ಹರಸಾಹಸ ಮಾಡಬೇಕಾಯಿತು. ಕಬ್ಬಿಣದ ಸರಪಳಿ ಹಿಡಿದು ಮೇಲೆ ಹತ್ತಿ ಹೊರಬಂದೆವು. ನಿಜಕ್ಕೂ ಅದೊಂದು ಅಲೌಕಿಕ ಅನುಭವ.

ಮುಂದೆ ಚಂಪಾವತ್ ಕಡೆಗೆ ಪ್ರಯಾಣ ಬೆಳೆಸಿದೆವು. ಮಾರ್ಗಮಧ್ಯದಲ್ಲಿ ಅದೇ ಮನೋಹರ ದೃಶ್ಯಗಳು. ವಸಂತನ ಆಗಮನದಿಂದ ಚಿಗುರೊಡೆದ ದೇವದಾರು ಮರಗಳು ವಿವಿಧ ಬಣ್ಣಗಳಿಂದ ಕಂಗೊಳಿಸುತ್ತಿದ್ದವು. ಅನೇಕ ತರಹದ ಹೂಗಳಿಂದ ಗಿಡ ಮರಗಳಿಂದ ಗಿರಿಕಂದರಗಳು ಪಯಣಿಗರನ್ನು ಸೆರೆ ಹಿಡಿಯುತ್ತಿದ್ದವು...

ಮಾರ್ಗಮಧ್ಯೆ ಒಂದು ಪುಟ್ಟ ಗುಡ್ಡ ಬಿಳಿಯ



ಹೂಗಳಿಂದ ತುಂಬಿಕೊಂಡು ಅತ್ಯಂತ ಸುಂದರವಾಗಿ ಕಂಗೊಳಿಸುತ್ತಿತ್ತು ಅದರ ಬಗ್ಗೆ ಹೆಚ್ಚೇನೂ ಮಾಹಿತಿ ದೊರೆಯಲಿಲ್ಲ. ಹಾಗೇ ಒಂದಷ್ಟು ಫೋಟೋಗಳಲ್ಲಿ ಸೆರೆ ಹಿಡಿದುಕೊಂಡೆ. ಸ್ವಲ್ಪ ಮುಂದೆ ಘಾಟ್ ಬಳಿ ಬರುವಾಗ ಕಣಿವೆಯಲ್ಲಿ ಒಂದು ಸುಂದರ ದೃಶ್ಯ ಕಾಣಿಸುತ್ತಿತ್ತು. ಒಂದು ಪುಟ್ಟ ದೇವಸ್ಥಾನ ಅದರ ಎರಡು ಬದಿಯಿಂದ ನದಿಗಳೆರಡು ಕೂಡಿಕೊಂಡು ಮುಂದೆ ಹರಿದು ಹೋಗುತ್ತಿರುವ ಸ್ವರ್ಗಸದೃಶ ನೋಟ! ಅಲ್ಲಿಗೇ ಹೋಗಬೇಕೆನ್ನುವ ಮನಸ್ಸಾದರೂ ಕತ್ತಲಾಗುತ್ತಿದ್ದರಿಂದ ನಿಗದಿತ ಪ್ರಯಾಣ ಮುಂದುವರೆಸಿದೆವು. ನಂತರ ತಿಳಿದು ಬಂದಿತು.....ಅದು ರಾಮೇಶ್ವರ ಅನ್ನುವ ಪವಿತ್ರ ಸ್ಥಳ. ಶ್ರೀ ರಾಮ ಧನುರ್ವಿದ್ಯೆ ಕಲಿತದ್ದು ಇಲ್ಲಿಯೇ. ಸರಯೂ ಮತ್ತು ರಾಮಗಂಗ ನದಿಗಳ ಸಂಗಮ ಅಲ್ಲದೇ ಅಲ್ಲೊಂದು ಶಿವಾಲಯವೂ ಇದೆಯಂತೆ. ಆ ಸ್ಥಳವನ್ನು ನೋಡದೇ ಬಂದಿದ್ದು ಈಗಲೂ ಮನಸ್ಸನ್ನು ಕೊರೆಯುತ್ತಿದೆ.

ಮುಂದೆ ಅನತಿ ದೂರದಲ್ಲಿ ಚಾಯ್ ವಾಲನ ಪುಟ್ಟ ಅಂಗಡಿ ಇತ್ತು. ಅಲ್ಲೇ ವಿರಮಿಸಿ ಚಹಾ ಸೇವನೆ ಮಾಡಿ ಮತ್ತೆ ಹೊರಟೆವು. ಸುಮಾರು 7ಗಂಟೆಗೆ ಲೋಹಾಘಾಟ್ ತಲುಪಿ ಅಲ್ಲಿಯೇ ರಾತ್ರಿ ಕಳೆಯುವ ನಿರ್ಧಾರ ಮಾಡಿದೆವು. ಮೊದಲೇ ಬುಕ್ಕಿಂಗ್ ಇರಲಿಲ್ಲ ಹಾಗಾಗಿ ಒಂದೆರಡು ಕಡೆ ಹುಡುಕಬೇಕಾಯಿತು. ಅಂತೂ ಒಂದು ಒಳ್ಳೆಯ ಹೋಟೆಲ್ ಸಿಕ್ಕಿತ್ತು. ಹೋಟೆಲ್ ರಂಜಿತ್ ಪ್ಯಾಲೇಸ್ ಸುಸಜ್ಜಿತವಾಗಿತ್ತು.

ಮಾರನೆಯ ದಿನ ದೆಹಲಿಯ ಕಡೆಗೆ ನಮ್ಮ ಪಯಣ. ಬಾಲ್ಕನಿಯಲ್ಲಿ ಕುಳಿತು ಯಥಾಪ್ರಕಾರ ಮನಮೋಹಕ ದೃಶ್ಯ ಆಸ್ವಾದಿಸುತ್ತಾ ಬೆಳಗಿನ ಉಪಹಾರ ಮುಗಿಸಿ ತಯಾರಾದೆವು. ಪರ್ಯಟನೆಯ ಕೊನೆಯ ಹಂತ. ಮನಸ್ಸಿಗೆ ಸಮಾಧಾನ ಆಗಿರಲಿಲ್ಲ. ಈ ದೇವಭೂಮಿಯಲ್ಲಿ ಇನ್ನೂ ಸುತ್ತಬೇಕೆನ್ನುವ ಅದಮ್ಯ ಬಯಕೆ. ಮತ್ತೊಮ್ಮೆ ಬರುವ ನಿರ್ಧಾರ ಮಾಡಿಯೇ ವಾಹನ ಏರಿದೆವು.

ಅಂತೂ ಸುಮಾರು 1145 ಕಿ.ಮೀ ರೋಡ್ ಟ್ರಿಪ್ ಅಂತಿಮ ಹಂತಕ್ಕೆ ಬಂದಿತ್ತು. ಮನೆ ತಲುಪಿದಾಗ ಸಂಜೆ 6 ಘಂಟೆ. ಉತ್ತರಾಖಂಡದ Hangover ಇದ್ದೇ ಇತ್ತು. ಏನಾದರೂ ಬರೆಯಬೇಕು ಎಂಬ ಆಸೆ ತಲೆಯಲ್ಲಿ ಗುಂಯ್ ಗುಡುತ್ತಿತ್ತು. ಪ್ರವಾಸ ಕಥನ ಬರೆಯುವಷ್ಟು ಪ್ರಬುದ್ಧತೆ ನನಗಿಲ್ಲ. ಈ ಹಿಂದೆ ಅನೇಕ ರೋಡ್ ಟ್ರಿಪ್ ಮಾಡಿದ್ದರೂ ಸಹ ಯಾವುದನ್ನು ಬರೆದಿರಲಿಲ್ಲ. ಅದೇನೇ ಇರಲಿ ನನ್ನ ಅನುಭವವನ್ನು ದಾಖಲಿಸುವ ಪ್ರಯತ್ನ ಮಾಡಿದ್ದೇನೆ ಅಷ್ಟೇ.

ಲೇಖಕರು :
**ಶ್ರೀಮತಿ ವೈಜಯಂತಿ ಗಿರೀಶ್**
ವಕೀಲರು, ದೆಹಲಿ ಕನ್ನಡತಿ



# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮಾಚರಣೆ






ನಮಸ್ತೇತು ಮಹಾಮಾಯೆ ಶ್ರೀ ಪೀಠೇ ಸುರಪೂಜಿತೇ। ಶಂಖ ಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೆ. ಲಕ್ಷ್ಮೀ ಸ್ವರೂಪರಾದ ಪ್ರತಿಯೊಬ್ಬ ಮಹಿಳೆಗೂ ವಂದಿಸುತ್ತಾ, ಪುರುಷರ ಪ್ರಾಭಲ್ಯವಿರುವ ಜಗತ್ತಿನಲ್ಲಿ ಮಹಿಳೆಯ ಜೀವನದ ಮಹತ್ವವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಈ ದಿನವನ್ನು ಆಚರಿಸಲಾಗುತ್ತದೆ.

“ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾಃ, ಯತ್ರೈತಾಸ್ತು ನಾ ಪೂಜ್ಯಂತೆ ಸರ್ವಾಸ್ತತ್ರಾಫಲಾಃ ಕ್ರಿಯಾಃ॥”

ಅರ್ಥ–ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗಿರುತ್ತಾರೆ, ಸ್ತ್ರೀಯರನ್ನೆಲ್ಲಿ ಅವಮಾನಗೊಳಿಸಲಾಗುತ್ತದೋ ಅಲ್ಲಿ ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥ ಎಂದು, ಈ ಮಾತು ಭಾರತೀಯ ಪರಂಪರೆಯಲ್ಲಿ ಹೆಣ್ಣೊಬ್ಬಳ ಸ್ಥಾನಮಾನವನ್ನು ಸೂಚಿಸುತ್ತದೆ.

ಮಾರ್ಚ್ 20, 2024 ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಚರಿಸಿದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಎಲ್ಲಾ ಸದಸ್ಯರು ಬಹಳ ಸಂಭ್ರಮದಿಂದ ಪಾಲ್ಗೊಂಡಿದ್ದರು.

ಶ್ರೀಮತಿ ರೇಖಾನಾಯಕ್, ಶ್ರೀಮತಿ ರೀನಾ ಕುರ್‌ಮೋಳಿ ಅವರು ಪ್ರಾರ್ಥನೆ ಹಾಡುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಅಧ್ಯಕ್ಷರಾದ ಶ್ರೀಮತಿ ಸರೋಜ ಮಾಧವ ಅವರು ಎಲ್ಲರನ್ನೂ ಹೃದಯ ಪೂರ್ವಕವಾಗಿ ಸ್ವಾಗತಿಸಿದರು. ಇತ್ತೀಚೆಗೆ ನಿಧನರಾದ ಸ್ನೇಹಾದ ಹಿರಿಯ ಸದಸ್ಯರಾದ ಶ್ರೀಮತಿ ಸುಮಿತ್ರಾ ರಾವ್ ಹಾಗೂ ಶ್ರೀಮತಿ ಸುಗುಣಾ ನಾಗೇಶ್ ಅವರ ಪತಿ ಶ್ರೀ ಬೈಕೆರೆ ನಾಗೇಶ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಐದು ನಿಮಿಷಗಳ ಕಾಲ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಸ್ನೇಹಾ ಅಸೋಸಿಯೇಷನ್ 1980 ರಲ್ಲಿ ಪ್ರಾರಂಭವಾಗಿ ಪ್ರಸ್ತುತದವರೆಗೂ ಮಾಡಿದ ಏನೆಲ್ಲಾ ಮಹತ್ತರ ಕಾರ್ಯಗಳನ್ನು ಹಾಗೂ ನಡೆದು ಬಂದ ದಾರಿಯನ್ನು ವಿವರವಾಗಿ ಶ್ರೀಮತಿ ಸುಗುಣಾನಾಗೇಶ್ ಬರೆದಿರುವುದನ್ನು ಅಧ್ಯಕ್ಷರು ಎಲ್ಲರಿಗೂ ಓದಿ ವಿವರಿಸಿದರು. ಈ ಬಾರಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಡಾ. ಸುಧಾ ಕುಮಾರಿ ಕೆ. (Kannada Professor, Delhi University North Campus) ಆಗಮಿಸಿದ್ದರು. ಅವರ ಪರಿಚಯವನ್ನು ಕಾರ್ಯದರ್ಶಿಯಾದ ಶ್ರೀಮತಿ ಶೋಭಾ ಗೌಡ ಅವರು ಮಾಡಿಕೊಟ್ಟರು. ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಮಾಲಿನಿ ಪ್ರಹ್ಲಾದ, ಕಾರ್ಯದರ್ಶಿಯಾದ ಶ್ರೀಮತಿ ನಯನಾ ಮಾನಕಾಪುರೆ ಮತ್ತು ಸದಸ್ಯರು, ಹಾಗೂ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಪೂಜಾರಾವ್ ಮತ್ತು ಪ್ರಥಮ ಬಾರಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀಮತಿ ಜಯಶ್ರೀ ಬಸವರಾಜು ಅವರು ಸಹಾ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಈ ವರ್ಷದ ವಿಶಿಷ್ಟ ಕನ್ನಡತಿ (Women of the Year) ಪ್ರಶಸ್ತಿಯನ್ನು ಶ್ರೀಮತಿ ಪ್ರಫುಲ್ಲಾ ಶೆಟ್ಟಿ ಅವರಿಗೆ ನೀಡಿ ಗೌರವಿಸಲಾಯಿತು. ಅವರು ಮುಕ್ತ ಮನಸ್ಸಿನಿಂದ ನಗುನಗುತ್ತಾ ತಮ್ಮ ಅನುಭವವನ್ನು ಹಂಚಿಕೊಂಡರು. ಅವರ ಪುತ್ರಿಯರು ಸಹ ಆಗಮಿಸಿದ್ದರು. ಅವರ ಪರಿಚಯವನ್ನು ನಮ್ಮ ಖಜಾಂಚಿಯವರಾದ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ತಿಳಿಸಿದರು.



ನಂತರ ಮುಖ್ಯ ಅತಿಥಿಗಳನ್ನು ಗೌರವಿಸಲಾಯಿತು. ಅಸೋಸಿಯೇಷನ್‌ನ ಹಿರಿಯರು ಮತ್ತು ಮಾರ್ಗದರ್ಶಕರಾದ ಶ್ರೀಮತಿ ರಾಧಾ ಕೌಜಲಗಿ ಅವರು ಕರ್ನಾಟಕ ಸಂಘದ ಕಾವಲು ಸಮಿತಿಗೆ ಆಯ್ಕೆಯಾಗಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ. ಅವರನ್ನು ಅಸೋಸಿಯೇಷನ್ ವತಿಯಿಂದ ಅಭಿನಂದಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿರುವ ಮಹಿಳೆಯರಿಗೆ ಹೂಗೊಂಚ್ಛ ನೀಡಿ ಅಭಿನಂದಿಸಲಾಯಿತು. ವಿಶೇಷವಾಗಿ ಮುಖ್ಯ ಅತಿಥಿಗಳು ನಮ್ಮನ್ನೆಲ್ಲಾ ಪರಿಚಯ ಮಾಡಿಕೊಂಡರು. ಮಹಿಳೆಯರು ಅಬಲೆಯರಲ್ಲಾ ಸಬಲೆಯರು ಎಂದು ತುಂಬಾ ಸೊಗಸಾಗಿ ಉದಾಹರಣೆಗಳೊಂದಿಗೆ ತಿಳಿಸಿದರು. ಪ್ರತಿಯೊಬ್ಬ ಪುರುಷರ ಸಾಧನೆಯ ಹಿಂದೆ ಮಹಿಳೆಯ ಪಾತ್ರ, ತಾಯಿಯಾಗಿ, ಸಹೋದರಿಯಾಗಿ, ಹೆಂಡತಿಯಾಗಿ, ಮಗಳಾಗಿ, ಅಜ್ಜಿಯಾಗಿ, ಸ್ನೇಹಿತೆಯಾಗಿ ಇರುತ್ತಾಳೆ, ಉದಾಹರಣೆಗೆ, ಸರ್. ಎಂ. ವಿಶ್ವೇಶ್ವರಯ್ಯ, ಸ್ವಾಮಿ ವಿವೇಕಾನಂದ,

ಮುಂತಾದ ಮಹನೀಯರ ಸಾಧನೆಗೆ ಸ್ತ್ರೀಯರ ಪಾತ್ರ ಯಾವ ರೀತಿ ಇತ್ತು ಎಂದು ತಿಳಿಸಿದರು.

ವಿಶ್ವ ಸಂಸ್ಥೆಯು ಪ್ರತಿ ವರ್ಷವೂ ಮಾರ್ಚ್ 8 ರಂದು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಹೊಸ ಹೊಸ ಥೀಮ್ ನೊಂದಿಗೆ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ವರ್ಷದ ಧ್ಯೇಯವಾಕ್ಯವನ್ನು (ಥೀಮ್) "ಮಹಿಳೆಯರಲ್ಲಿ ಹೂಡಿಕೆ ಮಾಡಿ ಪ್ರಗತಿಯನ್ನು ವೇಗಗೊಳಿಸಿ" ("ಇನ್ ಸ್ಪೈರ್ ಇನ್ ಕ್ಲೂಷನ್") ಎಂದು ಘೋಷಿಸಿದೆ. ಈ ಅಭಿಯಾನವು ಸಮಾಜದ ಎಲ್ಲಾ ಅಂಶಗಳಲ್ಲಿ ವೈವಿಧ್ಯತೆ ಮತ್ತು ಸಬಲೀಕರಣದ ಮಹತ್ವವನ್ನು ಒತ್ತಿ ಹೇಳುತ್ತದೆ. ಅಲ್ಲದೆ ಅಭಿಯಾನದ ವಿಷಯವು ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಸೇರ್ಪಡೆಯು ನಿರ್ಣಾಯಕ ಪಾತ್ರವನ್ನು ಒತ್ತಿಹೇಳುತ್ತದೆ. ಈ ನಿಟ್ಟಿನಲ್ಲಿ ಸ್ನೇಹಾ ಅಸೋಸಿಯೇಷನ್‌ನ ಸದಸ್ಯರು ಪ್ರತಿ ವರ್ಷದಂತೆ ಈ ವರ್ಷವೂ ಮಹಿಳಾ ದಿನಾಚರಣೆಯನ್ನು ಒಟ್ಟು ಸೇರಿ ಆಚರಿಸಿದ್ದು ಅರ್ಥಪೂರ್ಣವಾಗಿತ್ತು.

ಅಸೋಸಿಯೇಷನ್‌ನ ಉಪಾಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಮಹಲಿಂಗಪ್ಪ ಅವರು ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು. ಜಂಟಿ ಕಾರ್ಯದರ್ಶಿಯಾದ ಶ್ರೀಮತಿ ವಿಮಲಾ ರಂಗನಾಥ್ ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ನಂತರ ಸದಸ್ಯರೆಲ್ಲಾ ಸೇರಿ ಸಂಘದ ಆವರಣದಲ್ಲಿ ಅತಿಥಿಗಳೊಂದಿಗೆ ಸಮೂಹ ಫೋಟೋ ತೆಗೆಸಿಕೊಂಡೆವು ಹಾಗು ಶುಚಿ ರುಚಿಯಾಗಿ ತಯಾರಿಸಿದ ಶರೀಫ್ ಅಣ್ಣನವರ ಕೆಎಫ್‌ಸಿ ಯ ಊಟವನ್ನು ಸವಿದು ಸಂಭ್ರಮಿಸಿದೆವು.

ವರದಿ : ***ಶ್ರೀಮತಿ ವಿಮಲಾ ರಂಗನಾಥ್***
ಜಂಟಿ ಕಾರ್ಯದರ್ಶಿ
ಸ್ನೇಹಾ ದೆಹಲಿ ಕನ್ನಡ ಲೇಡೀಸ್
ಅಸೋಸಿಯೇಷನ್, ನವದೆಹಲಿ

## ಗುರುಗಾಂವ್ ಕನ್ನಡ ಸಂಘದ ವತಿಯಿಂದ ವಿಜೃಂಭಣೆಯಿಂದ ಆಚರಿಸಿದ ಸಂಕ್ರಾಂತಿ ಮಿಲನ ಮತ್ತು ವಾರ್ಷಿಕ ಆಟೋಟಗಳ ಸ್ಪರ್ಧೆಗಳು

ಬಂಧುಗಳೇ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಭಾನುವಾರ 04.02.2024ರಂದು ಸಂಕ್ರಾಂತಿ ಮಿಲನ ಮತ್ತು ವಾರ್ಷಿಕ ಆಟೋಟಗಳ ಸ್ಪರ್ಧೆಗಳನ್ನು ಜಿಎವಿ ಸ್ಕೂಲ್ ಗ್ರೌಂಡ್, ಸೆಕ್ಟರ್–7 ಎಕ್ಸ್‌ಟೆನ್ಷನ್, ಗುರುಗಾಂವ್‌ನಲ್ಲಿ ಬಹಳ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮವು ಬೆಳಗ್ಗೆ 10 ಗಂಟೆಗೆ ಶುರುವಾಗಿ ಸಾಯಂಕಾಲ 06 ಗಂಟೆಗೆ ಮುಕ್ತಾಯವಾಯಿತು.

ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ, ವಯಸ್ಕರಿಗೆ ಹಾಗೂ ಹಿರಿಯರಿಗೆ ವಿವಿಧ ರೀತಿಯ ಆಟೋಟಗಳ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಇದಕ್ಕೆ ಒಂದು ದಿನ ಮುಂಚೆ ಕಾರ್ಯಕ್ರಮ ಆಚರಿಸುವ ಬಗ್ಗೆ ಸ್ವಲ್ಪ ಆತಂಕವಿತ್ತು ಏಕೆಂದರೆ ಇಂದ್ರದೇವನ ಕರುಣೆಯಿಂದ ಶನಿವಾರ ಮಳೆರಾಯನ ಆಗಮನವಾಗಿತ್ತು. ಇದರಿಂದ, ಆಟೋಟ ಮೈದಾನ ಹನಿ ಹನಿ ಮಳೆಯಲ್ಲಿ ಒದ್ದೆಯಾಗಿತ್ತು ಮತ್ತು ಭಾನುವಾರ ಬೆಳಿಗ್ಗೆ ಮತ್ತೊಂದು ಸಲ ಮಳೆಯಾಗುವ ಮುನ್ಸೂಚನೆ ಇತ್ತು. ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು ಎಲ್ಲಾ ತಯಾರಿ ನಡೆದಿತ್ತು ಬೆಳಿಗ್ಗೆ ಆಚರಿಸಬೇಕು ಅಥವಾ ಬೇಡ ಎನ್ನುವ ಬಗ್ಗೆ ವಿಚಾರಿಸಲಾಯಿತು. ಕೊನೆಯಲ್ಲಿ ಧೈರ್ಯ ಮಾಡಿ ಮಳೆ ಬಂದರೆ ಕೇವಲ ಕಾರ್ಯಕರ್ತರು ಮಾತ್ರ ಭಾಗವಹಿಸಬೇಕು ಎಂದು ನಿರ್ಧಾರ ಮಾಡಿ ಕಾರ್ಯಕ್ರಮ ಶುರು ಮಾಡಿದೆವು. ಆದರೆ ಸೂರ್ಯನ ಕೃಪೆ ಮತ್ತು ವರುಣನ ಶಾಂತಿಯಿಂದ ನಮ್ಮ ಆಟೋಟ ಕಾರ್ಯಕ್ರಮಗಳು ಸುಮಾರು 50 ಜನರ ಮಧ್ಯೆ ಸಂಕ್ರಾಂತಿ ಮಿಲನದ ಎಳ್ಳು ಬೆಲ್ಲ ಹಂಚುವುದರಿಂದ ಆರಂಭವಾದವು. ನೋಡ ನೋಡುತ್ತಿದ್ದಂತೆ 100 ರಿಂದ 150 ಗುರುಗಾಂವ್ ಕನ್ನಡಿಗರು ಜೊತೆಗೂಡಿ ಕೊನೆಗೆ 200 ಜನರು ಸೇರುವುದರ ಜೊತೆ ಆಟೋಟ ಸ್ಪರ್ಧೆಗಳು ಅತ್ಯಂತ ವೇಗವಾಗಿ ನಡೆಯಲು ಶುರುವಾಗಿದ್ದವು. ಇದರಲ್ಲಿ ಮಕ್ಕಳು, ವಯಸ್ಕರು ಮತ್ತು ಹಿರಿಯರು ಉತ್ಸುಕರಾಗಿ ಉಲ್ಲಾಸದಿಂದ ಭಾಗವಹಿಸಿ, ಅವರವರ ವಿಭಾಗಕ್ಕೆ ತಕ್ಕಂತೆ ಬಹುಮಾನಗಳನ್ನು ಗೆದ್ದರು. ಹಿರಿಯರು ಭಾಗವಹಿಸಿದ್ದು ಈ ಕಾರ್ಯಕ್ರಮಕ್ಕೆ ಮೆರಗನ್ನು ತಂದಿತ್ತು.

ಇದರ ಜೊತೆಗೆ ಉಚಿತ ಮೆಡಿಕಲ್ ಚೆಕಪ್ ಕ್ಯಾಂಪ್ ಅನ್ನು ಡಾ. ಸಿಂಗಾರಿ ಪೋಲಾರೈಸ್ ಹಾಸ್ಪಿಟಲ್ ನಡೆಸಿಕೊಟ್ಟರು ಇದರ ಉಪಯೋಗವನ್ನು ಸೇರಿದ್ದ







ಕನ್ನಡಿಗರು ಪಡೆದುಕೊಂಡರು.

ಮಲಬಾರ್ ಗೋಲ್ಡ್ ಅವರಿಂದ ಪ್ರಾಯೋಜಿತ ಬಹುಮಾನದ ಉಡುಗೊರೆಗಳು ಸ್ಪರ್ಧೆಗಳಲ್ಲಿ ಗೆದ್ದವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದ್ದವು. ಈ ಕಾರ್ಯಕ್ರಮಕ್ಕೆ ಎಲೆಮರೆ ಕಾಯಿಯಂತೆ ಹಲವಾರು ಗಣ್ಯರು ಸಹಾಯ ಮಾಡಿದ್ದರು. ಈ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ, ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ, ಖಜಾಂಚಿ ಶ್ರೀ ಮರಿಬಸಪ್ಪ, ಉಪಾಧ್ಯಕ್ಷರು ಶ್ರೀ ರಾಜಕುಮಾರ ನಿಲೂರ, ಮತ್ತು ಮಹಿಳಾ ಉಪಾಧ್ಯಕ್ಷರು ಶ್ರೀಮತಿ ಮಾಲ ರಮೇಶ್ ಅವರ ಮತ್ತು ಸಮಸ್ತ ಪದಾಧಿಕಾರಿಗಳ ಪರಿಶ್ರಮದಿಂದ ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಜೊತೆಯಲ್ಲಿ ಹಿರಿಯರಾದ ಶ್ರೀ ಶಾಂತ ಕುಮಾರ ನಿಂಬಾಳ್, ಶ್ರೀ ಸಾಯಿಪ್ರಸಾದ್, ಶ್ರೀ ನಾಗಭೂಷಣ ಹಾಗು ಶ್ರೀ ಡಿವಿಸ್ ಮೂರ್ತಿ ಅವರಿಂದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳ ವಿತರಣೆ ಮಾಡುವ ಮೂಲಕ ಕಾರ್ಯಕ್ರಮ ಸುಸೂತ್ರವಾಗಿ ನೇರವೇರಿತು. ಈ ಕಾರ್ಯಕ್ರಮದಲ್ಲಿ ತನು ಮನುದಿಂದ ಕಾರ್ಯ ನಿರ್ವಹಿಸಿದ ಎಲ್ಲಾ ಸದಸ್ಯರಿಗೆ, ಹಿರಿಯರಿಗೆ ಹಾಗು ಭಾಗವಹಿಸಿದ ಎಲ್ಲಾ ಕನ್ನಡ ಬಂಧುಗಳಿಗೆ ಹೃದಯ ಪೂರ್ವಕ ಧನ್ಯವಾದಗಳು.

ವರದಿ : ***ಶ್ರೀ ಚಂದ್ರಶೇಖರ ಜೋಳದರಾಶಿ***
ಪ್ರಧಾನ ಕಾರ್ಯದರ್ಶಿ
ಗುರುಗಾಂವ್ ಕನ್ನಡ ಸಂಘ

# ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಗುಣಮಟ್ಟದ ಶಿಕ್ಷಣ ಕುರಿತು ದೆಹಲಿ ಕನ್ನಡ ಶಾಲೆಯಲ್ಲಿ ವಿಶೇಷ ಕಾರ್ಯಾಗಾರ



ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಗುಣಮಟ್ಟದ ಶಿಕ್ಷಣ ಕುರಿತಾದ ಒಂದು ದಿನದ ವಿಶೇಷ ಕಾರ್ಯಾಗಾರವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕರಿಗಾಗಿ ದಿನಾಂಕ 30.03.2024ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿಯ ಹಿರಿಯ ಸದಸ್ಯ, ಜೆಎನ್‌ಯು ಕಾನೂನು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ಮಾತೃಭಾಷೆಗೆ ಸಮಾನವಾದ ಭಾಷೆಯಿಲ್ಲ. ಮಕ್ಕಳು ಮಾತೃಭಾಷೆಯ ಮೂಲಕವೇ ಎಲ್ಲವನ್ನು ಅತಿವೇಗವಾಗಿ ಕಲಿಯುತ್ತಾರೆ. ಕಲಿಕೆ ಮತ್ತು ಶಿಸ್ತಿಗೆ ಹೆಚ್ಚಿನ ಆದ್ಯತೆ ಕೊಡುವ ನಾವು ಮಕ್ಕಳ ಬೌದ್ಧಿಕ ಮಟ್ಟವನ್ನು ತಿಳಿಯಬೇಕು, ತಲುಪಬೇಕು. ಬೋಧನೆ ಅನ್ನುವುದು ಇಂದು ಕೇವಲ ವೃತ್ತಿಯಾಗಿ ಉಳಿದಿಲ್ಲ. ಅದೊಂದು ಸವಾಲು ಎಂಬುದನ್ನು ಶಿಕ್ಷಕರು ಪರಿಗಣಿಸಬೇಕು ಎಂದು ಹೇಳಿದರು. ಶಾಲಾ ಗೌರವ ವ್ಯವಸ್ಥಾಪಕ ಶ್ರೀ ಉಮೇಶ್ ಬಿ.ಆರ್. ಅವರು ಮಾತನಾಡಿ ಕಲಿಕೆಯ ಪ್ರಕ್ರಿಯೆಯಲ್ಲಿ ಇಂತಹ ಕಾರ್ಯಾಗಾರಗಳು ಶಿಕ್ಷಕರಿಗೆ ಹೊಸ ಕಲಿಕಾ ತಂತ್ರಗಳನ್ನು, ನವ ಉಲ್ಲಾಸವನ್ನು ನೀಡುತ್ತವೆ. ಸಾಂಪ್ರದಾಯಿಕ ಹಾಗೂ ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನವನ್ನು ಹೇಗೆ ಸಮನ್ವಯಗೊಳಿಸುವುದು ಎಂಬುದನ್ನು ತಿಳಿಸಲು ಕೂಡ ಸಹಾಯಕವಾಗುತ್ತದೆ ಎಂದು ತಿಳಿಸಿದರು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ಅರಾವಳಿ ಫೌಂಡೇಶನ್ ಇದರ ನಿರ್ದೇಶಕಿ, ಲೇಖಕಿ, ಶಿಕ್ಷಣತಜ್ಞೆ ಡಾ. ಎನ್. ಮಾಧುರಿ ಪಾರ್ತಿ ಅವರು ಮಾತನಾಡಿ ಗುಣಾತ್ಮಕ ಶಿಕ್ಷಣ ವ್ಯಕ್ತಿಯ ಬದುಕಿನ ಸರ್ವಾಂಗೀಣ ಅಭಿವೃದ್ಧಿಗೆ ಮಾತ್ರವಲ್ಲ ರಾಷ್ಟ್ರದ ಏಳಿಗೆಗೂ ಅವಶ್ಯಕವಾಗಿದೆ. ಜ್ಞಾನಾಧಾರಿತ, ಉದ್ಯೋಗಾಧಾರಿತ ಎಂದರು.

ಶಿಕ್ಷಣವನ್ನು ಸರಳೀಕರಿಸುವ ಕಾಲದಲ್ಲಿ ನಾವಿಲ್ಲ. ವಿದ್ಯಾರ್ಥಿಗಳಲ್ಲಿ 12 ಕಲಿಕಾ ಶೈಲಿಗಳಿವೆ. ಪ್ರತಿಯೊಬ್ಬ ಮಗುವಿನ ಆಲೋಚನಾ ಕ್ರಮವನ್ನು ತಲುಪುವ ವಿಧಾನ, ತಂತ್ರಗಳು ಶಿಕ್ಷಕನಿಗೆ ತಿಳಿದಿರಬೇಕು. ತರಗತಿಗಳು ಪ್ರಯೋಗ ಶಾಲೆಗಳಾಗಬೇಕೇ ಹೊರತು ಕಾರ್ಖಾನೆಗಳಲ್ಲ. ವ್ಯವಸ್ಥೆ, ಕಾನೂನುಗಳು ಏನೇ ಇರಲಿ ತರಗತಿಯೊಳಗೆ ಪ್ರತಿಯೊಬ್ಬ ಶಿಕ್ಷಕನು ಸ್ವತಂತ್ರ. ಮಗುವಿನಲ್ಲಿರುವ ಬಹುಸಾಮರ್ಥ್ಯವನ್ನು, ಸೃಜನಶೀಲ ಶಕ್ತಿಯನ್ನು ಗುರುತಿಸುತ್ತಾ, ಕಲಿಕೆಯ ಉದ್ದೇಶಿತ ವಾತಾವರಣವನ್ನು ನಿರ್ಮಾಣ ಮಾಡುವ ಕಲೆ ಶಿಕ್ಷಕರಲ್ಲಿ ಒಳಗೊಂಡಿರಬೇಕು. ಆ ನೆಲೆಯಲ್ಲಿ ಶಿಕ್ಷಕನು ತಾನು ಪ್ರಯೋಗಶೀಲತೆಯೊಂದಿಗೆ ಜ್ಞಾನ ಸಂಪನ್ನನಾಗಬೇಕು ಎಂದು ಹೇಳಿದರು.ಕಾರ್ಯಾಗಾರದ ಕೊನೆಗೆ ಶಿಕ್ಷಕರಿಗೆ ಅನೇಕ ಚಟುವಟಿಕೆಗಳನ್ನು ನಡೆಸುವ ಮೂಲಕ ತರಗತಿ ನಿರ್ವಹಣೆ ತಂತ್ರಗಳನ್ನು ತಿಳಿಸಲಾಯಿತು. ಕಾರ್ಯಾಗಾರದ ಕುರಿತಾಗಿ ಉಪನ್ಯಾಸಕಿ ಶ್ರೀಮತಿ ಸೌಮ್ಯ ಎನ್.ಎಂ., ಶಿಕ್ಷಕರಾದ ಶ್ರೀ ಎಚ್.ಎಸ್. ತೇಲಿ, ಶ್ರೀಮತಿ ವಂದನಾ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ, ಶಾಲಾ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಉಪಸ್ಥಿತರಿದ್ದರು. ಶಾಲಾ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಅವರು ಅತಿಥಿಗಳನ್ನು ಹಾಗೂ ನೆರೆದಿದ್ದವರೆಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ನಿರೂಪಿಸಿದ ಕು. ಬಿದಿಶಾ ಅವರು ಕೊನೆಯಲ್ಲಿ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ವರದಿ : **ಶ್ರೀ ಅರವಿಂದ ಬಿಜ್ಜೈ**
ಕನ್ನಡ ಶಿಕ್ಷಕರು ದೆ.ಕ.ಹಿ.ಮಾಧ್ಯಮಿಕ ಶಾಲೆ,
ನವದೆಹಲಿ




## ಅಭಿನಂದನೆ



ಚಿ ||ರಾ || ಅನಿಲ್ ಕುಮಾರ್ ಮತ್ತು
ಚಿ||ಸೌ|| ಶಿವಾಣಿ







ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ

ಚಿ.ರಾ. || ಅನಿಲ್ ಕುಮಾರ್ ಅವರ ವಿವಾಹವು

ಚಿ||ಸೌ|| ಶಿವಾಣಿ

ಅವರೊಂದಿಗೆ

ದಿನಾಂಕ 02.03.2024 ರಂದು ನವದೆಹಲಿಯ ಮಯೂರ್ ವಿಹಾರ್ ಫೇಸ್- 1 ರಲ್ಲಿ ನಡೆಯಿತು.

ಶ್ರೀ ಅನಿಲ್ ಕುಮಾರ್ ದಂಪತಿಗಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅವರ ವೈವಾಹಿಕ ಜೀವನಕ್ಕೆ

ಹಾರ್ದಿಕ ಶುಭಾಶಯಗಳು ಮತ್ತು ದೆಹಲಿ ಕನ್ನಡಿಗರಿಂದ

**ಅಭಿನಂದನೆಗಳು**


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS

A HOUSE OF QUALITY PRINTING
B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
April-2024, Vol. No.34, Issue No. 7, Price Rs.1/-
RNI Regn. No. 53405/91, DL-SW-01/4016/22-24
Date of Publication : April 8th / 9th, Posting Date : 10th / 11th, Total Pages-24 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

## 31.03.2024 ರಂದು ಸಂಘದಲ್ಲಿ ಆಯೋಜನೆಗೊಂಡ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಆಯ್ದ ಛಾಯಾಚಿತ್ರಗಳು


ಮುಖ್ಯ ಅತಿಥಿ ಡಾ. ರಾಜೇಶ್ವರಿ ಎಸ್. ಮಲ್ಲೇಗೌಡ ಅವರನ್ನು ಅಭಿನಂದಿಸುತ್ತಿರುವ ದೃಶ್ಯ


ಮುಖ್ಯ ಅತಿಥಿ ಶ್ರೀಮತಿ ಎಸ್. ಕೀರ್ತಿಶ್ರೀ ಅವರನ್ನು ಅಭಿನಂದಿಸಿದ ಕ್ಷಣ


ಸಮೂಹ ಗಾಯನ ದೆಹಲಿ ಕನ್ನಡ ಶಾಲಾ ಶಿಕ್ಷಕಿಯರಿಂದ


ಸಮೂಹ ಗಾಯನ ಸ್ನೇಹಾ ಮಹಿಳೆಯರಿಂದ


ಮನಮೋಹಕ ನೃತ್ಯ–ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಮಹಿಳೆಯರಿಂದ

ಸಮೂಹ ಗಾಯನ ಗೋಕರ್ಣ ಮಂಡಲ ಮಹಿಳೆಯರಿಂದ





ಸಂಘದ ಮಹಿಳಾ ಸದಸ್ಯರಿಂದ ಗೀತ ಗಾಯನ







ಮಹಿಳಾ ಕಲಾವಿದರು ಅಭಿನಯಿಸಿದ ಖುಲ್‌ಜಾ ಸಿಮ್ ಸಿಮ್ ನಾಟಕದ ದೃಶ್ಯಗಳು


ಎನ್.ಎಸ್.ಡಿ. ಕಲಾ ನಿರ್ದೇಶಕಿ ಶ್ರೀಮತಿ ಮೀತಾ ಮಿಶ್ರ ಅವರನ್ನು ಅಭಿನಂದಿಸುತ್ತಿರುವುದು


ಖುಲ್‌ಜಾ ಸಿಮ್ ಸಿಮ್ ನಾಟಕದಲ್ಲಿ ಮಹಿಳಾ ಕಲಾವಿದರು